ಲಾಗುವುದೆಂದು ಮಾನ್ಯ ಲೋಕೋಪಯೋಗಿ ನೀರಾವರಿ ಸಚಿವರು ಸ್ಥಳದಲ್ಲೂ, ಸದನದಲ್ಲೂ ಆಶ್ವಾಸನೆ ಇತ್ತಿದ್ದರು. ಇದನ್ನು ನಂಬಿದ ಜನ ಅತ್ಯಂತ ಹರ್ಷ ಪಟ್ಟಿದ್ದರು. ಆದರೆ ಕಾರ್ಯಾರಂಭ ಆಗುವ ಯಾವುದೇ ಸೂಚನೆ ಈಗ ಕಾಣುತ್ತಿಲ್ಲ, ರಸ್ತೆ ಕೆಲಸ ಮಾತ್ರ ಆಗುತ್ತಿದೆ. ಅದೂ ಗ್ರಾಮಸ್ಥರು, ಮಂಡಲ ಪಂಚಾಯಿತಿಯವರು, ಜಿಲ್ಲಾ ಪರಿಷತ್‌ನವರು, ಶಾಸಕರು ಸೂಚಿಸಿದ ಕಡೆ ಆಗದೆ ಕಾಡಿನ ಮಧ್ಯೆ ಆಗುತ್ತಿದೆ. ಯೋಜನೆಯ ಶೀಘ್ರ ಕಾರ್ಯಾರಂಭವಾಗಬೇಕು, ರಸ್ತೆ ನಿಯೋಜಿತ ಸೇತುವೆ, ಜನ ಸಂಚಾರ ಅಧಿಕ ಇರುವ ಭಾಗದಲ್ಲಿ ಆಗಬೇಕು. ಆತನಕ ಮಂಜೂರಾದ ರಸ್ತೆ ಕಾಮಗಾರಿ ತಡೆಹಿಡಿಯಬೇಕು ಎಂದು ಒತ್ತಾಯಿಸುತ್ತೇನೆ.

(ಮಾನ್ಯ ಅಧ್ಯಕ್ಷರು ತಮ್ಮ ಪೀಠವನ್ನಲಂಕರಿಸಿದರು)

ಶ್ರೀ ಎಂ. ರಘುಪತಿ.—ಮಾನ್ಯ ಪಿ. ಡಬ್ಲ್ಯೂ. ಡಿ. ಮಂತ್ರಿಗಳ ಗಮನಕ್ಕೆ ಈ ವಿಷಯವನ್ನು ತಂದು ಉತ್ತರ ತಿಳಿಸುವುದಕ್ಕೆ ಹೇಳುತ್ತೇನೆ.

(೨೨) ಬಾಗೇಪಲ್ಲಿ ತಾಲ್ಲೂಕಿನ ಗಡಿದಮ್ ಕೆರೆಯಂಗಳದಲ್ಲಿ ಸಾಗುವಳಿ ಮಾಡುತ್ತಿರುವವರನ್ನು ಬಿಡಿಸುವುದು

ಶ್ರೀ ಬಿ. ನಾರಾಯಣಸ್ವಾಮಿ.—ಕೋಲಾರ ಜಿಲ್ಲೆ ಬಾಗೇಪಲ್ಲಿ ತಾಲ್ಲೂಕಿನ ಗಡಿದಮ್ ಕೆರೆಯಂಗಳದಲ್ಲಿ ಜಮೀನನ್ನು ರೈತರಿಗೆ ಬಾಗೇಪಲ್ಲಿ ತಾಲ್ಲೂಕು ರೆವಿನ್ಯು ಅಧಿಕಾರಿಗಳು ಮಂಜೂರು ಮಾಡಿದ್ದು ರೈತರು ಸದರಿ ಜಮೀನಿನಲ್ಲಿ ಬೋರ್‌ವೆಲ್ ಹಾಕಿರುತ್ತಾರೆ. ಹಾಗೂ ವಿದ್ಯುಚ್ಛಕ್ತಿ ಇಲಾಖೆಯವರು ವಿದ್ಯುತ್ ಕೂಡ ಒದಗಿಸಿದ್ದಾರೆ. ಕೆರೆಗೆ ನೀರು ಬಂದ ಸಮಯದಲ್ಲಿ ಸದರಿ ಜಮೀನಿನ ರೈತರು ತೂಬನ್ನು ಎತ್ತಿ ಕೆರೆಯಿಂದ ನೀರು ಹೋಗುವಂತೆ ಮಾಡುತ್ತಾರೆ. ಕಾರಣ ನೀರು ತುಂಬಿಕೊಂಡಲ್ಲಿ ಮೇಲ್ಕಂಡ ಜಮೀನು ಮುಳುಗಡೆಯಾಗುತ್ತದೆ. ಇದರಿಂದಾಗಿ ಕೆರೆಯ ಕೆಳಗಿನ ನೂರಾರು ರೈತರಿಗೆ ಬಹಳ ತೊಂದರೆಯಾಗುತ್ತಿದ್ದು ಅವರು ಫಸಲು ತೆಗೆಯಲು ಆಗುತ್ತಿಲ್ಲ. ಈ ಒಂದು ಪ್ರಕರಣ ನನ್ನ ಗಮನಕ್ಕೆ ಬಂದಿದ್ದು, ಇಂತಹ ಪ್ರಕರಣಗಳು ಜಿಲ್ಲೆಯಲ್ಲಿ ಇನ್ನೂ ಇರಬಹುದೆಂದು ಕಂಡು ಬರುತ್ತದೆ. ಆದ್ದರಿಂದ ಸರಕಾರದವರು ಕೂಡಲೇ ತನಿಖೆ ನಡೆಸಿ ಜಿಲ್ಲೆಯ ಯಾವ ಕೆರೆಯನ್ನಾಗಲೀ ಈ ರೀತಿ ಮಂಜೂರು ಮಾಡಿದಲ್ಲಿ ಅವುಗಳನ್ನು ಹಾಗೂ ಅನಧಿಕೃತವಾಗಿ ಸಾಗುವಳಿ ಮಾಡುತ್ತಿರುವ ರೈತರುಗಳ ಜಮೀನು ಬಿಡಿಸಿ ಕೆರೆಯ ಕೆಳಗಡೆ ಫಸಲು ಮಾಡುತ್ತಿರುವ ರೈತರಿಗೆ ಅನುಕೂಲ ಮಾಡಬೇಕೆಂದು ಹಾಗೂ ಈ ರೀತಿ ಸರಕಾರೀ ಯಂತ್ರವನ್ನು ದುರುಪಯೋಗ ಪಡಿಸಿಕೊಂಡ ಅಧಿಕಾರಿಗಳ ಮೇಲೆ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಸರಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಎಂ. ರಘುಪತಿ.—ಮಾನ್ಯ ರೆವಿನ್ಯೂ ಮಂತ್ರಿಗಳಿಗೆ ಹೇಳಿ ಇದಕ್ಕೆ ಉತ್ತರ ತರಿಸಿ ಕೊಡುತ್ತೇನೆ.

ಅಲ್ಪಕಾಲಾವಧಿ ಚರ್ಚೆ (ಮುಂದುವರೆದ ಚರ್ಚೆ)

ಎಂ.ಸಿ.ಎಫ್ ಹಾಗೂ ಹತ್ತಿಗಿರಣಿ ಇತರ ಕೈಗಾರಿಕೆಯಲ್ಲಿ ತಲೆದೋರಿರುವ ಮುಗ್ಗಟ್ಟಿನ ಬಗ್ಗೆ

ಶ್ರೀ ಎಂ. ಎಸ್. ಕೃಷ್ಣನ್ (ರಾಜಾಜಿನಗರ).—ಸನ್ಮಾನ್ಯ ಅಧ್ಯಕ್ಷರೇ, ನಿನ್ನೆ ದಿವಸ ನಾನು ಕೈಗಾರಿಕೆಗಳಲ್ಲಿನ ಮುಗ್ಗಟ್ಟು ವಿಚಾರದಲ್ಲಿ ಮತ್ತು ಅದರಲ್ಲಿಯೂ ಟೆಕ್ಸ್‌ಟೈಲ್ ಮತ್ತು ಇಂಜಿನಿಯರಿಂಗ್ ಕೈಗಾರಿಕೆಗಳ ಪರಿಸ್ಥಿತಿ ಬಗ್ಗೆ ಹೇಳುತ್ತಿದ್ದೆ. ಅದನ್ನು ನಾನು ಮತ್ತೆ ಪುನರುಚ್ಚಾರ ಮಾಡುವುದಕ್ಕೆ ಹೋಗುವುದಿಲ್ಲ ಇವತ್ತು ಮುಗ್ಗಟ್ಟು ಟೆಕ್ಸ್‌ಟೈಲ್ ಕೈಗಾರಿಕೆಗಳಿಗೆ ಮಾತ್ರವಲ್ಲ ಎಲ್ಲಾ ಕೈಗಾರಿಕೆಗಳಲ್ಲಿಯೂ ಸಾರ್ವತ್ರಿಕವಾಗಿದೆ. ಇಂಜಿನಿಯರಿಂಗ್ ಕೈಗಾರಿಕೆ ಇರಬಹುದು, ಲೆದರ್ ಕೈಗಾರಿಕೆ ಇರಬಹುದು ಷುಗರ್ ಕೈಗಾರಿಕೆ ಇರಬಹುದು, ಎಲ್ಲಾ ಕಡೆಯೂ ಇದೆ. ಶೇಕಡ ೩೦ ರಷ್ಟು ಕೈಗಾರಿಕೆಗಳಲ್ಲಿ ಮುಗ್ಗಟ್ಟು ಇದೆಯೆಂದು ಮಾನ್ಯ ಜೀವಿಜಯರು ಒಂದು ಕಡೆ ಹೇಳಿದ್ದಾರೆ. ಮುಗ್ಗಟ್ಟಿನಲ್ಲಿವೆ ಇಲ್ಲವೇ ಮುಚ್ಚುವಂಥ ಪರಿಸ್ಥಿತಿಯಲ್ಲಿದೆ ಎಂದು ಹೇಳಿದ್ದಾರೆ. ಮತ್ತೆ ಅದನ್ನು ನಿರಾಕರಿಸುವ ರೀತಿಯಲ್ಲಿ ಯಾರೂ ಹೇಳಿಕೆ ಕೊಟ್ಟಿಲ್ಲ ಸುಮಾರು ೬,೦೦೦ ಸಣ್ಣ ಕೈಗಾರಿಕೆಗಳು ಮುಚ್ಚಿ ಹೋಗಿವೆ ಎಂದು ಸುಮಾರು ೬ ತಿಂಗಳ ಹಿಂದೆ ಹೇಳಿದ್ದರು. ಇವತ್ತು ಇನ್ನೂ ಜಾಸ್ತಿಯಾಗಿರಬಹುದು. ಇವತ್ತು ಟೆಕ್ಸ್‌ಟೈಲ್ ಕೈಗಾರಿಕೆ ತೆಗೆದು

ಕೊಂಡರೆ, ಅಲ್ಲೂ ಕೂಡ ಇದೇ ಪರಿಸ್ಥಿತಿ ಇದೆ. ನನಗೆ ನಿನ್ನೆ ಒಂದು ಪತ್ರ ಬಂದಿದೆ. ಬಿಜಾಪುರ ಸಹಕಾರಿ ನೂಲಿನ ಗಿರಣಿಯಲ್ಲೂ ಕೂಡ ತೊಂದರೆ ಪ್ರಾರಂಭವಾಗಿದ್ದು ಲೇ ಆಫ್ ಮಾಡಬೇಕೆಂದು ಹೇಳುತ್ತಿದ್ದಾರೆ. ಇದನ್ನು ಉಳಿಸಿಕೊಳ್ಳುವುದಕ್ಕೆ ಪ್ರಯತ್ನ ಮಾಡಬೇಕು. ಸುಮಾರು ೫೦೦ ಜನ ಕಾರ್ಮಿಕರು ಕೆಲಸ ಮಾಡುತ್ತಿದ್ದಾರೆ. ೬೯ ಜನ ಸಿಬ್ಬಂದಿ ವರ್ಗದವರು ಇದ್ದಾರೆ. ಇವರೆಲ್ಲಾ ಬೀದಿಪಾಲಾಗುತ್ತಾರೆಂದು ಕಾರ್ಮಿಕರ ಮತ್ತು ನೌಕರರ ಸಂಘದವರು ಒಂದು ದೊಡ್ಡ ಮನವಿ ಕಳುಹಿಸಿದ್ದಾರೆ. ಮೂಲಭೂತ ಸಮಸ್ಯೆ ಏನೆಂದರೆ ಮಿಲ್ಲ್ ಮುಗ್ಗಟ್ಟಿನಲ್ಲಿರುವುದು. ಅಲ್ಲಿನ ಕಾರ್ಮಿಕ ಸಂಘಕ್ಕೆ ಎಂ.ಬಿ. ಮಂಟೂರ್ ಎನ್ನುವವರು ಅಧ್ಯಕ್ಷರಾಗಿದ್ದಾರೆ. ನಮ್ಮ ಶಾಸಕರು ಇರಬಹುದು ಎಂದು ಕಾಣುತ್ತದೆ. ಒಟ್ಟಿನಲ್ಲಿ ಸಹಕಾರಿ ಕ್ಷೇತ್ರದ ಮಿಲ್ಲ್‌ಗಳು ಇರಲಿ, ಖಾಸಗೀ ಕ್ಷೇತ್ರದ ಮಿಲ್ಲ್‌ಗಳು ಇರಲಿ, ಈವತ್ತು ಗಂಭೀರ ಪರಿಸ್ಥಿತಿ ಇದ್ದು ಕಾರ್ಮಿಕರು ಬೀದಿ ಪಾಲಾಗ ತಕ್ಕಂಥ ಪರಿಸ್ಥಿತಿ ಇದೆ. ದೊಡ್ಡ ದೊಡ್ಡ ಕೈಗಾರಿಕೆಗಳು ಕೇಂದ್ರ ಸರ್ಕಾರದ ಸ್ವಾಮ್ಯದಲ್ಲಿರುವ ಕೈಗಾರಿಕೆಗಳು. ಹಿಂದೂಸ್ಥಾನ್ ಮಿಷನ್ ಟೂಲ್ಸ್, ಮತ್ತಿತರ ಕೈಗಾರಿಕೆಗಳು ಮುಗ್ಗಟ್ಟು ಎದುರಿಸುತ್ತಿಲ್ಲ. ವಿ.ಐ.ಎಸ್.ಎಲ್. ನಲ್ಲಿ ಬೇರೆ ತೊಂದರೆ ಇದೆ. ಇದನ್ನು ತೆಗೆದುಕೊಳ್ಳಬೇಕೆಂದು ಕೇಂದ್ರಕ್ಕೆ ಹೇಳುತ್ತಿದ್ದಾರೆ. ಕೇಂದ್ರದವರು ತೆಗೆದುಕೊಳ್ಳತಕ್ಕ ಯೋಚನೆ ಮಾಡುತ್ತಿಲ್ಲ. ಪ್ರತಿದಿನ ಕೋಟಿ ಗಟ್ಟಲೆ ಹಣ ನಷ್ಟವಾಗುತ್ತಿದೆ. ಇವತ್ತು ರಾಜ್ಯದಲ್ಲಿರುವ ಕೈಗಾರಿಕೆಗಳಲ್ಲಿ ೫೦ ಪರ್ಸೆಂಟ್ ಪ್ರೊಡಕ್ಷನ್ ಕ್ಯಾಪಾಸಿಟಿ ಇಲ್ಲ. ಮಾನ್ಯ ಮೊಹಿದ್ದೀನ್‌ರವರು ಪಿ.ಯು.ಸಿ. ಛೇರ್ಮನ್ ಆಗಿದ್ದಾಗ ಒಂದು ವರದಿ ಕೊಟ್ಟಿದ್ದಾರೆ. ಇವೊತ್ತಿನ ದಿವಸ ಅವರು ತಮ್ಮ ವರದಿಯಲ್ಲಿ ಪರಿಸ್ಥಿತಿ ಬಹಳ ಕೆಟ್ಟಿದೆ ಎಂದು ಹೇಳಿದ್ದಾರೆ. ಅನಂತರ ಅವರು ಮಂತ್ರಿಗಳಾದರು, ಅವರು ಹೇಗೆ ಮಂತ್ರಿಗಳಾದರೋ ಅದು ನನಗೆ ಗೊತ್ತಿಲ್ಲ, ಅದೆಲ್ಲಾ ನನಗೆ ಬೇಡ. ಒಂದು ಸ್ಪಷ್ಟ ಏನೆಂದರೆ ಪರಿಸ್ಥಿತಿ ಬಹಳ ಕೆಟ್ಟಿದೆ. ಎಷ್ಟು ಅವ್ಯವಹಾರಗಳು ನಡೆದಿದೆ ಎನ್ನುವ ಬಗ್ಗೆ ಅವರು ಹೇಳಿದ್ದಾರೆ. ಕರ್ನಾಟಕ ಸೋಪ್ಸ್ ಅಂಡ್ ಡಿಟರ್‌ಜೆಂಟ್ಸ್ ಬಗ್ಗೆ ಪಬ್ಲಿಕ್ ಅಂಡರ್ ಟೇಕಿಂಗ್ಸ್ ಕಮಿಟಿಯವರು ೨೮ನೇ ವರದಿಯಲ್ಲಿ ಕೊಟ್ಟಿದ್ದಾರೆ. ನಾನು ಇದರ ಬಗ್ಗೆ ಸ್ವಲ್ಪ ಮಾತ್ರ ಹೇಳಲಿಕ್ಕೆ ಇಷ್ಟಪಡುತ್ತೇನೆ, ಎಲ್ಲಾ ಓದಲಿಕ್ಕೆ ಹೋಗುವುದಿಲ್ಲ. ಇದರ ಬಗ್ಗೆ ಹೆಚ್ಚು ವ್ಯಾಖ್ಯಾನ ಮಾಡಲಿಕ್ಕೂ ಹೋಗುವುದಿಲ್ಲ.

> "Releasing the 28th report of the Committee at a press conference here this evening, committee Chairman Mohammed Moienuddin said the committee was of the view that the company committed grave irregularities when it sold imported fatty acid meant for use by end-users only, to Messers Hindustan Lever Limited and Messers Godrej Limited, both soap manufacturers. The 190 page report of the committee said although the company management had informed the Government that it had earned a profit of Rs. 33 lakh in the Rs. two crore deal, in reality, it had incurred losses of Rs. 3.5 lakh in the Hindusthan Lever deal and Rs. 25 lakh "indirect losses" in the Godrej one."

ಈ ತರಹ ಪಬ್ಲಿಕ್ ಅಂಡರ್ ಟೇಕಿಂಗ್ಸ್ ಕಮಿಟಿ ರಿಪೋರ್ಟ್ ಇದೆ. ನಾನೂ ರಹ ಪಬ್ಲಿಕ್ ಅಂಡರ್ ಟೇಕಿಂಗ್ಸ್ ಕಮಿಟಿಯಲ್ಲಿ ಸದಸ್ಯನಾಗಿದ್ದೆ. ಆ ಕಮಿಟಿ ರಿಪೋರ್ಟ್ ತೆಗೆದು ನೋಡಿದರೆ ಬಹಳ ಗಂಭೀರ ಪರಿಸ್ಥಿತಿ ಇದೆ. ನಮ್ಮ ರಾಜ್ಯದಲ್ಲಿ ಪಬ್ಲಿಕ್ ಸೆಕ್ಟರ್ ಕಂಪನಿಗಳು ಲಾಸ್ ಆಗಲಿಕ್ಕೆ ಕಾರಣ ಏನು ಎಂದು ಪಬ್ಲಿಕ್ ಅಂಡರ್ ಟೇಕಿಂಗ್ಸ್ ಕಮಿಟಿಯವರು ಕಂಡುಹಿಡಿದು ವರದಿಯನ್ನು ಕೊಟ್ಟಿದ್ದಾರೆ. ಅದರ ಬಗ್ಗೆ ಸರ್ಕಾರ ಯಾವ ರೀತಿ ಉತ್ತಮಪಡಿಸಬೇಕೆಂದು ಯೋಚನೆ ಮಾಡಿಲ್ಲ ಅದರ ಬಗ್ಗೆ ಕಾಳಜಿ ವಹಿಸಿಲ್ಲ. ಪಬ್ಲಿಕ್ ಅಂಡರ್ ಟೇಕಿಂಗ್ಸ್ ಕಮಿಟಿ ರಿಪೋರ್ಟ್ ಏನಿದೆ ಅದನ್ನು ನೋಡಿ ಕಾರ್ಯಗತ ಮಾಡಿಲ್ಲ, ಆದ್ದರಿಂದ ನಾನು ಅದರ ಬಗ್ಗೆ ಚಾರ್ಜ್ ಮಾಡುತ್ತೇನೆ, ನಾನು ತಮಗೆ ಇಷ್ಟು ಮಾತ್ರ ಹೇಳಬಲ್ಲೆ, ತಾವು ವರದಿಯನ್ನು ಓದಿದ್ದೀರಾ ? ತಾವು ಓದಿದ್ದರೆ, ಆ ವರದಿಯಲ್ಲಿ ಹೇಳಿರ ತಕ್ಕದ್ದು ಏನಿದೆ ಅದನ್ನು ಜಾರಿಯಲ್ಲಿ ತಂದಿದ್ದೀರಾ ? ಅಡ್ಮಿನಿಸ್ಟ್ರೇಷನ್‌ನಲ್ಲಿ ಏನು ನಡೆದಿದೆ, ಪರ್ಚೇಸ್ ಸೇಲ್ಸ್‌ನಲ್ಲಿ ಏನೇನು ದುರ್ವ್ಯವಹಾರ ನಡೆದಿದೆ, ಅದನ್ನು ನೋಡಿ ಅದರ ಬಗ್ಗೆ ಜಾರಿಗೆ ತಂದಿದ್ದೀರಾ ? ೧೫ ಸಾವಿರ, ೨೦ ಸಾವಿರ, ೩೦ ಸಾವಿರ ೪೦ ಸಾವಿರ ರೂಪಾಯಿ ಸಂಬಳವನ್ನು ಒಬ್ಬೊಬ್ಬ ಮ್ಯಾನೇಜಿಂಗ್

ಡೈರೆಕ್ಟರ್ ತೆಗೆದುಕೊಳ್ಳುತ್ತಾರೆ ಅವರಿಗೆ ಬಂಗಲೆ ಇರುತ್ತದೆ, ಕಾರು ಇರುತ್ತದೆ, ವಿಮಾನದಲ್ಲಿ ಲಂಡನ್, ಟೈವಾನ್, ಕೊರಿಯಾ ಇಂತಹ ಕಡೆಗಳಲ್ಲೆಲ್ಲಾ ಹೋಗುತ್ತಿರುತ್ತಾರೆ, ಇವೊತ್ತು ಪಬ್ಲಿಕ್ ಸೆಕ್ಟರ್ ಕೈಗಾರಿಕೆಗಳೆಲ್ಲಾ ನಾಶವಾಗುವ ಪರಿಸ್ಥಿತಿಗೆ ತಂದಿಟ್ಟಿದ್ದಾರೆ. ಈ ಸರ್ಕಾರದ ಹೊಣೆಗಾರಿಕೆ ಇದರಲ್ಲಿ ಇದೆ, ಹಾಗೆಯೇ ಹಿಂದಿನ ಸರ್ಕಾರದ್ದು ಇಲ್ಲ ಎಂದು ಹೇಳುವುದಿಲ್ಲ. ಹಿಂದೆ ಅವರು ಹೊಣೆಗಾರರಾಗಿದ್ದಾರೆ, ಈಗ ಅವರ ಮೇಲೆ ಹೊರೆಸುವುದು ಪ್ರಯೋಜನ ಇಲ್ಲ. ಅವರು ಇದ್ದಾಗಲೂ ಮಾಡಿರುವುದು ತಪ್ಪೇ, ಆಗಿನ ಪರಿಸ್ಥಿತಿಗೆ ಆಗಲೂ ನೆಟ್ಟಗಿದ್ದುದು ಕಾಣಲಿಲ್ಲ. ನೀವು ಬಂದ ಮೇಲಾದರೂ ಚೆನ್ನಾಗಿ ಆಗುತ್ತಿದೆಯೋ ಅಂದರೆ ಇನ್ನೂ ಅಧೋಗತಿಗೆ ಹೋಗುವ ಪರಿಸ್ಥಿತಿಗೆ ಬಂದಿದೆ. ನೀವೂ ನೆಟ್ಟಗೆ ಮಾಡಿಲ್ಲ. ಇನ್ನು ಪ್ರೈವೇಟ್ ಸೆಕ್ಟರ್ ಕೈಗಾರಿಕೆಗಳು ಮುಚ್ಚುತ್ತಿವೆ. ತುಮಕೂರು ಹತ್ತಿರ ಇದ್ದ ಚಾಮುಂಡಿ ಮೊಪೆಡ್ಸ್ ಕೈಗಾರಿಕೆ ಮುಚ್ಚಿದೆ. ದೀಪಿಕ್ ಇನ್‌ಸುಲೇಟೆಡ್ ಕೇಬಲ್ ಕಾರ್ಪೊರೇಷನ್ ಮುಚ್ಚಿದೆ ಮೈಸೂರಿನಲ್ಲಿರುವ ಕರ್ನಾಟಕ ಬೇರಿಂಗ್ ಮುಚ್ಚಿ ಹೋಗಿದೆ. ಹಾಗೆಯೇ ಅಲೆಂಬಿಕ್ ಗ್ಲಾಸ್ ಫ್ಯಾಕ್ಟರಿ ಸಹ ಮುಚ್ಚಿದೆ ಅದರದು ಕರ್ಮಕಾಂಡ. ಇವೊತ್ತು ಈ ಕೈಗಾರಿಕೆ, ಆ ಕೈಗಾರಿಕೆ ಎಂದು ಅಲ್ಲ, ಎಲ್ಲಾ ಕೈಗಾರಿಕೆಗಳು ಮುಚ್ಚಿಕೊಂಡು ಹೋಗುತ್ತಿವೆ. ಮತ್ತೆ ಟೆಕ್ಸ್‌ಟೈಲ್‌ನಲ್ಲಿ ಬಹಳ ಗಂಭೀರವಾದ ಪರಿಸ್ಥಿತಿ ಉಂಟಾಗಿದೆ. ೧೦ ಸಾವಿರ ಜನ ಕಾರ್ಮಿಕರಿಗೆ ಕೆ. ಆರ್. ಮಿಲ್ ಹಾಗೂ ಇನ್ನೂ ಬೇರೆ ಬೇರೆ ಮಿಲ್‌ಗಳಲ್ಲಿ ಇದ್ದವರಿಗೆ ತೊಂದರೆಯಾಗಿದೆ. ಈ ಕೈಗಾರಿಕೆ ಬಗ್ಗೆ ಸರ್ಕಾರ ಏನು ಮಾಡಿದೆ ? ಸರ್ಕಾರದ ನೀತಿಯಾದರೂ ಏನು ? ನಾವು ಒಂದೊಂದೇ ಇಂಡಸ್ಟ್ರೀ ಬಗ್ಗೆ ಹೇಳುತ್ತಾ ಹೋದರೆ, ಅದು ದೊಡ್ಡ ಕಥೆಯಾಗುತ್ತದೆ. ಪ್ರತಿಯೊಂದು ಇಂಡಸ್ಟ್ರಿಯನ್ನು ಆಳವಾಗಿ ಅಭ್ಯಾಸ ಮಾಡಿ ನೋಡಿದರೆ ಪರಿಸ್ಥಿತಿ ಗೊತ್ತಾಗುತ್ತದೆ. ನಮ್ಮ ಮಾನ್ಯ ಮುಖ್ಯ ಮಂತ್ರಿಗಳು ಮಾತನಾಡುತ್ತಾ ನಮ್ಮ ಕೈಲಾದುದನ್ನೆಲ್ಲಾ ಮಾಡಿದ್ದೇವೆಂದು ಈ ಸದನದಲ್ಲಿ ಹೇಳಿದ್ದಾರೆ. ಅಂದರೆ ನಾನು ಮಾಡಬೇಕಾದ್ದನ್ನೆಲ್ಲಾ ಮಾಡಿದ್ದೇನೆ, ಇನ್ನೇನೂ ಹೆಚ್ಚಿಗೆ ಮಾಡುವುದಕ್ಕಾಗುವುದಿಲ್ಲ ಎಂಬ ಅರ್ಥದಲ್ಲಿ ಏನಾದರೂ ಹೇಳಿದ್ದಾರೋ ಏನೋ. ಸ್ವಾಮಿ, ನಾನು ಮಾನ್ಯ ಮಂತ್ರಿಗಳನ್ನು ಒಂದೆರಡು ಮಾತುಗಳನ್ನು ಕೇಳುತ್ತೇನೆ. ಮೈಸೂರಿನ ಕೆ. ಆರ್. ಮಿಲ್ಲ್‌ನ್ನು ಮುಚ್ಚಿ ೩ ವರ್ಷವಾಯಿತು. ಅಲ್ಲಿ ಕೆಲಸ ಮಾಡುತ್ತಿದ್ದ ಸುಮಾರು ೩ ಸಾವಿರ ಜನ ಕಾರ್ಮಿಕರು ಇವತ್ತು ಹೊಟ್ಟೆಗೆ ಅನ್ನವಿಲ್ಲದೆ ಸಾಯುತ್ತಿದ್ದಾರೆ. ಇದನ್ನು ತೆರೆಸಬೇಕೆಂದು ಕಾಂಗ್ರೆಸ್ ಪಕ್ಷದವರು, ಕಮ್ಯುನಿಸ್ಟ್ ಪಕ್ಷ ಪಕ್ಷದವರು, ಬಿ. ಜೆ. ಪಿ.ಯವರು, ಅಷ್ಟೇ ಅಲ್ಲ ನಿಮ್ಮ ಜನತಾ ಪಕ್ಷದವರು ಹೀಗೆ ಎಲ್ಲಾ ಪಕ್ಷದವರೂ ಈ ಸರ್ಕಾರದ ಮೇಲೆ ಎಲ್ಲಾ ರೀತಿಯ ಒತ್ತಾಯವನ್ನೂ ತಂದಿದ್ದಾರೆ, ಲೋಕಸಭಾ ಚುನಾವಣೆ ಸಂದರ್ಭದಲ್ಲಿ ಮಾನ್ಯ ಮುಖ್ಯ ಮಂತ್ರಿಗಳನ್ನು ಕಾರ್ಮಿಕರು ಬಂದು ಕೇಳಿದ್ದಾರೆ. ನಂತರ ೧೯೮೫ರಲ್ಲಿ ಘೇರಾವ್ ಮಾಡಿದರು. ಇತ್ತೀಚೆಗೆ ಜಿಲ್ಲಾ ಪರಿಷತ್ ಚುನಾವಣೆ ಬಂದಾಗ ಮೈಸೂರಿನಲ್ಲಿ ಕಾರ್ಮಿಕರು ಏನು ಹೇಳಿದರೆಂದರೆ, ನಾವು ನಿಮ್ಮ ಜನತಾ ಪಕ್ಷಕ್ಕೆ ಓಟು ಹಾಕುವುದಿಲ್ಲ, ಮೊದಲು ಮಿಲ್ಲ್ ಬಾಗಿಲನ್ನು ತೆರೆಸಿದರೆ ನಾವು ಓಟು ಹಾಕುತ್ತೇವೆಂದು ಹೇಳಿದ್ದಾರೆ. ಆದರೂ ಆ ಮಿಲ್ಲ್‌ನ್ನು ತೆರೆಸಲಿಲ್ಲ. ಎಷ್ಟೋ ಜನ ಕಾರ್ಮಿಕರು ಹೊಟ್ಟೆಗೆ ಅನ್ನವಿಲ್ಲದೆ ಪ್ರಾಣ ತೆತ್ತರು. ಅಂದರೆ ಅವರು ನಿಮಗೆ ಓಟು ಹಾಕಿ ಏನು ಪ್ರಯೋಜನ ? ೧೯೮೩ ರಿಂದಲೂ ಅವರಿಗೆ ಇದೇ ರೀತಿ ಆಶ್ವಾಸನೆಗಳನ್ನು ಕೊಟ್ಟುಕೊಂಡು ಈ ಮಿಲ್ಲ್‌ನ್ನು ತೆರೆಸುತ್ತೇವೆಂದು ಹೇಳುತ್ತಲೇ ಬರುತ್ತಿದ್ದೀರಿ. ಆ ಜನರು ನಿಮಗೆ ಓಟು ಹಾಕುವುದಿಲ್ಲವೆಂದು ಹೇಳುತ್ತಿದ್ದಾರೆ. ೧೯೮೭ರ ಜನವರಿಯಲ್ಲಿ ಆ ಕಾರ್ಮಿಕರು ಸ್ಟ್ರೈಕ್ ಮಾಡಿದರು. ಅಷ್ಟೇ ಅಲ್ಲ ಅವರು ಸರ್ಕಾರದ ಮೇಲೆ ಒತ್ತಾಯವನ್ನು ತಂದರೂ ಕೂಡ ನೀವು ಭರವಸೆಯನ್ನು ಕೊಟ್ಟರೇ ಹೊರತು ಆ ಕೈಗಾರಿಕೆಗೆ ಮೋಕ್ಷ ಮಾತ್ರ ಸಿಕ್ಕಿಲ್ಲ. ಆ ಕಾರ್ಮಿಕರನ್ನು ನೋಡಿದರೆ ನಮಗೆ ಬಹಳ ದುಃಖವಾಗುತ್ತದೆ. ಸರ್ಕಾರದವರನ್ನು ಕೇಳಿದರೆ ಭರವಸೆಯ ಮೇಲೆ ಭರವಸೆಯನ್ನು ಕೊಡುತ್ತಿದ್ದಾರೆ. ಒಂದು ಸಾರಿ ಮಾನ್ಯ ಮುಖ್ಯಮಂತ್ರಿಗಳಾದ ಹೆಗಡೆಯವರು ಏನು ಹೇಳಿದರು ಎಂದರೆ ಮಿಲ್ಲ್‌ನ್ನು ತೆರೆಯದಿದ್ದರೆ, ಆ ಮ್ಯಾನೇಜ್‌ಮೆಂಟ್‌ನವರನ್ನು ಪ್ರಾಸಿಕ್ಯೂಟ್ ಮಾಡುತ್ತೇವೆ ಎಂದು ಏಕೆಂದರೆ, ಅವರು ಮಿಲ್ಲ್‌ನ್ನು ಲಾಕೌಟ್ ಮಾಡಿರುವುದು ತಪ್ಪು. ಅವರು ಲಾಕೌಟ್ ಮಾಡುವುದಕ್ಕೆ ನಾವು ಪರ್ಮಿಷನ್ ಕೊಟ್ಟಿಲ್ಲ. ಆದ್ದರಿಂದ ಅವರನ್ನು ಪ್ರಾಸಿಕ್ಯೂಟ್ ಮಾಡುತ್ತೇವೆಂದು ಹೇಳಿದರು. ಆದರೆ ಅವರನ್ನು ಪ್ರಾಸಿಕ್ಯೂಟ್ ಮಾಡಲಿಲ್ಲ. ಇನ್ನೊಂದು ಸಾರಿ ಮಾನ್ಯ ಮುಖ್ಯ ಮಂತ್ರಿಗಳ ಹತ್ತಿರ ಹೋದಾಗ ಏನು ಹೇಳಿದರು ಎಂದರೆ ಇಂಡಸ್ಟ್ರಿಯಲ್ ಡೆವಲಪ್‌ಮೆಂಟ್ ಬ್ಯಾಂಕ್ ಆಫ್ ಇಂಡಿಯಾದವರು ನಮಗೆ ಸಾಲವನ್ನು ಕೊಟ್ಟರೆ ನಾವು ಮಿಲ್ಲ್‌ನ್ನು ನಡೆಸುತ್ತೇವೆಂದು ಮಿಲ್ ಮಾಲೀಕರು ಹೇಳುತ್ತಾರೆಂಬ ಅಭಿಪ್ರಾಯವನ್ನು ತಿಳಿಸಿದರು. ಅವರು ಹೇಳಿದ್ದನ್ನು ಕೇಳಿ ನಮಗೆ ಬಹಳ ಖುಷಿ ಆಯಿತು. ಇದಾದ ಮೇಲೆ ವೇಜಸ್ ಫ್ರೀಜ್ ಮಾಡಲಿಕ್ಕೆ ಮತ್ತು ವರ್ಕ್ ಲೋಡ್‌ನ ಬಗ್ಗೆ ಕಾರ್ಮಿಕರು ಒಪ್ಪಿಕೊಂಡು ಒಂದು ಅಗ್ರಿಮೆಂಟ್ ಕೂಡ ಆಯಿತು. ಆದರೆ ಈ ಮಿಲ್ಲ್‌ನ್ನು ಇವತ್ತಿನವರೆಗೂ ತೆರೆಯಲಿಲ್ಲ. ಏತಕ್ಕೆ ದಿಗಿಲು ಎಂದರೆ ಮಾಲೀಕ ನಿಮ್ಮ ಮಾತನ್ನು ಕೇಳುವುದಕ್ಕೆ

ತೆಯಾರಾಗಿಲ್ಲ. ಮಾಲೀಕ ಕೂಡ ಹಣವನ್ನು ನುಂಗಿ ಹಾಕಿದ್ದಾನೆ. ಐ. ಡಿ. ಬಿ. ಐ ನವರು ಈವತ್ತಿನ ದಿವಸ ಲೋನ್ ಕೊಡುತ್ತೇವೆ ಬನ್ನಿ, ಮಾತನಾಡಿ ಮೀಟಿಂಗ್ ಮಾಡೋಣವೆಂದು ಕರೆದರು. ನಾವೆಲ್ಲರೂ ಹೋಗಿದ್ದೆವು. ಅಧಿಕಾರಿಗಳೂ ಕೂಡ ಬಂದಿದ್ದರು. ಮತ್ತೆ ಶ್ರೀಮತಿ ಮುಕ್ತಾರ್ ಉನ್ನಿಸಾರವರು, ಮಾನ್ಯ ವೇದಾಂತ ಹೆಮ್ಮಿಗೆಯವರು ಹಾಗೂ ನಾನೂ ಕೂಡ ಇದ್ದೆ. ಆಗ ಮಾಲೀಕ ಎದ್ದು ತಪ್ಪಿಸಿಕೊಂಡು ಹೋದವನು ಬರಲೇ ಇಲ್ಲ. ಇದು ಏನಾಗಿದೆ ಎಂದರೆ ತಿಂದು ತೇಗಿ ಬಿಟ್ಟು ಕೋತಿ ಮೇಕೆ ಬಾಯಿಗೆ ಒರಿಸಿದಂತಾಗಿದೆ. ಇದರ ಬಗ್ಗೆ ಸರ್ಕಾರ ಮಧ್ಯೆ ಬರುವಂತಿಲ್ಲ. ಎಲ್ಲಿಯವರೆಗೆ ಹೋಗಿದೆ ಪರಿಸ್ಥಿತಿ ಎಂದರೆ ಐ. ಡಿ. ಬಿ. ಐ. ರವರು ಲೋನ್ ಕೊಟ್ಟ ಮೇಲೆ ರೀಕಾಲ್ ನೋಟೀಸ್ ಕೊಟ್ಟಿದ್ದಾರೆ. ಇದು ಕೊಟ್ಟ ಮೇಲೆ ಹರಾಜು ಹಾಕದೆ ಇರುವುದಿಲ್ಲ. ಹರಾಜು ಹಾಕಿ ದುಡ್ಡು ತೆಗೆದುಕೊಂಡು ಹೋಗಿ ಬಿಡುತ್ತಾರೆ. ಅವರಿಗೆ ಆ ಅಧಿಕಾರ ಇರುತ್ತದೆ. ನೋಟೀಸ್ ಕೊಡುತ್ತಾರೆ. ನೀವು ನಾವೇನು ಮಾಡುವುದಕ್ಕೆ ಆಗುವುದಿಲ್ಲವೆಂದು ಹೇಳುತ್ತೀರಿ. ಇದುವರೆಗೆ ಹೇಗೆ ಬಿಟ್ಟಿರಿ ? ನಿಜ, ಅರಿಯರ್ಸ್ ಈವತ್ತಿನ ದಿವಸ ಸರ್ಕಾರಕ್ಕೆ ಕಟ್ಟಬೇಕಾದ ಹಣ ಇನ್ನೂ ಕಟ್ಟಿಲ್ಲ ಎಕ್ಸೈಸ್ ಅರಿಯರ್ಸ್ ೬೦ ಲಕ್ಷ ರೂ ಗಳಷ್ಟು ಇದೆ. ಕೆ. ಇ. ಬಿ. ನವರಿಗೆ ೩೫ ಲಕ್ಷ ರೂಪಾಯಿ ಕೊಡಬೇಕು. ಪ್ರಾವಿಡೆಂಟ್ ಫಂಡ್ ಗ್ರಾಚ್ಯುಟಿ ಕಾರ್ಮಿಕರಿಗೆ ಕೊಡಬೇಕಾಗಿದೆ. ಕಾರ್ಮಿಕರಿಗೆ ಕೊಡಬೇಕಾದ ಹಣ ಲಕ್ಷಗಟ್ಟಲೆ ಇದ್ದು ಲೆಕ್ಕಾಚಾರ ಹಾಕದ ಪರಿಸ್ಥಿತಿ ಇದೆ. ಟೋಟಲ್ ಮಿಸ್ ಮ್ಯಾನೇಜ್‌ಮೆಂಟ್, ಕರಪ್ಟ್, ಫ್ರಾಡ್ ಆಗಿ ಎಲ್ಲರೂ ದುಡ್ಡನ್ನು ತಿಂದಿದ್ದಾರೆ. ಅವರ ಸಲ್ಯೂಷನ್ ಏನೂ ಇಲ್ಲ. ಪ್ರಾಸಿಕ್ಯೂಷನ್‌ಗೆ ನೋಟೀಸ್ ತೆಗೆದುಕೊಳ್ಳುತ್ತಾರೆ. ಸರ್ಕಾರದ ಬಗ್ಗೆ ಮಾಲೀಕರಿಗೆ ಹೆದರಿಕೆಯೇ ಇಲ್ಲ. ನಾವು ನೋಡಿಕೊಳ್ಳುತ್ತೇವೆಂದು ಹೇಳುತ್ತಾರೆ. ಇನ್ನು ಇಲ್ಲಿ ಈ ರೀತಿ ಮಾತನಾಡುತ್ತಾರೆ, ವಿಧಾನ ಸೌಧದಿಂದ ಕೆಳಗೆ ಇಳಿದು ಹೋಗುತ್ತಿರ ಬೇಕಾದರೆ ನನಗೆ ಆ ಮಾಲೀಕರು ಸಿಕ್ಕಿದರು. ಆ ಮಾಲೀಕರನ್ನು ಏತಕ್ಕೆ ಮೇಲೆ ಬರಲಿಲ್ಲವೆಂದು ಕೇಳಿದರೆ, ಏತಕ್ಕೆ ಬರಬೇಕು ಎಂದು ನಮ್ಮನ್ನೇ ಕೇಳುತ್ತಾರೆ. ಇಷ್ಟೊಂದು ಉದ್ಧಟತನದ ಮಾತನ್ನಾಡುತ್ತಾರೆ. ಅಲ್ಲಿ ೧೦೦ ಎಕರೆ ಜಮೀನು ಇದೆ. ಆ ಜಮೀನನ್ನು ಮಾರಲು ಅವಕಾಶ ಮಾಡಿಕೊಟ್ಟರೆ ಮಿಲ್ಲನ್ನು ತೆಗೆಸುತ್ತೇನೆ, ಮತ್ತೆ ಮಿಲ್ಲನ್ನು ಅಭಿವೃದ್ಧಿ ಮಾಡಲು ನೋಡುತ್ತೇನೆಂದು ಹೇಳುತ್ತಾನೆ. ಒಳಒಳಗೆ ಮಸಲತ್ತು ನಡೆಯುತ್ತಿದೆ. ಇದನ್ನು ಮಾರುವುದಕ್ಕೆ ಅವಕಾಶವನ್ನು ಕೊಡುತ್ತೀರಾ ಎಂದು ಮಾನ್ಯ ಜೆ. ಹೆಚ್. ಪಟೇಲರನ್ನು ಕೇಳುತ್ತೇನೆ. ಈ ರೀತಿ ದುಡ್ಡು ಮಾಡಿಕೊಳ್ಳಬೇಕೆಂದು ಇದ್ದಾರೆ. ಫಸ್ಟ್‌ಕ್ಲಾಸ್ ಜಾಗ. ಮೈಸೂರು ರಸ್ತೆ ಪಕ್ಕದಲ್ಲಿಯೇ ಇದೆ. ಕೋಟಿಕೋಟ್ಯಾಂತರ ರೂಪಾಯಿಗಳನ್ನು ಮಾಡಿಕೊಳ್ಳಲು ಸನ್ನಾಹ ಮಾಡುತ್ತಿದ್ದಾರೆ ಆದರೆ ಮಿಲ್‌ಗಳನ್ನು ಮಾತ್ರ ತೆರೆಯುವುದಿಲ್ಲ ಎಂದು ನನ್ನಗನಿಸುತ್ತದೆ. ತಾವು ಇದಕ್ಕೆ ಉತ್ತರ ಹೇಳಬೇಕು. ತಮಗೆ ತಿಳಿದು ಬಂದಿರಬಹುದು. ತಪ್ಪಿದ್ದರೆ ಹೇಳಿ ತಿದ್ದಿಕೊಳುವುದಕ್ಕೆ ತಯಾರಾಗಿದ್ದೇನೆ. ನಿಮ್ಮಿಂದ ಭರವಸೆ ಕೂಡ ಕೇಳುತ್ತೇನೆ.

SRI J. H. PATEL.—We will give notice for having not been given the provident fund, arrears ಅಲ್ಲದೆ ಎಲೆಕ್ಟ್ರಿಸಿಟಿ ಡಿಸ್‌ಕನೆಕ್ಟ್ ಮಾಡಿದ್ದೇವೆ ಕನೆಕ್ಷನ್ ಆಮೇಲೆ ಕೊಡುತ್ತೇವೆಂದು ಹೇಳಿದ್ದೇವೆ. ಮಾನ್ಯ ಕೃಷ್ಣನ್‌ರವರು ಹೇಳಿದರು, ಪ್ರಾಸಿಕ್ಯೂಟ್ ಮಾಡಿಲ್ಲವೆಂದು ಪ್ರಾಸಿಕ್ಯೂಟ್ ಮಾಡಿದ್ದೇವೆ. ಅವನೇ ನಾಪತ್ತೆ. ಮಾಸ್ಕೋ ಅಲ್ಲ ಇದು; ಇದು ಬೆಂಗಳೂರು. What can the Government do ?

3.00 P. M.

† SRI. M.S. KRISHAN.—I am glad that you said it. Bangalore is a good city. But the country has got bad Capitalist system. ಬಂಡವಾಳಶಾಹಿ ಸಮಾಜದಿಂದ ಹಿಗಾಗಿರುವುದು ಎಂದು ಗೊತ್ತು. ಆ ಚೌಕಟ್ಟಿನ ಕೆಳಗೆ ನಾವು ನೀವು ಬದುಕಿದ್ದೇವಲ್ಲಾ ನಮಗೆ ಸಮಾಜವಾದದ ಕಳಕಳಿ ಇದೆ ಎಂದು ಹೇಳುತ್ತಿದ್ದಾರೆ. ಸಮಾಜವಾದದ ಕಳಕಳಿ ಇದ್ದರೆ ಕೆ.ಆರ್.ಮಿಲ್ಲಿನ ವಿಷಯದಲ್ಲಿ ಏಕೆ ನಿಷ್ಠೂರವಾದ ಕಾರ್ಯಕ್ರಮ ತೆಗೆದುಕೊಂಡು ಅದನ್ನು ಸರ್ಕಾರದ ವಶಕ್ಕೆ ತೆಗೆದುಕೊಳ್ಳುವ ಯೋಚನೆ ಮಾಡುತ್ತಿಲ್ಲ ? ಹಲವಾರು ಪ್ರೊಪೋಸಲ್‌ಗಳು ಇವೆ. ಹಲವಾರು ಸೂಚನೆಗಳನ್ನು ಕೊಡಬಹುದು. ಮೊದಲನೆಯದು, ಈ ಮಿಲ್ಲನ್ನು ತಗೆದುಕೊಳ್ಳಬಹುದು, ಇದರಿಂದ ಏನು ತೊಂದರೆ ಮಾಡುವುದಿಲ್ಲ. ಫೈನಾನ್ಷಿಯಲ್ ಬರ್ಡನ್ ಬರುತ್ತದೆಂದು

---

† ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಹೇಳುತ್ತಾರೆ. ಅದನ್ನು ನಾನು ಆಗಲೇ ಓದಿದೆ. ಎಕ್ಸೆಸ್ ಆರೆಯರ್ಸ್, ಪ್ರಾವಿಡೆಂಟ್ ಫಂಡ್, ಗ್ರಾಚ್ಯುಯಿಟಿ, ವೇಜಸ್ ಇವೆಲ್ಲವನ್ನೂ ಅಡ್ಜೆಸ್ಟ್ ಮಾಡುವುದಕ್ಕೆ ಸಾಧ್ಯತೆ ಇದೆ. ಕೇಂದ್ರ ಸರ್ಕಾರ ಎನ್. ಎ. ಎಲ್.ನಲ್ಲಿ ಮಾಡಿದೆ. ಮಾನ್ಯ ದೇವರಾಜ ಅರಸು ಅವರ ಕಾಲದಲ್ಲಿ ಸಿಕ್ ಇಂಡಸ್ಟ್ರಿಗಳಿಗೆಲ್ಲಾ ಒಂದು ವ್ಯವಸ್ಥೆ ಮಾಡಿದರು. ಬೇಕಾದಷ್ಟು ಅರಿಯರ್ಸ್ ಇತ್ತು. ಮಲ್ಲೇಶ್ವರಂ ಜನರು ಡಿಪಾಸಿಟ್ ಇಟ್ಟಿದ್ದರು. ಅವರೆಲ್ಲಾ ಓಡಿಬಂದರು. ಮಾನ್ಯ ದೇವರಾಜ ಅರಸರು ಧೈರ್ಯ ಮಾಡಿ ಆಕ್ಟ್ ಮಾಡಿ ಫ್ಯಾಕ್ಟರಿ ತೆಗೆದುಕೊಂಡು ವರ್ಕರ್ಸ್ ವೇಜಸ್, ಡಿಪಾಸಿಟ್ಸ್ ಮತ್ತು ಕಚ್ಚಾ ಮಾಲುಗಳನ್ನು ಕೊಟ್ಟವರಿಗೆಲ್ಲಾ ಹಣ ಕೊಡೋಣ ಎಂದು ಒಂದೊಂದಾಗಿ ಮಾಡಿದರು. ಮೂರು ವರ್ಷಗಳ ಕಾಲ ಏನು ಕೇಳಬೇಡಿ ಎಂದು ವರ್ಕರ್ಸ್ ಹತ್ತಿರ ಅಗ್ರಿಮೆಂಟ್ ಮಾಡಿಕೊಂಡೆವು. ನಂತರ ಅವು ಮುಂದೆ ಮುಂದೆ ಬರುತ್ತಿವೆ, ಮಾನ್ಯ ಪಟೇಲರು ಹೇಳಿದರು, ಕೈಗಾರಿಕೆಗಳು ಲಾಭ ಮಾಡುತ್ತಿವೆ, ಒಳ್ಳೆಯ ಅಧಿಕಾರಿಗಳು ಇದ್ದಾರೆ ಎಂದು. ಆ ಒಂದು ದೃಷ್ಟಿಕೋನ ಸರ್ಕಾರಕ್ಕೆ ಏಕೆ ಇಲ್ಲವೆಂದು ಕೇಳುತ್ತೇನೆ. ಯಾವಾಗ ಕೇಳಿದರೂ ಲಾಸ್ ಆಗುತ್ತಿದೆ ಏನು ಮಾಡುವುದಕ್ಕಾಗುವುದಿಲ್ಲವೆಂದು ಹೇಳುತ್ತಾರೆ. ಈ ಫಿಲಾಸಫಿ ಸರಿಯಲ್ಲವೆಂದು ಹೇಳುತ್ತೇನೆ. ಇದನ್ನು ಬದಲಾವಣೆ ಮಾಡಿದರೆ ಖಂಡಿತ ಅವನನ್ನು ಮುಂದೆ ತರುವುದಕ್ಕೆ ಸಾಧ್ಯತೆ ಇದೆ ಎಂದು ಹೇಳುತ್ತೇನೆ.

SRI. J. H. PATEL.—About a week back, Mr: Gorbachev, made a statement that sick industries in Soviet Union will be closed. If Mr. Gorbachev, the supreme power in that Government comes to that decision to close down sick industries, Mr. Krishan, wants me to float peoples' money into sick industries inspite of our experiment that will never get back.

ಶ್ರೀ ಎಸ್. ಬಂಗಾರಪ್ಪ.—ಹಾಗೆ ಇದ್ದರೆ ಇದು ಮಾಸ್ಕೋ ಅಲ್ಲ; ಬೆಂಗಳೂರು. ಬೆಂಗಳೂರಿನಲ್ಲಿ ಗರ್ಬಚೆವ್ ಸ್ಟೇಟ್‌ಮೆಂಟ್ ಹೇಳಿದರೆ ಹೇಗೆ ? ಅಂದಾಗ ಅರ್ಥನ್ನು ಒಪ್ಪಿಕೊಳ್ಳುತ್ತೀರಿ ಅಂದಹಾಗೆ ಆಯಿತು. ಹಾಗದರೆ ಬಾಕಿ ಏನು ಉಳಿದಿದೆ ? ಒಂದೇ ಉತ್ತರ ಹೇಳಿದರೆ ಆಯಿತು, ಕೃಷ್ಣನ್ ಪಾರ್ಟಿ ಎಂದು ಹೇಳಿದರೆ ಸರಿಯಾಗುತ್ತದೆ.

ಶ್ರೀ ಜೆ. ಹೆಚ್. ಪಟೇಲ್.—ಹಾಗೆ ಹೇಳಲಿಲ್ಲ. ಆ ಕಾಲ ಬಂದಾಗ ನೋಡೋಣ.

ಶ್ರೀ ಎನ್. ಎಂ. ಅಡ್ಯಂತಾಯ್ಯ.—ಮಂತ್ರಿಗಳ ಪಾಲಿಸಿ ನೋಡುವಾಗ ತಲೆ ನೋವು ಅಂದರೆ ತಲೆ ಕಡಿ, ಕಾಲು ನೋವು ಆದರೆ ಕಾಲು ಕಡಿ ಅಂಪ ಹಾಗೆ ಆಯಿತು. ಸಿಕ್ ಇಂಡಸ್ಟ್ರಿ ಆದರೆ ಅದನ್ನು ಸುಧಾರಣೆ ಮಾಡುವ ಅಥವಾ ಅಭಿವೃದ್ಧಿಪಡಿಸುವ ಉದ್ದೇಶ ತಮ್ಮ ಸರ್ಕಾರಕ್ಕೆ ಇದೆಯೋ ?

ಶ್ರೀ ಎಂ. ಎಸ್. ಕೃಷ್ಣನ್.—ಒಳ್ಳೆಯ ಪ್ರಶ್ನೆ ಕೇಳಿದಿರಿ. ಸೋವಿಯತ್ ಯೂನಿಯನಿನಲ್ಲಿ ಗರ್ಬಚೆವ್ ಅವರೇ ಸಿಕ್ ಇಂಡಸ್ಟ್ರಿಗಳನ್ನು ಮುಚ್ಚುತ್ತಾರೆ ಅಂದಾಗ ನೀವು ಮುಚ್ಚಬೇಡಿ ಎಂದು ಹೇಗೆ ಹೇಳುತ್ತೀರಿ ಎಂದು ನೇರವಾಗಿ ಹೇಳಿದ್ದಾರೆ. ಅವರದು ರಷ್ಯಾ ದೇಶ;ಭಾರತ ದೇಶ ಅಲ್ಲ. ಸಮಾಜವಾದಿ ದೇಶ. ಅಲ್ಲಿ ಯಾರೂ ನಿರ್ಗತಿಕರಾಗುವುದಿಲ್ಲ ಎಲ್ಲರಿಗೂ ಕೆಲಸ ಇದ್ದೇ ಇರುತ್ತದೆ. ಯಾರೂ ಕೂಡ ಬೀದಿ ಪಾಲಾಗುವುದಿಲ್ಲ. ಆದರೆ ಅದು ಇಲ್ಲಿ ಇಲ್ಲವಲ್ಲಾ. ಇಲ್ಲಿ ಹತ್ತು ಸಾವಿರ ಜನ ಬೀದಿ ಪಾಲಾಗುತ್ತಾರಲ್ಲಾ ಇನ್ನೊಂದು ಏನೆಂದರೆ ರಷ್ಯದಲ್ಲಿ ಈಗ ಹೊಸ ರೀತಿಯಲ್ಲಿ ನಡೆಯುತ್ತಿದೆ. ಅದನ್ನು ಪತ್ರಿಕೆಯಲ್ಲೂ ತಾವು ಓದಿದ್ದೀರಿ. ಕ್ಲಾಸ್‌ನಾಸ್ಟ್ ಪಾಲಿಸಿ ಎಂದು ಗೋರ್ಬಚೇವ್ ಅವರು ಮಾಡಿದ್ದಾರೆ. ಎಲ್ಲವನ್ನೂ ಹೇಳಬೇಕು ಅಲ್ಲಿ. ಸಮಾಜವಾದಿ ಸಮಾಜ ಮಾಡುತ್ತಿದ್ದರೂ ಸಹ ಬಂಡವಾಳಶಾಹಿ ಸಮಾಜದಲ್ಲಿ ಏನು ತೊಡಕುಗಳಿವೆ ಎಂಬುದನ್ನು ನೋಡಿ ಅದನ್ನು ತಡೆಹಿಡಿಯುವುದಕ್ಕೆ ಕ್ಲಾಸ್‌ನಾಸ್ಟ್ ಪಾಲಿಸಿ ಎಂದು ಹೇಳುತ್ತಾರೆ. ರೀ–ಆರ್ಗನೈಸ್, ರೀಸ್ಟ್ರಕ್ಚರ್ ಮಾಡುತ್ತಿದ್ದಾರೆ. ಮೊನ್ನೆ ದಿವಸ ಒಂದು ಕಾನ್‌ಫರೆನ್ಸ್ ಅಟೆಂಡ್ ಮಾಡಿದ್ದೆ. ಅದು ನ್ಯಾಷನಲ್ ಕಾನ್‌ಫರೆನ್ಸ್. ಅಲ್ಲಿ ಇದರ ಬಗ್ಗೆ ಮಾತನಾಡುತ್ತಾ ಏನು ಹೇಳಿದರು ಎಂದರೆ ೧೦ ಸಾವಿರ ಮ್ಯಾನೇಜರ್‌ಗಳನ್ನು ಡಿಸ್‌ಮಿಸ್ ಮಾಡಿದ್ದಾರೆ, ೩೨ ಮ್ಯಾನೇಜಿಂಗ್ ಡೈರೆಕ್ಟರ್‌ಗಳನ್ನು ಶಿಕ್ಷೆಗೆ ಒಳಪಡಿಸಿದ್ದಾರೆ. ನಷ್ಟ ಮಾಡಿದ್ದಕ್ಕೆ ನಾಲ್ಕು ಜನ ಮಂತ್ರಿಗಳು they have been executed for defraud, for corruption. I would like to know whether anybody has done this in our country. Whether any single Manager, or Managing Directors has every beer put in the jail ? ಅದರ ಬದಲು ಹೂವಿನ ಹಾರ ಹಾಕಿ ಕರೆದುಕೊಂಡು ಹೋಗುತ್ತಾರೆ

SRI S. BANGARAPPA.—That is what the Hon'ble Minister said that this is not Moscow. Ours is not a Communist government.

ಶ್ರೀ ಎಂ. ಎಸ್. ಕೃಷ್ಣನ್.—ಗೋರ್ಬಚೇವ್ ಅವರು ಮಾಡಿದ್ದನ್ನು ವ್ಯಂಗ್ಯವಾಗಿ ಹೇಳಿದರು ಜೆ. ಹೆಚ್. ಪಟೇಲರು. ನಮಗೆ ಗೊತ್ತಿಲ್ಲವ್ವಾ ಅವರ ವಿಷಯ, ಇವರೇನು ಸಾಮಾನ್ಯದವರಾ ?

ಶ್ರೀ ಜೆ. ಹೆಚ್. ಪಟೇಲ್.—ಇಲ್ಲ, ಸೀರಿಯಸ್ಸಾಗಿಯೇ ಹೇಳಿದೆ.

ಶ್ರೀ ಎಂ. ಎಸ್. ಕೃಷ್ಣನ್.—ಆದರೆ ಆ ಸಮಾಜ ಬೇರೆ, ಈ ಸಮಾಜ ಬೇರೆ. ಅದನ್ನು ಇದಕ್ಕೆ ಕಂಪೇರ್ ಮಾಡಬೇಡಿ. ಈ ಚೌಕಟ್ಟಿನಲ್ಲಿ ಬಂಡವಾಳಶಾಹಿ ಸಮಾಜವನ್ನು ನುಚ್ಚುನೂರು ಮಾಡುವುದಕ್ಕೆ ನಾನು ನಿಮ್ಮ ಜೊತೆಯಲ್ಲಿದ್ದೇನೆ, ನಮ್ಮ ಜೊತೆಯಲ್ಲಿ ನೀವು ಬಂದರೆ. ನನಗೆ ಈಗ ನಿಮ್ಮ ಕಾರ್ಯ ನೋಡಿ ಅನುಮಾನ ಬರುತ್ತಿದೆ. ಯಾವುದಾದರೂ ಕಾರ್ಯಕ್ರಮ ತೆಗೆದುಕೊಂಡರೆ ಅನುಮಾನ ಬರದೇ ಇರುವ ಕಾರ್ಯಕ್ರಮ ತೆಗೆದುಕೊಳ್ಳಿ. ನಾವು ಪೂರ್ತಿಯಾಗಿ ಸಪೋರ್ಟ್ ಮಾಡುತ್ತೇವೆ. ನಿಮ್ಮ ದೃಷ್ಟಿಕೋನ ಲಾಸ್ ಇದ್ದರೆ ತೆಗೆದುಬಿಡುತ್ತೇವೆ ಎಂಬದು ಸರಿಯಲ್ಲ ಲಾಸ್ ಏತಕ್ಕೆ ಆಗುತ್ತಿದೆ, ಯಾವುದರಿಂದ ಆಗುತ್ತಿದೆ, ಯಾರುಕಾರಣ, ಅದಕ್ಕೇನಾದರೂ ಮಾಡುವುದಕ್ಕಾಗುತ್ತದೆಯೇ ಎಂಬ ಬಗ್ಗೆ ನೋಡಿ ಚರ್ಚೆ ಮಾಡಿ ಕಾರ್ಮಿಕರಿಗೂ ಅನುಕೂಲವಾಗುವಂತೆ, ಕೈಗಾರಿಕೆಯೂ ಬದುಕುವ ಹಾಗೆ ನಿಮಗೂ ಒಳ್ಳೆಯ ಹೆಸರು ಬರುವಂತೆ ಕಾರ್ಯಕ್ರಮ ತೆಗೆದುಕೊಳ್ಳಬೇಕು. ಕರ್ನಾಟಕ ರಿಲೀಫ್ ಅಂಡರ್‌ಟೇಕಿಂಗ್ ಆಕ್ಟ್ ಪ್ರಕಾರ ಆಗಲೀ ಅಥವಾ ಬೇರೆ ಕಾನೂನುಪ್ರಕಾರವಾಗಲಿ ಮಾಡುವುದಕ್ಕೆ ಅಧಿಕಾರ ಇದೆ.

(ಮಾನ್ಯ ಲೈಕುದ್ದೀನ್ ಅವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಕಾರ್ಖಾನೆ ಹಾಳಾಗಿಹೋಗಲಿ, ಅದನ್ನು ಮುಚ್ಚಲಿ ಎಂದು ಹೇಳುವುದಿಲ್ಲ ಅವರು. ನಾನು........

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಪಟೇಲ್ ಅವರಿಗೆ ಒಂದು ಸಲಹೆ ಕೊಡುತ್ತೇನೆ. ಮಾನ್ಯ ಎಂ. ಎಸ್. ಕೃಷ್ಣನ್ ಅವರು ಹೇಳಿದಂತೆ ಕೈಗಾರಿಕಾ ಕ್ಷೇತ್ರಕ್ಕೆ ಸೀಮಿತಗೊಳಿಸಿ ಯಾವರೀತಿ ಕೈಗಾರಿಕೆಯನ್ನು ನಡೆಸಬೇಕು ಕಾರ್ಮಿಕರಿಗೂ ಮೇನೇಜ್‌ಮೆಂಟಿಗೂ ಇರತಕ್ಕ ಬಾಂಧವ್ಯ ಯಾವ ರೀತಿ ವೃದ್ಧಿ ಮಾಡಿಕೊಳ್ಳಬೇಕು ಎಂಬ ಬಗ್ಗೆ ಯೋಚನೆ ಮಾಡಿ. ರಷ್ಯದಲ್ಲಿ ವಾಸ ಮಾಡತಕ್ಕ ರೈತರ ಬಗ್ಗೆ ಮತ್ತೊಬ್ಬರ ಬಗ್ಗೆ ವಿಚಾರ ಹರಿಸುವುದು ಬೇಡ. ಕಾರ್ಮಿಕರಿಗೆ ಮಾತ್ರ ಸೀಮಿತಗೊಳಿಸೋಣ.

ಶ್ರೀ ಎಂ. ಎಸ್. ಕೃಷ್ಣನ್.—ರೈತರೂ ಚೆನ್ನಾಗಿದ್ದಾರೆ.

ಶ್ರೀ ಎಸ್. ಬಂಗಾರಪ್ಪ.—ರೈತರೂ ಚೆನ್ನಾಗಿದ್ದಾರೆಂದು ಅಭಿಪ್ರಾಯಪಡುತ್ತಾರೆ ಆದಿರಲಿ. ಚೈನಾದಲ್ಲಿ, ರಷ್ಯದಲ್ಲಿ ಆ ರೀತಿ ಇದೆ ಎಂಬ ಅಭಿಪ್ರಾಯ ಇದೆ. ಇಲ್ಲಿ ಕಾಂಗ್ರೆಸ್ ಸರ್ಕಾರ ಇರಬಹುದು ಜನತಾ ಪಕ್ಷದ ಸರ್ಕಾರ ಇರಬಹುದು ಮತ್ತೊಂದಿರಬಹುದು, ಕಮ್ಯೂನಿಸಂ ಅಥವಾ ಕಮ್ಯೂನಿಷ್ಟ್ ಸಿದ್ಧಾಂತವನ್ನು ಆ ಚೌಕಟ್ಟಿನಲ್ಲಿ ಅಡಳಿತವನ್ನು ಕೊಡತಕ್ಕ ಸರ್ಕಾರ ಅಲ್ಲ ಇದು. ಏಕೆಂದರೆ ಇಲ್ಲಿ ಬಹಳ ವ್ಯತ್ಯಾಸ ಇದೆ, ಆದ್ದರಿಂದ ಕೈಗಾರಿಕೆಗಳಿಗೆ ಸೀಮಿತಗೊಳಿಸಿ ಕಮ್ಯುನಿಷ್ಟ ತತ್ವದ ಆಧಾರದ ಮೇಲೆ ಕಾರ್ಯಕ್ರಮ ಹಾಕಿ ಕೈಗಾರಿಕೆಯಲ್ಲಿ ಮಧುರ ಬಾಂಧವ್ಯ ತರುವುದಕ್ಕೆ ಒಂದು ಪ್ರಯೋಗವನ್ನು ಇಲ್ಲಿ ಮಾಡಿ. ಈ ವಿಷಯದಲ್ಲಿ ಮಾತ್ರ ಆ ಒಂದು ತತ್ವವನ್ನು ಜಾರಿಗೆ ತರಬೇಕು ಎಂಬುದು ನನ್ನ ಸಲಹೆ. ಏಕೆಂದರೆ ಅದು ಬಹಳ ಚೆನ್ನಾಗಿದೆ ಎಂದು ಹೇಳುತ್ತಾರೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಅಂದರೆ ಇದನ್ನೂ ಕ್ಲೋಸ್ ಮಾಡಬೇಕು ಎಂತಲಾ ?

ಶ್ರೀ ಎಂ. ಎಸ್. ಕೃಷ್ಣನ್.—ಆದರಿಂದ ಅವರು ಆ ರೀತಿ ಕೆಲಸ ಮಾಡಿ ಅಂತ ಹೇಳಿದ್ದಾರೆಂದು ನಾನು ತಿಳಿದುಕೊಂಡಿಲ್ಲ. ಕಮ್ಯುನಿಸ್ಟ್ ತತ್ವ ಅಲ್ಲದೆ ಹೋದರೂ ಆ ಒಂದು ತತ್ವದ ಆಧಾರದ ಮೇಲೆ ಕಾರ್ಯಕ್ರಮಗಳನ್ನು ಕೈಗೊಳ್ಳಿ ಅಂತ ಮಾನ್ಯ ಬಂಗಾರಪ್ಪನವರು ಹೇಳಿದ್ದಾರೆಂದು ನಾನು ತಿಳಿದುಕೊಂಡಿದ್ದೇನೆ.

ಶ್ರೀ ಎಸ್. ಬಂಗಾರಪ್ಪ.—ಇಂಡಸ್ಟ್ರೀಸ್ ಕಾರ್ಮಿಕರಿಗೆ ಸಂಬಂಧಪಟ್ಟ ಹಾಗೆ.

ಶ್ರೀ ಎಂ. ಎಸ್. ಕೃಷ್ಣನ್.—ಅದು ಸಾಧ್ಯ ಇದೆಯೇ ಎಂಬುದು ದೊಡ್ಡ ಪ್ರಶ್ನೆ.

ಶ್ರೀ ಕೆ. ಎಚ್. ಪಾಟೀಲ್,—ಟೆಕ್ಸ್‌ಟೈಲ್ ಕೈಗಾರಿಕೆಯಲ್ಲಿ ಕಾರ್ಮಿಕರು ಪಾಲ್ಗೊಳ್ಳುವಂತಾಗ ಬೇಕು ಎಂಬುದಾಗಿ ಮಾನ್ಯ ಸದಸ್ಯರು ಹೇಳುತ್ತಿದ್ದಾರೆ ಮಾನ್ಯ ಕೃಷ್ಣನ್‌ರವರ ಜೊತೆಯಲ್ಲಿ ಮಂತ್ರಿಗಳು ಮಾತನಾಡಿ, ಮಾನ್ಯ ಕೃಷ್ಣನ್ ಅವರು ಯಾವ ಉದ್ದಿಮೆಯನ್ನು ಹೇಳುತ್ತಾರೋ ಆ ಉದ್ದಿಮೆಯನ್ನು ಪೂರ್ಣವಾಗಿ ಮ್ಯಾನೇಜ್ ಮಾಡುವುದಕ್ಕೆ ಕಾರ್ಮಿಕರಿಗೆ ಬಿಟ್ಟುಕೊಡಿ. ಅದರ ಉಸ್ತುವಾರಿಯನ್ನು ನೋಡಿಕೊಳ್ಳುವುದಕ್ಕೆ ಮಾನ್ಯ ಶ್ರೀ ಕೃಷ್ಣನ್ ರವರಿಗೆ ಹೇಳಿ. ಅದನ್ನು ಯಾವ ರೀತಿ ನಡೆಸುತ್ತಾರೆಂಬುದನ್ನು ನೋಡಿ. ಅದಕ್ಕಾಗಿ ಸ್ವಲ್ಪ ಹಣವನ್ನು ಒದಗಿಸಿಕೊಡುವುದಕ್ಕೆ ಅವಕಾಶ ವಾಗುವಂತಹ ಬಿಲ್ಲನ್ನು ತಂದರೆ ಅದಕ್ಕೂ ನಮ್ಮ ಸಮ್ಮತಿಯನ್ನು ಕೊಡುತ್ತೇವೆ.

ಶ್ರೀ ಜೆ. ಹೆಚ್. ಪಟೇಲ್.—ಕೆ. ಆರ್. ಮಿಲ್ಲನ್ನು ಈಗಲೇ ತೆಗೆದುಕೊಳ್ಳಲಿ.

ಶ್ರೀ ಕೆ. ಎಚ್. ಪಾಟೀಲ್.—ಅವರ ಜೊತೆ ಸಮಾಲೋಚನೆ ಮಾಡಿ, ಅವರು ಯಾವುದನ್ನು ಹೇಳುತ್ತಾರೋ ಆ ಮಿಲ್ಲನ್ನು ಕಾರ್ಮಿಕರ ನಾಯಕತ್ವದಲ್ಲಿ ಮ್ಯಾನೇಜ್ ಮಾಡುವುದಕ್ಕೆ ಅವಕಾಶ ಮಾಡಿಕೊಡಿ.

ಶ್ರೀ ಎಂ. ಎಸ್. ಕೃಷ್ಣನ್.—ಸಹಕಾರಿ ಕ್ಷೇತ್ರದಲ್ಲಿರುವ ಮಿಲ್ಲುಗಳು ಬಹಳ ಚೆನ್ನಾಗಿ ನಡೆಯುತ್ತಿದೆ. ಬಹಳ ಲಾಭದಾಯಕವಾಗಿ ನಡೆಯುತ್ತಿದೆ ಎಂದು ಮಾನ್ಯ ಕೆ. ಎಚ್. ಪಾಟೀಲ್ ರವರು ಹೇಳಿದ್ದಾರೆ. ಅಲ್ಲಿಯ ಕಾರ್ಮಿಕರ ಪರಿಸ್ಥಿತಿ ಏನು ಎಂಬುದು ನಮಗೆ ಗೊತ್ತಿಲ್ಲವೇ ?

ಶ್ರೀ ಕೆ. ಎಚ್. ಪಾಟೀಲ್.—ನಮ್ಮಲ್ಲಿ ಯಾವುದೇ ತಕರಾರು ಇಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ನಿಮ್ಮ ಮುಂದೆ ತಕರಾರು ಬರುತ್ತಿದೆಯೇ ?

ಶ್ರೀ ಕೆ. ಮಲ್ಲಪ್ಪ.—ಅಲ್ಲಿ ಟ್ರೇಡ್ ಯೂನಿಯನ್ ಇದೆಯೇ ?

ಶ್ರೀ ಎಂ. ಎಸ್. ಕೃಷ್ಣನ್.—ಅಲ್ಲಿ ಟ್ರೇಡ್ ಯೂನಿಯನ್ ಮಾಡುವುದಕ್ಕೆ ಅವಕಾಶವನ್ನೇ ಕೊಡುವುದಿಲ್ಲ. ಶ್ರೀಮಾನ್ ಕೆ. ಎಚ್. ಪಾಟೀಲ್ ರವರು ಸಾಧಾರಣ ಮನುಷ್ಯರು ಎಂಬುದು ನಮಗೆ ಗೊತ್ತಿಲ್ಲವೇ ?

ಶ್ರೀ ಕೆ. ಎಚ್. ಪಾಟೀಲ್.—ಲೆಕ್ಕ ಎಲ್ಲವನ್ನೂ ಅವರ ಎದುರಿಗೇ ಇಡುತ್ತೇವೆ. ಹೆಚ್ಚು ಇದ್ದರೆ ಅವರಿಗೆ ಕೊಡುತ್ತೇವೆ. ಕಡಿಮೆ ಇದ್ದರೆ ಕೇಳುತ್ತೇವೆ. ಅವರಿಗೆ ಬೇಕಾದ ಸೌಕರ್ಯಗಳನ್ನು ಕೊಡುತ್ತೇವೆ. ಹಾಗೆಯೇ ಕೆಲಸ ಮಾಡಬೇಕೆಂದೂ ಹೇಳುತ್ತೇವೆ. ಸರಿಯಾಗಿ ಕೆಲಸ ಮಾಡದೇ ಇದ್ದರೆ ನಿಮ್ಮನ್ನು ಮನೆಗೆ ಕಳುಹಿಸುತ್ತೇವೆಂದು ಹೇಳುತ್ತೇವೆ. ಆದ್ದರಿಂದ ಅವರು ಸರಿಯಾಗಿ ದುಡಿಯುತ್ತಾರೆ ಸರಿಯಾಗಿ ತಿನ್ನುತ್ತಾರೆ. ಸರಿಯಾಗಿ ನಡೆಯುತ್ತಿದೆ.

ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ಕೆ. ಎಚ್. ಪಾಟೀಲ್‌ರವರು ಪ್ರಗತಿಪರವಾಗಿ ಅಲ್ಲಿರತಕ್ಕ ಕಾರ್ಮಿಕರಿಗೆ ಅನುಕೂಲವಾಗುವ ರೀತಿಯಲ್ಲಿ ಮಾಡಿಕೊಂಡಿದ್ದರೆ ಆದಕ್ಕೆ ನಮ್ಮ ವಿರೋಧ ಇಲ್ಲ. ತೊಂದರೆ ಏನೂ ಇಲ್ಲ. ಬಹಳ ಸಂತೋಷ. ಆದರೆ ಪ್ರಶ್ನೆ ಏನು ಹೇಳುತ್ತಿದ್ದೇನೆಂದರೆ. ಮಾನ್ಯ ಶ್ರೀ ಜೆ. ಹೆಚ್. ಪಟೇಲ್ ಅವರು ಈಗಲೇ ಕೆ. ಆರ್. ಮಿಲ್ಲನ್ನು ಕೊಟ್ಟುಬಿಡುತ್ತೇನೆಂದು ಹೇಳಿದರು ಎಲ್ಲಾ ಅವಾಂತರ ಮಾಡಿ, ನಜ್ಜುಗುಜ್ಜಾಗಿ ಹೋಗಿದೆ. ಆ ಮನೆಯೆಲ್ಲಾ ಮುರಿದುಹೋಗಿದೆ. ಮನೆಯಲ್ಲಿದ್ದಂತಹವರು ಸತ್ತು ಹೋಗಿದ್ದಾರೆ. ಇದುವರೆವಿಗೂ ತಾವು ಏನು ಮಾಡುತ್ತಿದ್ದೀರಿ ? ಇದನ್ನು ಬಹಳ ಹಗುರವಾಗಿ ಮಾತನಾಡುವುದು ಬೇಡ. ನಾವು ಆ ಛಾಲೆಂಜನ್ನು ಒಪ್ಪಿಕೊಳ್ಳುವುದಕ್ಕೆ ತಯಾರು. ಮೊದಲು ಆ ಮಿಲ್ಲನ್ನು ನೀವು ಸರ್ಕಾರದವರು ತೆಗೆದುಕೊಳ್ಳಿ. ನಮಗಿಂತ ಮೊದಲು ನಿಮ್ಮ ಸರ್ಕಾರದ ವಶಕ್ಕೆ ತಗೆದುಕೊಳ್ಳಿ. ಕೈಗಾರಿಕೆಯನ್ನು ಪ್ರಾರಂಭ ಮಾಡಿ ಅಲ್ಲಿರತಕ್ಕ ಕಾರ್ಮಿಕ ರೆಲ್ಲರೂ ಒಳ್ಳೆಯವರೇ. ಎಲ್ಲ ಕಂಡೀಷನ್ನಿಗೂ ಒಪ್ಪಿಕೊಂಡಿದ್ದಾರೆ, ಸಾಮಾನ್ಯವಾಗಿ ವರ್ಕ್‌ಲೋಡನ್ನು ಒಪ್ಪಿಕೊಳ್ಳುವುದಿಲ್ಲ. ಆದರೆ ಅವರು ವರ್ಕ್‌ಲೋಡನ್ನು ಕೂಡ ಒಪ್ಪಿಕೊಂಡಿದ್ದಾರೆ. ವೇಜ್ ಫ್ರೀಜ್‌ಗೂ ಕೂಡ ಒಪ್ಪಿಕೊಂಡಿದ್ದಾರೆ. ಇದನ್ನು ಯಾರೂ ಸಾಮಾನ್ಯ ಒಪ್ಪಿಕೊಳ್ಳುವುದಿಲ್ಲ. ಆದರೆ ಅವರು ಎಲ್ಲವನ್ನೂ ಒಪ್ಪಿಕೊಂಡಿದ್ದಾರೆ. ಆದರೂ ಅವರು ಆ ಮಿಲ್ಲನ್ನು ಪ್ರಾರಂಭ ಮಾಡು ತ್ತಿಲ್ಲ. ಆದ್ದರಿಂದ ಮೊದಲು ನೀವು ಅದನ್ನು ತೆಗೆದುಕೊಂಡು ಪ್ರಾರಂಭ ಮಾಡಿ ಅದಕ್ಕೆ ಏನು ಸಹಕಾರ ಬೇಕೋ ಅದನ್ನು ನಾವು ಕೊಡುತ್ತೇವೆ. ಅದೇ ರೀತಿಯ ಸಹಕಾರವನ್ನು ಎಂ.ಇ.ಐ. ನಲ್ಲಿ ಕೊಟ್ಟಿದ್ದೇವೆ, ಅದಕ್ಕೆ ಸ್ವಲ್ಪ ಹಣವನ್ನು ಕೊಟ್ಟು ಪ್ರಾರಂಭ ಮಾಡುವುದಕ್ಕೆ ಅವಕಾಶ ಮಾಡಿಕೊಡಿ ಕಾರ್ಮಿಕರ ಪರವಾಗಿ ಸಹಕಾರವನ್ನು ಕೊಡುವುದಕ್ಕೆ ನಾವು ತಯಾರಾಗಿದ್ದೇವೆ. ಒಳ್ಳೆಯ ಅಧಿಕಾರಿ

ಯನ್ನು ಅಲ್ಲಿಗೆ ಹಾಕಿ ಖಂಡಿತವಾಗಿ ಅದು ಚೆನ್ನಾಗಿಯೇ ನಡೆಯುತ್ತದೆ. ಅದೇ ರೀತಿ ದಾವಣಗೆರೆಯಲ್ಲೂ ನಡೆಯುತ್ತದೆ. ಆದರೆ ಪಟ್ಟಭದ್ರ ಹಿತಾಶಕ್ತಿಗಳು ತಮಗೆ ಅನುಕೂಲ ಮಾಡುವುದಕ್ಕೆ ಎಲ್ಲವನ್ನೂ ನುಂಗುಹಾಕಿದ್ದಾರೆ. ಇದರಿಂದ ನಿಮಗೂ ಕೆಟ್ಟ ಹೆಸರು, ಕಾರ್ಮಿಕರಿಗೂ ಅನ್ಯಾಯ, ದೇಶಕ್ಕೂ ದ್ರೋಹ, ಸಮಾಜಕ್ಕೂ ದ್ರೋಹ. ಆ ಆಧಾರದ ಮೇಲೆ ಪರಿಗಣಿಸಿ ಅಂತ ಸರ್ಕಾರವನ್ನು ನಾನು ಕೇಳಿಕೊಳ್ಳುವುದು. ಇವತ್ತು ಕೆ. ಆರ್. ಮಿಲ್ಸ್ ಬಗ್ಗೆ ಪ್ಯಾಕೇಜ್ ಪ್ರಪೋಸಲ್ ಮಾಡಬೇಕು. ಅವರು ಸೇಲ್ಸ್ ಟ್ಯಾಕ್ಸ್, ಎಲೆಕ್ಟ್ರಿಸಿಟಿ ಬಗ್ಗೆ ಐದು ವರ್ಷ ಡೆಫರ್ಡ್ ಪೇಮೆಂಟ್ ಮಾಡುವುದಕ್ಕೆ ಅವಕಾಶ ಮಾಡಿಕೊಡಬಹುದು ೧೯೮೪ರಲ್ಲಿ ಗುಜರಾತ್‌ನಲ್ಲಿ ೫ ವರ್ಷ ಡೆಫರ್ಡ್ ಪೇಮೆಂಟ್ ಮಾಡಿದ್ದಾರೆ ಅಲ್ಲಿ ಕಾಂಗ್ರೆಸ್ ಸರ್ಕಾರ ಇದೆ. ಯಾವುದೇ ಸರ್ಕಾರ ಇರಲಿ ಮಾಡಿದ್ದೆಲ್ಲ ತಪ್ಪು ಎಂದು ಹೇಳುವುದಕ್ಕಾಗುವುದಿಲ್ಲ. ಆ ವಿಷಯದಲ್ಲಿ ಅವರು ಮಾಡಿದ್ದಾರೆ ಸುಮಾರು ೫೦ ಸಾವಿರ ಜನ ಇವತ್ತಿನ ದಿವಸ ಕೆಲಸ ಇಲ್ಲದೇ ಇದ್ದರು. ಅಲ್ಲಿ ೧೨ ಮಿಲ್ಸ್ ತೆಗೆದುಕೊಂಡು ಪ್ಯಾಕೇಜ್ ಡೀಲ್ ಮಾಡಿ ಮಿಲ್ಸ್ ನಡೆಸುತ್ತಿದ್ದಾರೆ. ಅಲ್ಲಿ ಗುಜರಾತ್ ಟೆಕ್ಸ್‌ಟೈಲ್ಸ್ ಕಾರ್ಪೋರೇಷನ್ ಮಾಡಿದ್ದಾರೆ. ಇಲ್ಲೂ ಕರ್ನಾಟಕ ಟೆಕ್ಸ್‌ಟೈಲ್ಸ್ ಕಾರ್ಪೋರೇಷನ್ ಯಾಕೆ ಮಾಡಬಾರದು ? ಇವತ್ತು ಬಂಡವಾಳ ಇಲ್ಲ ಎಂದಲ್ಲ. ಎಂತೆಂತಹ ಬಂಡವಾಳಗಾರರು ಯಾವ ಯಾವುದಕ್ಕೋ ಕೋಟ್ಯಾಂತರ ರೂಪಾಯಿಗಳನ್ನು ಕೊಡುತ್ತಾರೆಂದು ನಿನ್ನೆಯ ದಿವಸ ಮಾನ್ಯ ಬಂಗಾರಪ್ಪನವರು ಮಾತನಾಡುತ್ತಾ ಹೇಳಿದರು. ಎಕ್ಸೈಸ್ ಕಂಟ್ರಾಕ್ಟರ್ಸ್, ಮುಂತಾದವರ ಬಗ್ಗೆ ಅವರು ಹೇಳಿದರು. ಅವರ ಹತ್ತಿರ ಕೇಳಿ ಎಂದು ನಾನು ಹೇಳುವುದಿಲ್ಲ. ಒಟ್ಟಿನಲ್ಲಿ ಸರ್ಕಾರಕ್ಕೆ ಮನಸ್ಸು ಬರಬೇಕು. ಇವತ್ತು ಬ್ಯಾಂಕ್‌ಗಳಿಂದ, ಕೆ.ಎಸ್.ಎಫ್ ಸಿ. ನಿಂದ, ಐಡಿಬಿಐ ನಿಂದ ಸಾಲ ಪಡೆಯುವುದಕ್ಕೆ ಸಾಧ್ಯವಿದೆ. ಇವತ್ತು ನೀವು ನಡೆಸುವುದರಿಂದ ತೊಂದರೆ ಏನೂ ಇಲ್ಲ. ಆದ್ದರಿಂದ ಇದನ್ನು ತಾವು ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ, ಇನ್ನು ನಾನು ದಾವಣಗೆರೆಗೆ ಬರುತ್ತೇನೆ. ದಾವಣಗೆರೆಯಲ್ಲಿ ನಾಲ್ಕು ಮಿಲ್ಲುಗಳು ಆಗಲೇ ಮುಚ್ಚಿವೆ ಮೊದಲನೆಯದಾಗಿ, ಶಂಕರ್ ಟೆಕ್ಸ್‌ಟೈಲ್ ಮಿಲ್ಸ್ ಮುಚ್ಚಿ ಮೂರು ವರ್ಷಗಳಾದವು. ಈಗ ಅದು ಎಲ್ಲಿಗೆ ಬಂದಿದೆ ಎಂದರೆ, ಸರ್ಕಾರ ಏನೂ ಮಾಡದೇ ಇರುವುದರಿಂದ, ಕಾರ್ಮಿಕರು ರೋಷಿಹೋಗಿ ಏನು ಕೊಡುತ್ತೀರೋ ಕೊಡಿ ಎನ್ನುವ ಸ್ಥಿತಿಗೆ ಬರುವಂತೆ ಆ ಮಾಲೀಕರು ಮಾಡಿರುತ್ತಾರೆ. ಆತ ಕೊಡತಕ್ಕದ್ದನ್ನು ಪಡೆದುಕೊಳ್ಳುವ ಸ್ಥಿತಿಗೆ ಅಲ್ಲಿನ ಕಾರ್ಮಿಕರು ಬಂದಿದ್ದಾರೆ. ಅಲ್ಲಿ ಇರುವ ಜಮೀನಿನಲ್ಲಿ ಅಲ್ಲಿನ ಕಾರ್ಮಿಕರಿಗೆ ಸೈಟುಗಳನ್ನು ಕೊಡುವ ಬಗ್ಗೆ ಮಂತ್ರಿಗಳು ಹೇಳಿದರು ಶಂಕರ್ ಟೆಕ್ಸ್‌ಟೈಲ್ಸ್ ಅನ್ನು ಹಾಳುಮಾಡಿ ಹಾಕಿದರು, ಸರ್ಕಾರ ಈ ಮಿಲ್ ಬಗ್ಗೆ ಇಂಟರ್‌ಫಿಯರ್ ಮಾಡಲಿಲ್ಲ. ಇನ್ನು ಬಿ. ಸಿ. ಎಂ. ನಡೆಯುತ್ತಾ ಇದೆ. ಗಣೇಶ ಮಿಲ್ಸ್, ಸಿದ್ದೇಶ್ವರ ಹಾಗೂ ಚಿಗಟಿ ಮಿಲ್ಸ್ ಈ ಮೂರರಲ್ಲೂ ಸುಮಾರು ೨೬೦೦ ಜನ ಕಾರ್ಮಿಕರು ಕೆಲಸದಲ್ಲಿದ್ದರು. ಈ ಮೂರು ಖಾಯಿಲೆ ಆಗಿರುವ ಮಿಲ್‌ಗಳೇ ? ಇವುಗಳು ರೋಗಗ್ರಸ್ಥವಾಗಿದೆ. ಆದರೆ ಈ ಮಿಲ್ಲುಗಳು ರೋಗಗ್ರಸ್ಥ ಅಲ್ಲ ಎನ್ನುವ ತೀರ್ಮಾನಕ್ಕೆ ಸರ್ಕಾರ ಬಂದಿದೆ, ಅವುಗಳಲ್ಲಿ ಟೆಂಪರರಿ ಅನ್‌ನ್ಯಾಚ್ಯುರಲ್ ಖಾಯಿಲೆಯನ್ನು ಉಂಟುಮಾಡಿದ್ದಾರೆ. ಯಾರು ? ಮಾಲೀಕರು. sickness itself has becom a profitable business in this country. If you make a factory sick, you earn more money. You can sell assets and go to London or America and take land there and stay. This is the way the employers are behaving and these employers are aot very diffirent from the empioyers in other places also. ಈ ರೀತಿ ಮಾಡುತ್ತಿದ್ದಾರೆ ಈ ದಿವಸ. ಈ ರೀತಿ ಮಾಡಿ ಕೆಟ್ಟ ಪರಿಸ್ಥಿತಿಗೆ ತಂದಿದ್ದಾರೆ. Again same thing. No funds, No working capital. What happened to all the funds that you got ? What happened to the profit that you earned all these days ? Where did it go ? ಏನು ಮಾಡಿದ್ದೀರಿ ಎಂದು ಕೇಳುವಂಥ ಧೈರ್ಯವಾದರೂ ಸರ್ಕಾರಕ್ಕೆ ಬೇಕು ಏನು ಮಾಡಿದಿರಿ ಎಂದು ನಾವು ಪಬ್ಲಿಕ್ ಮೀಟಿಂಗ್‌ನಲ್ಲಿ ಕೇಳುತ್ತೇವೆ. ಮಾಡದೇ ಇರುವವರು ಆ ಅಭಿಪ್ರಾಯ ಬರುವ ರೀತಿಯಲ್ಲಿ ಮಾತನಾಡುವಂಥ ತಾಕತ್ತು ಇರಬೇಕು. ನನಗನ್ನಿಸುತ್ತದೆ ಏನೆಂದರೆ ಇದು ಎರಡೂ ಸಹ ಇಲ್ಲ ಎಂದು. ಇದೆಲ್ಲಾ ನಡೆಯುವುದಿಲ್ಲ, ನನಗೆ ಗೊತ್ತು. ಮತ್ತು ಇದರಲ್ಲಿ ಇನ್ನೊಂದು ಮಾತು ಹೇಳುತ್ತೇನೆ. ಬರೇ ಫಂಡ್ಸ್ ಮಾತ್ರ ಅಲ್ಲ. ಮಾನ್ಯ ಪಾಟೀಲರು ಹೇಳಿದ ಹಾಗೆ ಹತ್ತಿ ಸಿಗುತ್ತಿಲ್ಲ. ಹತ್ತಿ ಬೆಲೆ ಜಾಸ್ತಿಯಾಗಿದೆ. ಅವರ ಪ್ರತಿನಿಧಿ ಬಂದು ಮಾತನಾಡಿದರು, ನಾನೂ ಇದ್ದೆ ಮೀಟಿಂಗ್‌ನಲ್ಲಿ ಕರ್ನಾಟಕ ಕಾಟನ್ ಟೆಕ್ಸ್‌ಟೈಲ್ ಮಿಲ್ಸ್ ಅಸೋಸಿಯೇಷನ್‌ನ ಶ್ರೀ ಶ್ರೀನಿವಾಸಯ್ಯನವರು ವಿಷಯ ತಿಳಿದುಕೊಂಡಂಥವರು, ಅವರು ಏನು ಹೇಳುತ್ತಾರೆ ಎಂದರೆ, Cotton exported. so prices

are going up and so the crisis in the industry. ಎಂದು ಇದು ನಿಜವಲ್ಲ. It is true that cotton prices go up and down, according to seasonal fluctuation. ಇದು ನಿಜ. ಆದರೆ ಮಧ್ಯೆ ಏನು ಮಾಡಬೇಕು ? ಕಾಟನ್‌ಗೆ ಸರಿಯಾಗಿ ಪ್ರೈಸ್ ಫಿಕ್ಸ್ ಮಾಡಿಕೊಂಡು ಸರ್ಕಾರ ಮಿಲ್ಲ್‌ಗಳಿಗೆ ಒದಗಿಸುವ ಜವಾಬ್ದಾರಿ ಕೂಡ ಅವರದು ಹೌದು. ನಾವೇ ಕೊಂಡುಕೊಳ್ಳುತ್ತೇವೆ. ರೈತರಿಗೆ ನ್ಯಾಯವಾದ ಬೆಲೆಯನ್ನು ನಿಗದಿ ಮಾಡುತ್ತೇವೆ ಎಂದು ಈ ರೀತಿಯಾಗಿ ಮಾತನಾಡುವಂಥ ವಿಚಾರಧಾರೆ ಇವತ್ತಿನ ದಿವಸ ಜನತಾಪಕ್ಷದ ಸರ್ಕಾರಕ್ಕೆ ಇದೆಯೋ ಎಂದು ಕೇಳಬೇಕಾಗುತ್ತದೆ. ಇದು ಇದ್ದರೆ ಈ ಪರಿಸ್ಥಿತಿ ಬರುವುದಿಲ್ಲ. ಕೇಳುವು ದಕ್ಕೆ ಹೋದರೆ ಪರಿಸ್ಥಿತಿ ಬಿಗಡಾಯಿಸುತ್ತಿದೆ. ಬೇರೆ ಕಡೆ ಮಾಡಿದ್ದಾರೆ. ಮಹಾರಾಷ್ಟ್ರದಲ್ಲಿ ಕಾಟನ್ ಟೆಕ್ಸ್‌ಟೈಲ್ ಕಾರ್ಪೊರೇಷನ್‌ನವರು ಮಾಡಿದ್ದಾರೆ. ದತ್ ಸಾಮಂತ್ ಅವರ ಒಂದೂವರೆ ವರ್ಷಕಾಲ ಹೋರಾಟ ನಡೆದು ಮೂವತ್ತು ಮಿಲ್‌ಗಳನ್ನು ಮಹಾರಾಷ್ಟ್ರ ಟೆಕ್ಸ್‌ಟೈಲ್ ಕಾರ್ಪೊರೇಷನ್‌ನವರ್ ತೆಗೆದುಕೊಂಡಿದ್ದಾರೆ. ಆ ಧೈರ್ಯ ಬಂದದ್ದು ಹೇಗೆ ? ಕಾಟನ್ ಟೆಕ್ಸ್‌ಟೈಲ್ ಕಾರ್ಪೊರೇಷನ ನವರು ಹೋಲ್‌ಸೇಲ್ ಆಗಿ ಕೊಂಡುಕೊಂಡು ಮಾರಾಟ ಮಾಡುತ್ತಿದ್ದಾರೆ. ಕಚ್ಚಾ ಮಾಲುಗಳು ಸಿಗುತ್ತದೆ. ಬೊಂಬಾಯಿಯಲ್ಲಿ ಒಂದು ನಾರ್ಮ್ಸ್ ಇದೆ. ಚರ್ಚೆಮಾಡಿ ತೀರ್ಮಾನ ಮಾಡಿಕೊಂಡು ದ್ದಾರೆ. ಆ ಆಧಾರದಮೇಲೆ ಕೆಲಸ ನಡೆಯುತ್ತಿದೆ. ಏಳೆಂಟು ಮಿಲ್ಲ್‌ಗಳು ರೋಗಗ್ರಸ್ಥವಾಗಿವೆ. ಆದರೆ ಅವರು ಹೋಗತಕ್ಕ ದಾರಿ ಸರಿ ಇದೆ. ನೀವು ಹೋಗತಕ್ಕ ದಾರಿಯಲ್ಲಿ ಹೋದರೆ ಪರಿಸ್ಥಿತಿ ಬದಲಾವಣೆ ಹೇಗೆ ಸಾಧ್ಯ ? ನಿಮ್ಮ ವಿಚಾರಧಾರೆಯನ್ನು ಸ್ವಲ್ಪ ಬದಲಾವಣೆ ಮಾಡಿಕೊಳ್ಳಬೇಕು ಇದು ಬಹಳ ಮುಖ್ಯವಾದ ವಿಚಾರ. ಇನ್ನೊಂದು ಮಾತನ್ನು ಏನು ಹೇಳುತ್ತಾರೆ ಎಂದರೆ 'workers are not cooperating' ಎಂದು. ಇದಕ್ಕಿಂತ ಸುಳ್ಳು ಯಾವುದೂ ಇಲ್ಲ. ಕಾರ್ಮಿಕರು ಬರೀ ದುಡ್ಡು ಬೇಕೆಂದು ಹೇಳುತ್ತಾರೆ, ಕೈಗಾರಿಕೆ ಬಗ್ಗೆ ಅವರಿಗೆ ಕಾಳಜಿ ಇಲ್ಲ. ತಮ್ಮ ಜವಾಬ್ದಾರಿಯನ್ನು ಅವರು ತಿಳಿದುಕೊಂಡಿಲ್ಲ ಎಂದು ಭಾವನೆ ಬಹಳ ಮಂದಿಗೆ, ಈ ಮನೆಯಲ್ಲಿರ ತಕ್ಕಂಥ ಅನೇಕರಿಗೆ ಇದೆ. ನಾನು ಯಾರನ್ನೂ ದೂರುತ್ತಿಲ್ಲ. ಈ ಅಭಿಪ್ರಾಯ ಬಹಳ ಜನರಿಗೆ ಇದೆ. ಆದರೆ ಇದು ಸತ್ಯಕ್ಕೆ ದೂರವಾದದ್ದು. ಏಕೆಂದರೆ ಕಾರ್ಮಿಕರು ಏಕೆ ಕೋಆಪರೇಟ್ ಮಾಡುವುದಿಲ್ಲ ?

ಶ್ರೀ ಕೃಷ್ಣ.—ಇಂಟರ್‌ನ್ಯಾಷನಲ್ ಲೇಬರ್ ಆರ್ಗನೈಸೇಷನ್‌ನದರು ಒಂದು ಸಮೀಕ್ಷೆ ಮಾಡಿದ್ದಾರೆ. ಆ ಸಮೀಕ್ಷೆ ಪ್ರಕಾರ ಒಬ್ಬ ಜಪಾನ್ ಕಾರ್ಮಿಕ ನಲ್ವತ್ತು ಜನ ಇಂಡಿಯಾ ದೇಶದ ಕಾರ್ಮಿಕರಿಗೆ ಸಮಾನ ಎಂದು. ನಮ್ಮ ಕಾರ್ಮಿಕರು ಎಷ್ಟು ದಕ್ಷತೆಯಿಂದ ಕೆಲಸ ಮಾಡುತ್ತಾರೆ ಎಂದು ಇದರಿಂದ ವ್ಯಕ್ತವಾಗುತ್ತದೆ. ಅವರು ಎಷ್ಟರಮಟ್ಟಿಗೆ ಕೋಆಪರೇಷನ್ ಕೊಡುತ್ತಾರೆ ಎಂದು ತಿಳಿಯುತ್ತದೆ.

ಶ್ರೀ ಎಂ. ಎಸ್. ಕೃಷ್ಣನ್.—ಒಬ್ಬ ಸೋವಿಯತ್ ರಷ್ಯಾ ಕಾರ್ಮಿಕ ೫೦ ಜನ ನಮ್ಮ ದೇಶದ ಒಬ್ಬ ಕಾರ್ಮಿಕರಿಗೆ ಸಮಾನ ಎಂದೂ ಕೂಡ ನಾನು ಕೇಳಿದ್ದೇನೆ.

ಶ್ರೀ ಕೆ. ಎಚ್. ಪಾಟೀಲ್.—ನಾವು ಅವರಿಗೆ ಟ್ರೈನಿಂಗ್ ಕೊಟ್ಟಿಲ್ಲ.

ಶ್ರೀ ಕೃಷ್ಣ.—ನಮ್ಮಲ್ಲಿ ಒಂದು ಭಾವನೆ ಇದೆ. ಟ್ರೇಡ್‌ಯೂನಿಯನ್‌ಗಳು ಅದು ಕಾಂಗ್ರೆಸ್, ಕಮ್ಯುನಿಸ್ಟ್, ಜನತಾಪಕ್ಷ ಇರಲಿ ಆ ಪಕ್ಷದ ಸಿದ್ಧಾಂತದ ಬಗ್ಗೆ ಏನೂ ಹೇಳುವುದಿಲ್ಲ. ಬೋನಸ್ ಬೇಕು, ಜಾಸ್ತಿ ಸಂಬಳ ಬೇಕು ಎಂದು ಅವರ ತಲೆಯಲ್ಲಿ ತುಂಬಿದ್ದಾರೆ. ಈ ಕಾರಣದಿಂದ ಎಕನಾಮಿಸಂ ಅನ್ನು ಟ್ರೇಡ್ ಯೂನಿಯನ್‌ನವರು ಟೀಚ್ ಮಾಡುತ್ತಿದ್ದಾರೆ. ಈ ಕಾರಣದಿಂದ ಈ ವ್ಯವಸ್ಥೆ ಬಂದಿದೆಯೆಂದರೆ ತಪ್ಪಾಗಲಾರದು.

ಶ್ರೀ ಎಂ. ಎಸ್. ಕೃಷ್ಣನ್.— ನಮ್ಮ ಸ್ನೇಹಿತರು ಹೇಳಿದರು, ಅವರ ಹೆಸರೂ ನನ್ನ ಹೆಸರೇ, ದುರದೃಷ್ಟವಶಾತ್ ಅಥವಾ ಅದೃಷ್ಟವಶಾತ್ತೋ ಗೊತ್ತಿಲ್ಲ. ನಾನು ಬೇರೆ ಕಡೆಗೂ ಹೋಗಿ ನೋಡಿ ದ್ದೇನೆ. ನಮ್ಮ ದೇಶದ ಕಾರ್ಮಿಕರಿಗೆ ಎಷ್ಟು ಕುಶಲತೆ ಇರಬೇಕೋ ಅಷ್ಟು ಕುಶಲತೆ ಇದೆ. ನಮ್ಮ ಕಾರ್ಮಿಕರಲ್ಲಿ ಯಾವರೀತಿಯಲ್ಲೂ ಕುಶಲತೆ ಕಡಿಮೆ ಆಗಿಲ್ಲ...

ಶ್ರೀ ಎಂ. ಎನ್. ಅಡ್ಯಂತಾಯ.— ಮಾನ್ಯ ಅಧ್ಯಕ್ಷರೇ, ಈಗತಾನೆ ಒಬ್ಬ ಜಪಾನ್ ಕಾರ್ಮಿಕ, ೪೦ ಜನ ಭಾರತ ದೇಶದ ಕಾರ್ಮಿಕನಿಗೆ ಸಮ ಎಂದು ಹೇಳಿದರು. ಜಪಾನಿನಲ್ಲಿ ಯಾವ ಇಂಡಸ್ಟ್ರಿಯಾ ಲಿಸ್ಟ್ ಇದ್ದಾರೆ, they treat employees part and parcel of the company even after their retirement, they provide all amenities. ಇಲ್ಲಿಯ ಯಾವ ಮಾಲೀಕ ಇದ್ದಾನೆ, ಆ ರೀತಿ ಮಾಡುತ್ತಾನೆಯೋ ಎಂದು ತಮ್ಮಲ್ಲಿ ಹೇಳುವುದಕ್ಕೆ ಬಯಸು ತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್.—ಜಪಾನ್ ಬಗ್ಗೆ ಅವರಿಗೆ ಗೊತ್ತಿದೆ, ಅವರು ಹೇಳಿದ್ದಾರೆ. ಕಾರ್ಮಿಕರಿಗೆ ಈ ಸಮಾಜ ನನ್ನದು, ಈ ದೇಶ ನನ್ನದು, ವಿನಾ ಕಾರಣ ಯಾರೂ ಶೋಷಣೆ ಮಾಡುವುದಿಲ್ಲ, ಮೋಸ ಮಾಡುವುದಿಲ್ಲ. ಹಗಲಿಗೆ ಹಗಲು ಕೊಟ್ಟು ದುಡಿಯುತ್ತೇವೆ ಎನ್ನುವ ಅಭಿಪ್ರಾಯ ಬಂದರೆ ಎಲ್ಲರೂ ಮುಂದೆ ಮುಂದೆ ಹೋಗುತ್ತಾರೆ. ನಾನು ಈಗಾಗಲೇ ಕೆ. ಆರ್. ಮಿಲ್ ಬಗ್ಗೆ ಹೇಳಿದೆ. ಅವರು ಅಲ್ಲಿ ಕೆಲಸ ಮಾಡಲಿಲ್ಲ ಎಂದು ಹೇಳಿದರೆ ಯಾರಾದರೂ ನಗುತ್ತಾರೆ. ಅಲ್ಲಿ ಶ್ರಮವಹಿಸಿ ಕೆಲಸ ಮಾಡಿದ್ದಾರೆ, ಬೇಕಾದಷ್ಟು ಲಾಭ ಮಾಡಿಕೊಟ್ಟಿದ್ದಾರೆ. ಆದರೂ ಸಹ ಕಡಿಮೆ ಸಂಬಳ ಮಾಡಿದ್ದಾರೆ. ಮಾಲೀಕ ತಿಂದುಹಾಕಿ, ಕಾರ್ಮಿಕರ ಮೇಲೆ ಗೂಬೆ ಕೂರಿಸುವುದು ಸರಿಯಲ್ಲ. ಕಾರ್ಮಿಕ ಕಷ್ಟಪಟ್ಟು ಕೆಲಸ ಮಾಡುತ್ತಿದ್ದಾನೆ, ಅವನದೇ ಸರ್ಕಾರ, ಅವನೇ ತೀರ್ಮಾನ ಮಾಡುವವನು. ತೀರಾ ಕೆಳಗಿನಿಂದ, ಮೇಲಿನವರೆಗೂ ಅವನಿಗೆ ಅಧಿಕಾರ ಇದೆ, ಪರ್ಚೇಸ್ ಮಾಡುವುದೂ ಅವನೇ ತೀರ್ಮಾನ ಮಾಡುತ್ತಾನೆ. ಆದುದರಿಂದ, ನಾವು ಮಾಲೀಕರಲ್ಲಿ ಆಗುತ್ತಿರುವ ಅನ್ಯಾಯವನ್ನು ತಡೆಯೋಣ, ಅದು ಬಿಟ್ಟು ಭಾರತ ದೇಶದ ಕಾರ್ಮಿಕರ ಬಗ್ಗೆ ತಾವು ಈ ರೀತಿ ಹೇಳಿದರೆ ಚೆನ್ನಾಗಿರುವುದಿಲ್ಲ. ನಮ್ಮ ದೇಶದ ಕಾರ್ಮಿಕರು ಬೇರೆ ಕಡೆಯೂ ಇದ್ದಾರೆ, ಬಹಳ ಉತ್ತಮವಾಗಿ ಕೆಲಸ ಮಾಡುತ್ತಾರೆಂದು ಹೇಳುತ್ತಿದ್ದಾರೆ. ನಾನು ಒಂದು ಸಾರಿ ಪಶ್ಚಿಮ ಜರ್ಮನಿಗೆ ಒಂದು ಕಾನ್‌ಫರೆನ್ಸ್‌ಗೆ ಹೋಗಿದ್ದೆ. ಅಲ್ಲಿ ಒಬ್ಬ ನಮ್ಮ ದೇಶದ ಕಾರ್ಮಿಕ ಹೆಚ್.ಎಂ.ಟಿ. ಫ್ಯಾಕ್ಟರಿಯಲ್ಲಿ ಕೆಲಸ ಮಾಡುತ್ತಿದ್ದರು. ಅಲ್ಲಿಯ ಮ್ಯಾನೇಜಿಂಗ್ ಡೈರೆಕ್ಟರ್ ಹೇಳಿದರು. ಇವರು ನಮ್ಮ ಇಡೀ ಫ್ಯಾಕ್ಟರಿಯಲ್ಲಿ ಅತ್ಯುತ್ತಮ ಕೆಲಸಗಾರರು ಎಂದು. ಆದ್ದರಿಂದ ಭಾರತ ದೇಶದ ಕಾರ್ಮಿಕರನ್ನು ಅಂಡರ್ ಎಸ್ಟಿಮೇಟ್ ಮಾಡುವುದು ಬೇಡ. ನಾನು ಇಷ್ಟು ಮಾತ್ರ ಹೇಳಬಲ್ಲೆ. ಬೇರೆ ಬೇರೆ ಕಡೆಗಳಲ್ಲಿ ಏನೇನು ಅನುಕೂಲತೆಗಳು ಇವೆ, ಸಂಬಳ ಸಾರಿಗೆಗಳು ಇವೆ, ಟೆಕ್ನಾಲಜಿ ಏನಿದೆ ಅದರಂತೆ ನಮ್ಮಲ್ಲೂ ಮಾಡಿ, ನಮ್ಮವರೂ ಮುಂದುವರಿಯುತ್ತಾರೆ.

ಶ್ರೀ ಕೃಷ್ಣ.—ನಮ್ಮ ಕಾರ್ಮಿಕರದ್ದು ತಪ್ಪು ಎಂದು ನಾನು ಹೇಳುವುದಿಲ್ಲ. ಈ ಟ್ರೇಡ್ ಯೂನಿಯನ್‌ಗಳು ಏನಿವೆ, ಅವು ಕಾರ್ಮಿಕರನ್ನು ತಪ್ಪು ದಾರಿಗೆ ಎಳೆಯುತ್ತಿವೆ. ಪ್ರಿನ್ಸಿಪಲ್ಸ್‌ಗಳನ್ನು ಎಲ್ಲಾ ತಿಳಿದುಕೊಂಡು, ಕಾರ್ಮಿಕರನ್ನು ಈ ಸಂಘಗಳವರು ತಪ್ಪು ದಾರಿಗೆ ಎಳೆಯುತ್ತಿದ್ದಾರೆ...

ಶ್ರೀ ಎಂ. ಎಸ್. ಕೃಷ್ಣನ್.—ಇದು ತಪ್ಪು ಅಭಿಪ್ರಾಯ, ಇದು ಮಾಲೀಕರ ಪರವಾಗಿರುವ ಅಭಿಪ್ರಾಯ. ಮಾನ್ಯ ಶಾಸಕರು ದಯಮಾಡಿ ಈ ಅಭಿಪ್ರಾಯವನ್ನು ತಮ್ಮ ತಲೆಯಿಂದ ತೆಗೆದು ಹಾಕಬೇಕು. ಕಾರ್ಮಿಕರೇನೂ ಸಿಕ್ಕಾಪಟ್ಟೆ ಕೇಳುತ್ತಿಲ್ಲ. ಇವತ್ತಿನ ಬೆಲೆಗಳು ಜಾಸ್ತಿಯಾಗಿವೆ, ನಮಗೂ ಸ್ವಲ್ಪ ಸಂಬಳ ಜಾಸ್ತಿ ಕೊಡಿ, ತುಟ್ಟಿಭತ್ಯೆ ಕೊಡಿ, ಇತ್ಯಾದಿ ಸೌಲಭ್ಯಗಳನ್ನು ಕೊಡಿ ಎಂದು ಕೇಳುವುದು, ಮಾತುಕತೆ ನಡೆಸುವುದು ತಪ್ಪೆ ? ಅವರಿಗಿರತಕ್ಕಂಥ ಹಕ್ಕು, ಸಂಘಟನೆ, ಮುಷ್ಕರ ಇದನ್ನು ನಡೆಸುವುದು ತಪ್ಪೆ ? ಇವತ್ತು ಮಾಲೀಕರು ತಿಂದುಕೊಂಡು, ಮಹಡಿ ಮನೆ ಮಾಡಿಕೊಳ್ಳುತ್ತಿದ್ದಾರೆ. ಹಾಗಾದರೆ ಬೆಲೆಗಳನ್ನು ಕಡಿಮೆ ಮಾಡಿ. ಹಾಗಾದರೆ ಈ ಸಮಾಜವನ್ನು ಸರಿ ಮಾಡಿ, ಸಮಾಜದ್ದು ತಪ್ಪು. ಇವತ್ತು ನಾವು ಕಾರ್ಮಿಕರನ್ನು ತೆಗೆಳಬಾರದು...

ಶ್ರೀ ಎಸ್. ಬಂಗಾರಪ್ಪ.—ಎಲ್ಲೋ ಒಂದು ಕಡೆ ನಡೆಯಬಹುದು...

SRI M. S. KRISHNAN.—In a basket, there are bad eggs and good eggs. ಆ ರೀತಿ ಇಲ್ಲ. ಐ.ಎನ್.ಟಿ.ಸಿ., ಸಿ.ಐ.ಟಿ.ಯು., ಹೆಚ್.ಎಂ.ಎಸ್., ಬಿ.ಎಂ.ಎಸ್. ಎಲ್ಲರೂ ಇದೇ ಅಭಿಪ್ರಾಯ ಇಟ್ಟುಕೊಂಡಿದ್ದಾರೆ.

೩–೩೦ ಪಿ.ಎಂ.

ಹೆಚ್.ಎಂ.ಟಿ. ಯಲ್ಲಿ ವರ್ಕರ್ಸ್ ಪಾರ್ಟಿಸಿಪೇಷನ್ ಇನ್ ಮ್ಯಾನೇಜ್‌ಮೆಂಟ್ ಕ್ಯಾಂಪೇನ್ ಇತ್ತು. ಅಲ್ಲಿ ೩೩ ಮೆಷಿನ್ಸ್ ಮಾಡುತ್ತಿದ್ದರು. ಅಲ್ಲಿಗೆ ಪಂಡಿತ್ ಜವಹರಲಾಲ್ ನೆಹರೂರವರು ಬರುತ್ತಾರೆಂದು ಒಂದು ಪ್ರೋಗ್ರಾಂ ಇತ್ತು. ಔಟ್ ಆಫ್ ಟರ್ನ್ ವಿಸಿಟ್ ಅವರು ಬಂದರು. ಆಗ ಅಲ್ಲಿನ ಮ್ಯಾನೇಜರ್‌ರವರು ನಮ್ಮನ್ನು ಕೇಳಿದರು, ಈಗ ೩೩ ಮೆಷಿನ್ಸ್ ಮಾಡುತ್ತಿದ್ದೀರಿ, ಅದನ್ನು ೫೩ ಮಾಡಿಕೊಡಿ, ೨೦ ಜಾಸ್ತಿ ಮಾಡಿಕೊಡಿ ಎಂದು ಕೇಳಿದರು. ಇದು ಮಾನ್ಯ ಸಚಿವರಾದ ಮುನಿಯಪ್ಪನವರಿಗೂ ಗೊತ್ತು. ಆಗ ಅವರು ನಮ್ಮ ಜೊತೆ ಸಹಪಾಠಿಗಳಾಗಿದ್ದರು ಇದರ ಬಗ್ಗೆ ಚರ್ಚೆ ನಡೆದಾಗ ನಾವು ಹೇಳಿದೆವು, ನೀವು ಇದರ ಬಗ್ಗೆ ಕಾರ್ಮಿಕರಿಗೆ ಸರಿಯಾದ ಅನುಕೂಲತೆಗಳನ್ನು ಮಾಡಿಕೊಡಬೇಕು ಎಂದು ಕೇಳಿದೆವು. ಪ್ರೊಡಕ್ಷನ್ ಲೈನ್ ಪ್ರಾಡಕ್ಟ್ ಇದೆಲ್ಲಾ ಸರಿಯಾಗಿ ಮಾಡಿ

ಕೊಡಬೇಕು, ಅದು ಯಾವರೀತಿ ಸರಿಯಾಗಿ ಬರಬೇಕು ಎಂದು ಹೇಳಿದರು. ನಾವು ಇದರ ಬಗ್ಗೆ ಕಮಿಟಿಯಲ್ಲಿ ಚರ್ಚೆ ಮಾಡಿ ೫೫ ರಿಂದ ೮೦ ಮೆಷಿನ್ಸ್ ಕೊಡುತ್ತೇವೆ ಎಂದು ಹೇಳಿದ್ದೆವು. ಅದೇ ರೀತಿ ೮೦ ಮೆಷಿನ್ಸ್ ಕೊಟ್ಟೆವು. ಮಾನ್ಯ ಜವಹರಲಾಲ್ ನೆಹರೂರವರು, ಜಯಚಾಮರಾಜ ಒಡೆಯರ್ ರವರು, ಮನೂಭಾಯಿ ಶಹಾರವರು ಎಲ್ಲಾ ಬಂದರು. ನಮ್ಮ ಯೂನಿಯನ್‌ಗೆ ಶಹಬಾಸ್‌ಗಿರಿ ಯನ್ನೂ ಕೊಟ್ಟರು. ಆದರೆ ಶಹಬಾಸ್‌ಗಿರಿ ದೊಡ್ಡದಲ್ಲ. ಕಾರ್ಮಿಕರಿಗೆ ಮಾಡುವುದಕ್ಕೆ ಶಕ್ತಿ ಇದೆ ಎಂದು ಹೇಳುತ್ತೇನೆ.

ಶ್ರೀ ಕೆ. ಎಂ. ಮುನಿಯಪ್ಪ (ರೇಷ್ಮೆ ಖಾತೆ ರಾಜ್ಯ ಸಚಿವರು).—ಮಾನ್ಯ ಕೃಷ್ಣನ್‌ರವರು ಒಂದು ನಿಮಿಷ ಈಲ್ಡ್ ಆಗುವುದಾದರೆ ಒಂದು ವಿಚಾರ ಹೇಳುತ್ತೇನೆ. ಇಷ್ಟು ಹೊತ್ತು ಮಾನ್ಯ ಕೃಷ್ಣನ್‌ರವರು ಹೇಳಿದರು. ಪಂಡಿತ್ ನೆಹರೂರವರು ಬಂದರು, ಮನೂಭಾಯಿ ಶಹಾರವರು ಬಂದರು ಎಂದು ಹೇಳಿದರು. ಅವರು ಬಂದದ್ದೆಲ್ಲಾ ನಿಜ. ವರ್ಕರ್ಸ್ ಪಾರ್ಟಿಸಿಪೇಷನ್ ಇನ್ ಮ್ಯಾನೇಜ್‌ಮೆಂಟ್ ಅದೆಲ್ಲಾ ನಿಜ. ಆದರೆ ಆಮೇಲೆ ಅಲ್ಲಿ ಜಾಯಿಂಟ್ ಕೌನ್ಸಿಲ್ ಆಫ್ ಮ್ಯಾನೇಜ್‌ಮೆಂಟ್‌ನಲ್ಲಿ ನಮ್ಮನ್ನು ಕೆಲಸ ಮಾಡುವುದಕ್ಕೆ ಬಿಟ್ಟರೇ? ನಮ್ಮನ್ನೇ ಅಲ್ಲಿಂದ ಹೊರಗೆ ಹಾಕಿದರು. ಹಾಕುವಂತಹ ಪರಿಸ್ಥಿತಿ ಅಲ್ಲಿ ಬಂತು. ಈ ವಿಷಯವನ್ನು ತಮಗೆ ಜ್ಞಾಪಿಸುತ್ತಿದ್ದೇನೆ.

ಶ್ರೀ ಎಂ. ಎಸ್. ಕೃಷ್ಣನ್.—ಅದೊಂದು ಕಥೆ. ಏನು ಮಾಡುವುದು ಹೇಳಿ. ಏನೋ ದೇಶಕ್ಕೆ ಒಳ್ಳೆಯದಾಗಲಿ ಎಂದು ನಾನೂ ಮಾನ್ಯ ಮುನಿಯಪ್ಪನವರೂ ಮಾಡಿದೆವು. ಆಮೇಲೆ ಅಲ್ಲಿ ಕೆಲವು ಪಟ್ಟಭದ್ರ ಹಿತಗಳು ಸೇರಿಕೊಂಡು ನಮ್ಮನ್ನೇ ಹೊಡೆಯುವುದಕ್ಕೆ ಬಡಿಯುವುದಕ್ಕೆ ಪ್ರಯತ್ನ ಪಟ್ಟರು. ಮ್ಯಾನೇಜ್‌ಮೆಂಟ್‌ನವರು ಅದಷ್ಟು ಕೆಲಸ ಮಾಡಿಸಿಕೊಂಡರು. ಅನುಕೂಲ ಮಾಡಿ ಕೊಡಿ ಎಂದರೆ ಅವರನ್ನೇ ಡಿಸ್‌ಮಿಸ್ ಮಾಡಿದರು. ನಮ್ಮನ್ನೂ ಹೊರಗಟ್ಟಿದರು. ಜೈಲಿಗೆ ಕಳುಹಿಸಿದರು. ಅದನ್ನೆಲ್ಲಾ ಅನುಭವಿಸಿದ್ದೇವೆ. ಈ ಒಂದು ಕೆಟ್ಟ ಮನೋಭಾವ ಬ್ಯೂರಾಕ್ರಸಿ ಯಲ್ಲೂ ಇದೆ. ಪಬ್ಲಿಕ್ ಸೆಕ್ಟರ್ ಮ್ಯಾನೇಜ್‌ಮೆಂಟ್‌ನಲ್ಲೂ, ಬ್ಯೂರಾಕ್ರಸಿಯಲ್ಲಿ ಕೆಟ್ಟವರಿದ್ದಾರೆ. ಈ ರೀತಿ ನಡೆದುಕೊಳ್ಳುತ್ತಾರೆ. ಇದು ಹೋಗಬೇಕು, ಇದನ್ನು ಹೆಚ್ಚು ಮಾಡುವುದು ಬೇಡ. ಇದನ್ನು ಸರಿ ಮಾಡಬೇಕು. ಇಷ್ಟು ಮಾತ್ರ ಇದರ ಬಗ್ಗೆ ಹೇಳಿ ದಾವಣಗೆರೆ ಮಿಲ್‌ಗಳ ಬಗ್ಗೆ ಮಾತನಾಡುತ್ತೇನೆ. ಇವತ್ತಿನ ದಿವಸ ದಾವಣಗೆರೆ ವರ್ಕರ್ಸ್ ವರ್ಕ್‌ಲೋಡ್‌ಗೂ ಸಹ ಒಪ್ಪಿ ಕೊಂಡಿದ್ದಾರೆ. ಆಂಜನೇಯ ಮಿಲ್ಸ್‌ನವರು ''ಸಿಟ್ರಾ'' ಆಧಾರದ ಮೇಲೆ ವರ್ಕ್‌ಲೋಡ್ ಮಾಡಿ ದ್ದಾರೆ. ಅದೇ ರೀತಿ ಇಲ್ಲೂ ಮಾಡುತ್ತೇವೆ ಎಂದು ಒಪ್ಪಿಕೊಂಡಿದ್ದಾರೆ. ಈ ರೀತಿ ಒಪ್ಪಿಕೊಂಡಿ ದ್ದರೂ ಸಹ ಇವತ್ತಿನ ದಿವಸ ಮಿಲ್ಸ್ ಯಾವುದೂ ತೆಗೆದಿಲ್ಲ. ಇವರೂ ಕೂಡ ಒಂದು ಸಭೆ ನಡೆಸಿದರು, ಅದರಲ್ಲಿ ನಾನೂ ಕೂಡಾ ಇದ್ದೆ, ಅದರ ಬಗ್ಗೆ ನನ್ನ ಶ್ಲಾಘನೆ ಇದೆ, ಆದರೆ ಪರಿಣಾಮ ಮಾತ್ರ ಜೀರೋ ಆಗಿದೆ. ಕಾರ್ಮಿಕರಿಗೆ ಬರಬೇಕಾದುದು ಏನೂ ಬಂದಿಲ್ಲ. ೧೯೮೫–೮೬ರ ಬೋನಸ್ ಬಂದಿಲ್ಲ. ಒಂದು ತಿಂಗಳ ಸಂಬಳ ಅದೂ ಹೋದ ವರ್ಷದ್ದು ಬಂದಿಲ್ಲ. ಲೇ ಆಫ್ ಅಮೌಂಟ್ ನಾಲ್ಕು ತಿಂಗಳದ್ದು ಕೊಟ್ಟಿಲ್ಲ. ಕ್ಲೋಷರ್ ಸಂಬಳ ನಾಲ್ಕು ತಿಂಗಳದ್ದು ಕೊಟ್ಟಿಲ್ಲ. ಕ್ಲೋಷರ್ ಮಾಡುವುದಕ್ಕೆ ಇವರಿಗೆ ಅಧಿಕಾರ ಇಲ್ಲ, ವಿಥೌಟ್ ಪರ್ಮಿಷನ್ ಕ್ಲೋಷರ್ ಮಾಡಿ ದ್ದಾರೆ. ಗೌರ್ನಮೆಂಟ್ ಪರ್ಮಿಷನ್ ಕೊಡದೇ ಹೋದರೂ ಸಹ ಕ್ಲೋಷರ್ ಮಾಡಿದ್ದಾರೆ. ಕೇಳಿದರೆ ಏನು ಹೇಳುತ್ತಾರೆ ಎಂದರೆ, ಮೀಟಿಂಗ್ ನಡೆಸುತ್ತೇವೆ ಎಂದು ಹೇಳುತ್ತಾರೆ. ನೋಟೀಸ್ ಕೊಟ್ಟಿದ್ದಾರೆ. ನಿಮ್ಮನ್ನು ಪ್ರಾಸಿಕ್ಯೂಟ್ ಮಾಡುತ್ತೇವೆ ಎಂದು ಒಂದು ಎರಡು ಮೂರು ನಾಲ್ಕು ನೋಟೀಸ್‌ಗಳನ್ನು ಕೊಟ್ಟಿದ್ದಾರೆ. ಎಷ್ಟು ದೂರ ಪ್ರಾಸಿಕ್ಯೂಷನ್ ನಡೆದಿದೆ ಎಂದು ನನಗೆ ಗೊತ್ತಿಲ್ಲ. ಪ್ರಾಸಿಕ್ಯೂಷನ್ ನಡೆಯುವುದರಿಂದ ಮಿಲ್ ಚಾಲೂ ಆಗುತ್ತದೆಂಬ ಅಭಿಪ್ರಾಯ ನನಗೆ ಇಲ್ಲ. ತಾವು ಬೇರೆ ರೀತಿ ಅವರು ಬೇರೆ ರೀತಿ ಹೇಳುತ್ತಿದ್ದಾರೆ. ಒಂದು ಕೋಟಿ ರೂಪಾಯಿ ಸರಕಾರ ಕೊಟ್ಟರೆ ಸಾಕು ದಾವಣಗೆರೆಯ ಸಿದ್ದೇಶ್ವರ, ಚಿಗಟಗೇರಿ, ಗಣೇಶ ಮಿಲ್ ಈ ಮೂರೂ ಮಿಲ್‌ಗಳು ನಡೆಯಬಹುದು. ಗಣೇಶ ಮತ್ತು ಸಿದ್ದೇಶ್ವರದಲ್ಲಿ ೨೫ ಸಾವಿರ ಸ್ಪಿಂಡಲ್ಸ್ ಇದೆ. ಚಿಗಟಗೇರಿಯಲ್ಲಿ ಹನ್ನೆರಡೂವರೆ ಸಾವಿರ ಇದೆ. ಅದು ಸ್ವಲ್ಪ ಚಿಕ್ಕದು. ಇವತ್ತಿನ ದಿವಸ ಇಬ್ಬರಿಗೆ ೪೦–೪೦ ಲಕ್ಷ ಮತ್ತು ಇನ್ನೊಬ್ಬರಿಗೆ ೨೦ ಲಕ್ಷ ಕೊಟ್ಟರೆ ಮಿಲ್‌ಗಳು ಸಿದ್ಧವಾಗುತ್ತವೆ ಎಂದು ಹೇಳು ತ್ತಿದ್ದಾರೆ. ಕಾರ್ಮಿಕರ ಸಹಕಾರ ಪಡೆದರೆ ಇವುಗಳನ್ನು ನಡೆಸುವುದಕ್ಕೆ ಸಾಧ್ಯವಾಗುತ್ತದೆ ಎಂದು ಹೇಳುತ್ತಿದ್ದಾರೆ. ಈ ಹಣವನ್ನು ನೀವು ಕೊಡಬೇಕು. ಹಣವನ್ನೂ ಅವರೇ ಹೊಂದಿಸಿಕೊಳ್ಳಲಿ ಎಂದು ಹೇಳಿದರೆ ನಮಗೆಲ್ಲಿ ಆಗುತ್ತದೆ ಎಂದು ಹೇಳುತ್ತಾರೆ. ನೀವು ಬ್ಯಾಂಕ್‌ಗಳಿಂದ, ಐ.ಡಿ.ಬಿ.ಐ. ನಿಂದ ತಂದು ಕೊಡಬೇಕು. ಅಲ್ಲಿ ನೀವು ಒತ್ತಾಯ ಮಾಡಿದರೆ ಇದು ಆಗುತ್ತದೆ ಅವರನ್ನು ಹೇಗೆ

ಒಪ್ಪಿಸುವುದು ಎಂದು ಮಾನ್ಯ ಮಂತ್ರಿಗಳು ಕೇಳಿದರೆ ಅದಕ್ಕೆ ನಾನು ಹೇಳಬೇಕಾಗುತ್ತದೆ. ಇವತ್ತಿನ ದಿವಸ ರಾಜ್ಯದಲ್ಲಿ ಒಂದು ಕಡೆ ಮಿಲ್‌ಗಳು ಮುಚ್ಚಿಕೊಂಡು ಹೋಗಿದೆ. ಇನ್ನೊಂದು ಕಡೆ ಹೊಸ ಮಿಲ್‌ಗಳನ್ನು ಸ್ಥಾಪನೆ ಮಾಡುವುದಕ್ಕೆ ಪ್ರಯತ್ನ ನಡೆಯುತ್ತಿದೆ.

ಹೊಸದಾಗಿ ಮಿಲ್ಲ್‌ಗಳನ್ನು ಪ್ರಾರಂಭ ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದೀರಿ. ಸಹ್ಯಾದ್ರಿ ಮಿಲ್ಲ್. ಇನ್ನೊಂದು ರಾಣಿಬೆನ್ನೂರು ತಾಲ್ಲೂಕಿನಲ್ಲಿ ತುಂಗಭದ್ರ ಕೋ ಆಪರೇಟೀವ್ ಟೆಕ್ಸ್‌ಟೈಲ್ ಮಿಲ್ಲ್‌ನ್ನು ಪ್ರಾರಂಭ ಮಾಡುವುದಕ್ಕೆ ನೀವೇ ಹೆಚ್ಚು ಆಸಕ್ತಿ ವಹಿಸಿದ್ದೀರಿ. ಸಹ್ಯಾದ್ರಿಗೆ ನೀವೇ ಚೇರ್ಮನ್ನರು. ೧೦.೫ ಕೋಟಿ ರೂಪಾಯಿಗಳ ಬಂಡವಾಳವನ್ನು ತೊಡಗಿಸಿದ್ದೀರಿ. ಒಂದು ಮಿಲ್ಲ್‌ಗೆ ೧೦.೫ ಕೋಟಿ ರೂಪಾಯಿಗಳನ್ನು ಹಾಕುವುದಕ್ಕೆ ಸಾಧ್ಯವೇ ಎಂದು ನನಗನ್ನಿಸುತ್ತದೆ. ೧೦.೫ ಕೋಟಿ ರೂಪಾಯಿಗಳನ್ನು ಬರೀ ಜನಗಳಿಂದಲೇ ವಸೂಲು ಮಾಡುವುದಕ್ಕಾಗುವುದಿಲ್ಲ. ಫೈನಾನ್ಸ್ ಇನ್ಸಿಟಿಟ್ಯೂಟ್‌ಷನ್‌ನಿಂದ ಹಾಗೂ ಕೆ.ಎಫ್.ಸಿ. ವತಿಯಿಂದ ಹಣಕಾಸಿನ ನೆರವನ್ನು ಕೊಟ್ಟಿದ್ದಾರೆ. ಆದರೆ ಇಂತಹದ್ದಕ್ಕೆ ಒಂದು ಕೋಟಿಯನ್ನು ಕೊಡುವುದಕ್ಕಾಗುವುದಿಲ್ಲವೇ? ಎಲ್ಲವನ್ನೂ ನೀವೇ ಕೂಡಿಸಿಕೊಳ್ಳಿ ಅಂದರೆ ಹೇಗೆ ಸಾಧ್ಯ? ಪ್ರಶ್ನೆ ಏನು ಅಂದರೆ ಅದನ್ನು ಹೇಗೆ ಉಪಯೋಗಿಸಿಕೊಳ್ಳುತ್ತಾರೆಂಬ ಅನುಮಾನ ಇರಬಹುದು. ಆಂಜನೇಯ ಟೆಕ್ಸ್‌ಟೈಲ್ ಮಿಲ್ಲ್‌ನಲ್ಲಿ ಇಂತಹದ್ದೇ ತೊಂದರೆ ಬಂದಾಗ ಬ್ಯಾಂಕಿನವರು ಸಾಲವನ್ನು ಕೊಟ್ಟರು, ಬ್ಯಾಂಕ್‌ನ ವತಿಯಿಂದಲೇ ಫೈನಾನ್ಸ್ ಕಂಟ್ರೋಲರೊಬ್ಬರನ್ನು ನೇಮಿಸಿದರು. ಅವರೇ ಎಲ್ಲವನ್ನೂ ನಡೆಸುತ್ತಿದ್ದಾರೆ. ಅವ್ಯವಹಾರ ನಡೆಯುವುದಕ್ಕೆ ಬಿಡಲಿಲ್ಲ. ಆ ರೀತಿ ಮಾಡಿದ ಮೇಲೆ ಇವತ್ತಿಗೂ ಅದು ಚೆನ್ನಾಗಿ ನಡೆದುಕೊಂಡು ಹೋಗುತ್ತಿದೆ. ಹಾಗೆಯೇ ನೀವು ಯಾರೇ ಒಬ್ಬರು ಫೈನಾನ್ಸ್ ಕಂಟ್ರೋಲರನ್ನು ಹಾಕಿ. ನೀವೇ ಎಲ್ಲಾ ಹತೋಟಿಯನ್ನು ಇಟ್ಟುಕೊಳ್ಳಿ. ಅದಕ್ಕೆ ಕಾರ್ಮಿಕರ ವತಿಯಿಂದ ಸಹಕಾರವನ್ನು ಕೊಡುತ್ತೇವೆ. ಆ ಬಗ್ಗೆ ತಾವು ಕ್ರಮ ತೆಗೆದುಕೊಳ್ಳಬೇಕು. What is required is the political will. ಇದಕ್ಕೆ ಪೊಲಿಟಿಕಲ್ ವಿಲ್ ಬೇಕು. ಅದಕ್ಕೋಸ್ಕರ ತಕ್ಷಣ ಆ ಬಗ್ಗೆ ಕ್ರಮವನ್ನು ತೆಗೆದುಕೊಳ್ಳಿ. ಮೂಲಭೂತವಾಗಿ ತಾವು ಮಾಡಬೇಕಾಗಿರುವುದು ಏನೆಂದರೆ, ಕಾಟನ್ ಟೆಕ್ಸ್‌ಟೈಲ್ ಕಾರ್ಪೊರೇಷನ್ ಒಂದನ್ನು ನಮ್ಮ ರಾಜ್ಯದಲ್ಲಿ ರಚನೆ ಮಾಡಬೇಕು. ಅದಕ್ಕೆ ಬೇಕಾದಂತಹ ಕಾರ್ಯಕ್ರಮಗಳನ್ನು ಹಾಕಿಕೊಳ್ಳಿ. ಯಾವರೀತಿ ಮಾಡಬೇಕೆಂಬುದನ್ನು ಮಹಾರಾಷ್ಟ್ರ ಸರ್ಕಾರವನ್ನು ಕೇಳಿದರೆ ಹೇಳುತ್ತಾರೆ. ತಮಿಳುನಾಡು ಸರ್ಕಾರವನ್ನು ಕೇಳಿದರೆ ಹೇಳುತ್ತಾರೆ. ಗುಜರಾತ್ ಸರ್ಕಾರವನ್ನು ಕೇಳಿದರೂ ಹೇಳುತ್ತಾರೆ. ಮೂರು ರಾಜ್ಯಗಳಲ್ಲೂ ಆ ರೀತಿಯ ಕಾರ್ಪೊರೇಷನ್‌ಗಳನ್ನು ಮಾಡಿದ್ದಾರೆ. ಆಗ ಇವರಿಗೂ ಸ್ವಲ್ಪ ಹೆದರಿಕೆ ಇರುತ್ತದೆ. ಅವರಿಗೆ ಒಂದು ನಯಾಪೈಸೆ ಅಥವಾ ರೂಪಾಯಿಯನ್ನು ಕೊಡುವಂತಹ ಪ್ರಶ್ನೆಯೇ ಬರುವುದಿಲ್ಲ. ಸುಪ್ರೀಂಕೋರ್ಟಿನ ತೀರ್ಮಾನದ ಪ್ರಕಾರ it is said as 'any amount'. ಅದು ಮಾನ್ಯ ಶ್ರೀ ಮೊಯ್ಲಿಯವರಿಗೂ ಗೊತ್ತಿದೆ.

ಶ್ರೀ ಜೆ. ಎಚ್. ಪಟೇಲ್.—ಆ ರೀತಿಯ ಕಾರ್ಪೊರೇಷನ್ ಈಗಾಗಲೇ ನಮ್ಮಲ್ಲಿದೆ.

SRI M. S. KRISHNAN.—If it is there, you take it over. I do not know whether the Karnataka Textile Corporation can take over some mills. ಅದರೊಳಗೆ ಮಾಡುವುದಕ್ಕೆ ಸಾಧ್ಯ ಇದ್ದರೆ ಮಾಡಿ. ಸಂತೋಷ. ಬೇರೆಯಾಗಿ ಮಾಡಬೇಕೆಂಬುದರ ಬಗ್ಗೆ ಪ್ರಯತ್ನ ಮಾಡಬೇಕೆಂದು ಸ್ಪಷ್ಟವಾದ ಅಭಿಪ್ರಾಯದಲ್ಲಿ ಹೇಳುತ್ತಿದ್ದೇನೆ That is one qusetion. ಮಹದೇಶ್ವರ ಮಿಲ್ಲ್ ಅನ್ನು ಕರ್ನಾಟಕ ರಿಲೀಫ್ ಅಂಡರ್‌ಟೇಕಿಂಗ್‌ನಲ್ಲಿ ತೆಗೆದುಕೊಂಡು ರನ್ ಮಾಡುತ್ತಿರತಕ್ಕಂತಹದ್ದು. ಮೂರು ವರ್ಷಗಳ ಕಾಲದಿಂದ ನಡೆಯುತ್ತಿದೆ. ನಿಮ್ಮ ಸರ್ಕಾರ ಬರುವುದರೊಳಗೆ ಎಲ್ಲಾ ವ್ಯವಸ್ಥೆಯಾಗಿದ್ದು ಶ್ರೀಮಾನ್ ಬೊಮ್ಮಾಯಿಯವರ ಹತ್ತಿರ ಚರ್ಚೆ ಮಾಡಿ ವ್ಯವಸ್ಥೆ ಮಾಡಿದ್ದೆವು. ನನಗೆ ಅದರ ಎಲ್ಲಾ ವಿವರ ಗೊತ್ತಿದೆ. ಅದೇ ಆಧಾರದ ಮೇಲೂ ಇದನ್ನೂ ಮಾಡಬಹುದು. ಇದನ್ನು ಮಾಡುವುದಕ್ಕೆ ಪೊಲಿಟಿಕಲ್ ವಿಲ್ ಇದ್ದರೆ ಮಾಡುವುದಕ್ಕೆ ಸಾಧ್ಯ. ಅದೇ ರೀತಿ ಟೆಕ್ಸ್‌ಟೈಲ್ ಇಂಡಸ್ಟ್ರೀಸ್ ಬಗ್ಗೆ ಹೇಳಬೇಕಾಗಿದೆ. ಬೇರೆ ಇಂಡಸ್ಟ್ರೀಸ್‌ಗಳ ಬಗ್ಗೆ ಹೆಚ್ಚು ಮಾತನಾಡುವುದಕ್ಕೆ ಹೋಗುವುದಿಲ್ಲ. ಉದಾಹರಣೆಗೆ ಹೇಳುವುದಾದರೆ, ಚಾಮುಂಡಿ ಮೊಪೆಡ್ ಕಾರ್ಖಾನೆಗೆ ೩೨ ಕೋಟಿ ರೂಪಾಯಿಗಳನ್ನು ಇನ್‌ವೆಸ್ಟ್‌ಮೆಂಟ್ ಮಾಡಲಾಗಿದೆ. ಒಂದೂವರೆ ವರ್ಷವಾಯಿತು ಪ್ರಾರಂಭವಾಗಿ, ಇನ್ನೂ ಪ್ರೊಡಕ್ಷನ್ ಆಗುತ್ತಿಲ್ಲ. He could not produce in a massive manner. So he has lost. Where that Rs. 32 crores have gone? ನಮಗೆ ಗೊತ್ತಿಲ್ಲ.

೧೦ ಸಾವಿರ ಮೊಪೆಡ್‌ಗಳನ್ನು ಪ್ರೊಡ್ಯೂಸ್ ಮಾಡತಕ್ಕ ಶಕ್ತಿಯನ್ನು ಹೊಂದಿದೆ ಆ ಚಾಮುಂಡಿ ಮೊಪೆಡ್ ಕಾರ್ಖಾನೆ. ಮಾನ್ಯ ಲಕ್ಷ್ಮೀನರಸಿಂಹಯ್ಯನವರು ಬಹಳ ಆಸಕ್ತಿ ವಹಿಸಿ ಬಹಳ ಒತ್ತಾಯ ಮಾಡಿ ತೆಗೆದುಕೊಂಡು ಬಂದರು. ಆದರೆ ಇವತ್ತು ಏನು ಮಾಡಬೇಕೆಂಬುದು ಗೊತ್ತಿಲ್ಲ. We has not paid wages for the workers. It is a very viable unit. It is not a non-viable unit. ಇದೇ ರೀತಿ ಅಲೆಂಬಿಕ್ ಗ್ಲಾಸ್ ಫ್ಯಾಕ್ಟರಿ ೩೧ ವರ್ಷಗಳಿಂದ ಮುಚ್ಚಿಬಿಟ್ಟಿದೆ. Similarly, Karnataka Bearings L d and ದೀಪಕ್ ಕೇಬಲ್ಸ್ ಫ್ಯಾಕ್ಟರಿಯನ್ನು ನಾನ್ ವೆಯಬಲ್ ಮಾಡಿದ್ದೀರಿ. ಅಲ್ಲಿನ ಅಧಿಕಾರಿಗಳು ದುಡ್ಡು ತಿಂದು ಫ್ಯಾಕ್ಟರಿಯನ್ನು ಸರಿಯಾಗಿ ನಡೆಸುತ್ತಿಲ್ಲ. ಈ ಫ್ಯಾಕ್ಟರಿಗೆ ಮಾರ್ಕೆಟಿಂಗ್ ಏನಾದರೂ ತೊಂದರೆ ಇದೆಯೋ ಎಂದರೆ ಆ ತರಹ ಏನೂ ಇಲ್ಲ. ಚಾಮುಂಡಿ ಮೊಪೆಡ್ಸ್ ಫ್ಯಾಕ್ಟರಿಯವರಿಗೆ ಮಾರ್ಕೆಟಿಂಗ್ ಸ್ವಲ್ಪ ತೊಂದರೆ ಇರಬಹುದು. It is a matter of techinical knowledge or technical perfection. ಮೊಪೆಡ್ಸ್‌ಗಳಿಗೆ ಒಳ್ಳೆ ಮಾರ್ಕೆಟ್ ಇದೆ. ಆದರೆ, ಈ ಚಾಮುಂಡಿ ಮೊಪೆಡ್ಸ್ ಫ್ಯಾಕ್ಟರಿಯನ್ನು ವಯಬಲ್ ಅಲ್ಲವೆಂದು ಮುಚ್ಚೋ ಪ್ರಶ್ನೆ ಬರುವುದಿಲ್ಲ. ವಯಬಲ್ ಆಗಿದೆಯೆಂದು ತಿಳಿದುಕೊಂಡು ಸರ್ಕಾರ ಅದನ್ನು ವಹಿಸಿಕೊಳ್ಳಬೇಕು. ಕರ್ನಾಟಕ ರಿಲೀಫ್ ಅಂಡರ್ ಟೇಕಿಂಗ್ ಆ್ಯಕ್ಟ್‌ನಲ್ಲಿ ಸರ್ಕಾರ ಅದನ್ನು ತೆಗೆದುಕೊಳ್ಳಬೇಕೆಂದು ನಾನು ಕೇಳಿಕೊಳ್ಳುತ್ತೇನೆ. Alembic Glass is a most profitable industry. It is not a loss making industry. ಆಲ್ ಇಂಡಿಯಾ ಗ್ಲಾಸ್ Manufacturers, Association ನವರು ಒಂದು ಸಮ್ಮೇಳನವನ್ನು ನಡೆಸಿದ್ದರು. ಮುಂದಿನ ವರ್ಷಗಳಲ್ಲಿ glass industry is going to be a high and prosperous industry. ಎಂದು ಅವರು ನಿರ್ಧಾರ ಮಾಡಿದ್ದಾರೆ. It may be low today, but it is going to increse more and more. So why don't you think on this and see that it is taken over. ಅಲ್ಲೂ ಕೂಡ ಮಾಲೀಕರಿಗೆ ಜಮೀನಿನ ಮೇಲೆ ಕಣ್ಣು. ಅದರ ಬಗ್ಗೆ ಸರ್ಕಾರ ಏನೂ ಮಾಡಿಲ್ಲವೆಂದು ನಾನು ಹೇಳುತ್ತಿಲ್ಲ. ಕಾನೂನು ಪ್ರಕಾರ ನೋಟೀಸ್ ಕೊಟ್ಟಿರುವುದು, ಫ್ಯಾಕ್ಟರಿಯನ್ನು ಕ್ಲೋಸ್ ಮಾಡುವುದು ಬೇಡವೆಂದು ತಾವುಗಳು ಮಾಡಿದ್ದೀರಿ. ಅದಕ್ಕೆ ನಾವು ಧನ್ಯವಾದಗಳನ್ನು ಅರ್ಪಿಸುತ್ತೇವೆ. ಹಿಂದೆ ಇದ್ದವರು ಅದನ್ನು ಕೂಡ ಮಾಡಿರಲಿಲ್ಲ. ನೀವು ಇಷ್ಟು ಮಾಡಿದರೆ ಮಾತ್ರ ಸಾಕೇ ? ಅಲ್ಲಿಂದ ಮುಂದೆ ಹೋಗಬಾರದಾ ? You should not be pressurised by these big tycoons. He is a very big tycoon. ಈ ಕೈಗಾರಿಕೆಗಳ ಮಾಲೀಕರೆಲ್ಲಾ ಬಹಳ ದೊಡ್ಡವರು. ಸಾಧಾರಣ ಜನ ಅಲ್ಲ.

(ಮಾನ್ಯ ಅಧ್ಯಕ್ಷರು ಅಧಕ್ಷ ಪೀಠವನ್ನು ಅಲಂಕರಿಸಿದರು)

ಅಧ್ಯಕ್ಷರು.—ಆಯಿತು ಬೇಗ ಮುಗಿಸಿ, ಒಂದು ಗಂಟೆ ಆಯಿತು.

ಶ್ರೀ ಎಂ. ಎಸ್. ಕೃಷ್ಣನ್.—ತಾವು ಆಗಿನಿಂದ ಇರಲಿಲ್ಲ. ಇದ್ದಿದ್ದರೆ, ಇದು ಬಹಳ ಇಂಟರೆಸ್ಟಿಂಗ್ ಆಗಿರುತ್ತಿತ್ತು.

ಅಧ್ಯಕ್ಷರು.—ಒಂದು ಗಂಟೆ ಆಯಿತು, ಮುಗಿಸಿ.

ಶ್ರೀ ಎಂ. ಎಸ್. ಕೃಷ್ಣನ್.—ಇನ್ನೂ ಒಂದು ಫ್ಯಾಕ್ಟರಿ ಇದೆ ಮಾನ್ಯ ಅಧ್ಯಕ್ಷರೇ, ಎ.ಬಿ.ಎಲ್. ಫ್ಯಾಕ್ಟರಿ, ಅದು ಮಾನ್ಯ ಶಾಣಪ್ಪನವರ ಕ್ಷೇತ್ರದಲ್ಲಿ ಇದೆ. ಈ ಫ್ಯಾಕ್ಟರಿಯಲ್ಲಿ ಸುಮಾರು ೨೫೦೦ ಜನ ವರ್ಕರ್ಸ್ ಇದ್ದಾರೆ. ಇದೇತರಹದ ಫ್ಯಾಕ್ಟರಿಯೊಂದರ ದುರ್ಗಾಪುರದಲ್ಲೂ ಇದೆ. ಅಲ್ಲಿ ೨೦೦೦ ಸಾವಿರ ಕೆಲಸ ಮಾಡುತ್ತಿದ್ದಾರೆ ಈ ಫ್ಯಾಕ್ಟರಿಗಳಲ್ಲಿ ಬಾಯ್ಲರ್ಸ್‌ಗಳಿಗೆ ಇದುವರೆಗೆ ಒಳ್ಳೆ ಆರ್ಡರ್ಸ್ ಇತ್ತು. ೮-೩-೮೪ರವರೆಗೆ ಒಳ್ಳೆಪ್ರಾಫಿಟ್ ಮಾಡಿದ್ದಾರೆ. ಆದರೆ, ಈಗ ಬಾಯ್ಲರ್ಸ್‌ಗಳಿಗೆ ಆರ್ಡರ್ಸ್ ಇಲ್ಲವೆಂದು ಕೆಲಸವನ್ನು ನಿಲ್ಲಿಸಿದ್ದಾರೆ. ನನಗೆ ತಿಳಿದು ಬಂದಿರುವ ಪ್ರಕಾರ ಕೇಂದ್ರ ಸರ್ಕಾರದವರು ಸಹ ಈ ಫ್ಯಾಕ್ಟರಿಯಲ್ಲಿ ಇನ್‌ವೆಸ್ಟ್‌ಮೆಂಟ್ ಮಾಡಿದ್ದಾರೆ. ಐ. ಡಿ. ಬಿ. ಐ. ನವರು ಸಹ ಈ ಫ್ಯಾಕ್ಟರಿಗೆ ಲೋನ್ ಕೂಡ ಕೊಟ್ಟಿದ್ದಾರೆ. ಈಗ ಬಾಯ್ಲರ್ಸ್‌ಗಳಿಗೆ ಮಾತ್ರ ಆರ್ಡರ್ ಸಿಗುವಂತೆ ಮಾಡಬೇಕಾಗಿದೆ. ನನಗೆ ತಿಳಿದಿರುವ ಹಾಗೆ ಈ ಫ್ಯಾಕ್ಟರಿಗೆ ಸಂಬಂಧಪಟ್ಟಂಥ ಫೈಲು ಪ್ರಧಾನ

ಮಂತ್ರಿಯವರ ಮುಂದೆ ಇದೆ. ತಾವು ಕೇಂದ್ರ ಸರ್ಕಾರದ ಮೇಲೆ ಒತ್ತಾಯ ತಂದು ಬೇಗ ಸಮಸ್ಯೆ ಇತ್ಯರ್ಥವಾಗುತ್ತದೆ. ಮಾನ್ಯ ಕಾಂಗ್ರೆಸ್ ನಾಯಕರಾದ ಶ್ರೀಮತಿ ನಾಗರತ್ನಮ್ಮನವರಿಗೂ ಮತ್ತು ಮಾನ್ಯ ಮೊಯಿಲಿಯವರಿಗೂ ನಾನು ಕೇಳಿಕೊಳ್ಳುವುದೇನೆಂದರೆ, ನೀವು ಸಹ ಕೇಂದ್ರ ಸರ್ಕಾರದ ಮೇಲೆ ಒತ್ತಡ ತಂದು ಆದಷ್ಟು ಬೇಗ ಒಂದು ಇತ್ಯರ್ಥ ಮಾಡಬೇಕು. The matter is very much before the Prime Minister and it has gone to the Cabinet ಬಾಯ್ಲರ್ಸ್‌ಗಳಿಗೆ ಬೇಗ ಆರ್ಡರ್ ಸಿಗುವಂತೆ ಮಾಡಬೇಕು. ೧೨ ತಿಂಗಳಿನಿಂದ ವರ್ಕರ್ಸ್‌ಗಳು ಕೆಲಸ ಇಲ್ಲದೆ ಇದ್ದಾರೆ. ರಾಜ್ಯ ಸರ್ಕಾರಕ್ಕೂ ಕೂಡ ಜವಾಬ್ದಾರಿ ಇರಬೇಕು. ಫ್ಯಾಕ್ಟರಿಯ ಜನ ಎಲ್ಲಾರಿಗೂ ಸೇರಿದವರು. ರಾಜ್ಯ ಸರ್ಕಾರವು ಕೇಂದ್ರ ಸರ್ಕಾರಕ್ಕೆ ಇದರ ಬಗ್ಗೆ ಒತ್ತಾಯ ತರ ಬೇಕೆಂದು ಕೇಳಿಕೊಳ್ಳುತ್ತೇನೆ. ಈ ಕೈಗಾರಿಕೆಯನ್ನು ಉಳಿಸಬೇಕು.

ಅಧ್ಯಕ್ಷರು.—ಒಂದು ಗಂಟೆ ಆಯಿತು. ಇನ್ನು ಮಾತನಾಡುವುದು ಹೇಗೆ ಸಾಧ್ಯ ?

ಶ್ರೀ ಎಂ. ಎಸ್. ಕೃಷ್ಣನ್.—ನಿಮ್ಮ ಮೂಲಭೂತವಾದ ಧೋರಣೆ ಏನು ಆಗಿದೆ ? ಇವೊತ್ತು ಜನತಾ ಪಕ್ಷಕ್ಕೆ ಕೈಗಾರಿಕೆ ಬಗ್ಗೆ ಒಂದು ಧೋರಣೆ ಸರಿಯಾಗಿ ಇಲ್ಲ. ಅಷ್ಟೇ ಅಲ್ಲ, ಮೂಲಭೂತ ವಾಗಿಯೇ ನಿಮ್ಮ ಧೋರಣೆ ಸರಿಯಾಗಿಲ್ಲ. ಒಬ್ಬೊಬ್ಬರು ಒಂದೊಂದು ಕಡೆ, ಒಂದೊಂದು ರೀತಿ ಯಲ್ಲಿ ಹೇಳುತ್ತಾರೆ. Mr. Hegde says, "I am pursuing Nehruian policy." ನಾನು ಒಪ್ಪಿಕೊಳ್ಳುತ್ತೇನೆ. ಅವರು ಹೇಳುತ್ತಾರೆ ಮಾನ್ಯ ವಿ. ಪಿ. ಸಿಂಗ್‌ರವರು ಬಂದಿದ್ದಾರೆ, ಒಂದು ಧೋರಣೆಯ ಜನರು ಸೇರುವುದು ಒಳ್ಳೆಯದು ಎಂದು ಹೇಳುತ್ತಾರೆ. ಇನ್ನೊಬ್ಬರ ಬೇರೆಯೇ ಹೇಳುತ್ತಾರೆ. ಮತ್ತೊಬ್ಬರು ಹೇಳುತ್ತಾರೆ. no public sector, no big industries, no tiny industries, etc. etc., and I am directly opposed to Nehuruian policy." There is constradicton. ನಾವು ಮಾನ್ಯ ಹೆಗಡೆ ಯವರ ಪಾಲಿಸಿ ಒಪ್ಪಿಕೊಳ್ಳಬೇಕೇ ? ಮಾನ್ಯ ಪಟೇಲ್‌ರವರ ಪಾಲಿಸಿ ಒಪ್ಪಿಕೊಳ್ಳಬೇಕೇ ? ಮಾನ್ಯ ಜೀವಿಜಯರವರ ಪಾಲಿಸಿಯನ್ನು ಒಪ್ಪಿಕೊಳ್ಳಬೇಕೇ ? ಈ ಬಗ್ಗೆ ನಮಗೆ ಒಂದು ರೀತಿಯಲ್ಲಿ ಕನ್‌ಫ್ಯೂಷನ್ ಆಗಿದೆ. ಇವರದ್ದು ಒಂದು ರೀತಿಯಲ್ಲಿ ಕನ್‌ಫ್ಯೂಸ್ಡ್ ಪಾಲಿಸಿ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ಮಾನ್ಯ ಪಟೇಲರು ಇಕ್ಕಟ್ಟಿನಲ್ಲಿದ್ದಾರೆ.

ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ಜಿ ವಿಜಯರವರು ಒಂದು ಹೇಳಿಕೆಯಲ್ಲಿ ಪ್ರಜಾವಾಣಿ ಪತ್ರಿಕೆಯಲ್ಲಿ ೧೯ ಮೇ ೧೯೮೭ರಲ್ಲಿ ಹೀಗೆ ಹೇಳಿದ್ದಾರೆ. "ತಿಂಗಳಿಗೆ ಸಾವಿರ ಉದ್ಯಮ ಪ್ರಾರಂಭಿಸುವ ರಾಜ್ಯ ಸರ್ಕಾರದ ನೀತಿಯನ್ನು ಸಣ್ಣ ಕೈಗಾರಿಕೆಗಳ ಸಚಿವ ಬಿ. ಎ. ಜೀವಿಜಯ ಇಂದು ಇಲ್ಲಿ ವಿರೋಧಿ ಸಿದರು. ಸಮರ್ಪಕವಾಗಿ ಕಾರ್ಯ ನಿರ್ವಹಿಸದಿರುವ ಉದ್ಯಮಗಳನ್ನು ಕೇವಲ ಪ್ರಾರಂಭಿಸಿದರೆ ಏನು ಪ್ರಯೋಜನ ? ಎಂದು ಅವರು ಪ್ರಶ್ನಿಸಿದರು ಜಿಲ್ಲಾ ಉದ್ಯಮ ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಒಕ್ಕೂಟ ಹಾಗೂ ಡೆಕ್ಸಾಸ ಸಂಸ್ಥೆ ಸಹಭಾಗಿತ್ವದಲ್ಲಿ ರಫ್ತು ತರಬೇತಿ ಕಾರ್ಯಕ್ರಮ ಉದ್ಘಾಟಿಸಿದ ಸಚಿವರು ರಾಜ್ಯದಲ್ಲಿ ಹೊಸದಾಗಿ ಬರುವ ಉದ್ಯಮಗಳ ಸಂಖ್ಯೆಗಿಂತ ಎಷ್ಟು ಉದ್ಯಮ ಗಳು ಸಮರ್ಪಕವಾಗಿ ಕಾರ್ಯ ನಿರ್ವಹಿಸುತ್ತವೆ, ರಾಜ್ಯದ ಹಾಗೂ ರಾಷ್ಟ್ರದ ಪ್ರಗತಿಗೆ ಉದ್ಯಮಗಳ ಕೊಡುಗೆ ಉದ್ಯೋಗಾವಕಾಶ ಹಾಗೂ ರಫ್ತು ಇವು ಮುಖ್ಯ ಎಂದರು.

ಕರ್ನಾಟಕದಲ್ಲಿ ಸುಮಾರು ೭೬ ಸಾವಿರ ಸಣ್ಣ ಉದ್ಯಮಗಳು ಇವೆ ಎಂಬುದಷ್ಟೆ ದೊಡ್ಡ ಸಾಧನ ಅಲ್ಲ. ಹೆಮ್ಮೆ ಪಡುವ ವಿಚಾರವಂತೂ ಅಲ್ಲ ಎಂದು ಹೇಳಿದ್ದಾರೆ. ಇವರು ಹೀಗೆ ಹೇಳಿದರೆ, ಜನತಾ ಪಕ್ಷದ ಮತ್ತೊಬ್ಬ ಸದಸ್ಯರು ಬೇರೆ ರೀತಿಯಲ್ಲಿ ಹೇಳಿದ್ದಾರೆ. ಅವರು ಪಕ್ಷದ ಥಿಂಕ್‌ಟ್ಯಾಂಕ್‌ನ ಸದಸ್ಯರು ಯೋಚನೆ ಮಾಡುವ ಜನ ಅವರು. ಪ್ರೊ॥ ಬಿ. ಕೆ. ಚಂದ್ರಶೇಖರವರು ಅವರು ಏನು ಹೇಳುತ್ತಾರೆ ಅಂದರೆ "Disinvestment move unwise. Mr. B. K. Chandrashekar differed with Chief Minister Ramakrishna Hegde's views on the issue of disinvestment in the pubiic sector. Participating in the discussion on policy and working of Industries and Electricity Departments on Friday, Mr Chandrashekar said that although selective disinvestment in certain areas if inevitable was wel come, judging from a broad national perspective, the Chief Minister's policy statement in the current budget speech was

not correct. Mr. Chandrashekar said to arrive at a policy decision on disinvestment, immense data on the entire gamut of public sector units was required........" ತಾವು ಕ್ಲಿಯರ್ ಕಟ್ ಪಾಲಿಸಿ ಇಟ್ಟುಕೊಳ್ಳಬೇಕು. ಅದು ಯಾವವುದೇ ಇರಲಿ ಸ್ಪಷ್ಟವಾಗಿ ಇರಬೇಕು. ಯಾವುದನ್ನು ಮಾಡಬೇಕಾದರೂ ಅದು ಪಾಲಿಸಿಗೆ ಅನುಗುಣವಾಗಿ ಮಾಡಬೇಕು, ಅದು ಒಳ್ಳೆಯದು ಎಂದು ನನ್ನ ಅಭಿಪ್ರಾಯ. ಇವರಿಗೆ ಒಂದು ಪಾಲಿಸಿಯೇ ಇಲ್ಲ ಎಂದು ಕಾಣುತ್ತದೆ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ಅವರೆಲ್ಲರೂ ಕನ್‌ಫ್ಯೂಸ್ ಸ್ಥಿತಿಯಲ್ಲಿದ್ದಾರೆ. ಇದು ನಾವು ಹೇಳುವುದಲ್ಲ. ಜನತಾ ಪಕ್ಷದ ಒಬ್ಬ ಸಿನ್ನಿಯರ್ ಸದಸ್ಯರಾದ ಮಾನ್ಯ ವೈಜನಾಥ್ ಪಾಟೀಲ್ ರವರು ಕೂಡ ಬಳ್ಳಾರಿಯಲ್ಲಿ ಮೊನ್ನೆ ಹೇಳಿದ್ದಾರೆ.

ಶ್ರೀ ಎಂ. ಎಸ್. ಕೃಷ್ಣನ್.—ಹೌದು ಅವರೂ ಕೂಡ ಒಂದು ರೀತಿಯಲ್ಲಿ ಹೇಳಿದ್ದಾರೆ. ಆದುದರಿಂದ ನನಗನ್ನಿಸುತ್ತದೆ......

ಅಧ್ಯಕ್ಷರು.—ಆಯಿತು, ಈಗ ಮುಗಿಸಿಬಿಡಿ...

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ತಮಗೆ ಏಕೆ ಸಿಟ್ಟು ಬರುತ್ತದೆ ?

ಅಧ್ಯಕ್ಷರು.—ಸಿಟ್ಟು ಬರುವುದಿಲ್ಲ, ಎಲ್ಲರಿಗೂ ಚಾನ್ಸ್ ಕೊಡಬೇಕು, ಮಾನ್ಯ ಮೊಯ್ಲಿಯವರು ಕೂಡ ಮಾತನಾಡುವವರಿದ್ದಾರೆ.

ಶ್ರೀ ಎಂ. ಎಸ್. ಕೃಷ್ಣನ್.—ಈಗ ಜನತಾದವರು ಸಾರ್ವಜನಿಕರ ಕ್ಷೇತ್ರ ಎಂದು ಬೇರೆ ಮಾಡುವುದಕ್ಕೆ ಹೊರಟಿದ್ದಾರೆ. ಅಂದರೆ ಸರ್ಕಾರ ಮತ್ತು ಖಾಸಗಿಯವರು ಜೊತೆ ಜೊತೆಯಲ್ಲಿ ಎಲ್ಲಿ ಹೋಗುವರೋ ಅವನ್ನು ಮಾಡುವುದಕ್ಕೆ ಹೊರಟಿದ್ದಾರೆ. ಈ ಪ್ರಕಾರ ಮದ್ದೂರಿನ ಬ್ರೂಕ್ ಬಾಂಡ್ ಕಂಪೆನಿ ಮಾಡಿದರು. ಅದು ಸರಿಹೋಗಲಿಲ್ಲ. ಎಂಪಿಎಲ್ ಮತ್ತು ಕೆಎಸ್‌ಡಿಎಲ್ ಗಳ ಬಗ್ಗೆ ಮುಂದೆ ಏನಾಗುತ್ತದೆ ಎಂದು ಹೇಳುವುದಕ್ಕೆ ಆಗುತ್ತಿಲ್ಲ. ರೀಸೆಂಟಾಗಿ ಜನತಾ ಮಂತ್ರಿಗಳೇ ಎಂಪಿಎಲ್ ಬಗ್ಗೆ ಅನುಮಾನವನ್ನು ವ್ಯಕ್ತಪಡಿಸಿದ್ದಾರೆ.

ಇನ್ನು ಎನ್‌ಜಿಇಎಫ್–ಎಇಜಿ ಷೇರು ಬಗ್ಗೆ ದೊಡ್ಡದಾಗಿ ನಡೆದಿದೆ. ಎನ್‌ಜಿಇಎಫ್‌ನಲ್ಲಿ ಏನು ನಡೆದಿದೆ ? ಎಇಜಿಯವರಿಗೆ ಷೇರು ಕೊಟ್ಟಿಲ್ಲ ಎಂದು ಹೇಳುತ್ತೀರಿ. ಅಂದರೆ ಆಕ್ಚುಯಲಿ ನಿಮಗೆ ೧೦ ಪರ್ಸೆಂಟ್ ಷೇರು ಏನು ಬರಬೇಕಾಗಿತ್ತೊ ಅದನ್ನು ಅವರಿಗೆ ಒಪ್ಪಿಸಿಕೊಟ್ಟಿದ್ದೀರಿ, ಅಲ್ಲವೇ ? ಈಗ ಅವರದನ್ನು ೨೫ ಪರ್ಸೆಂಟ್ ಮಾಡಿ ನಿಮ್ಮದನ್ನು ೭೫ ಪರ್ಸೆಂಟ್ ಮಾಡಿಕೊಂಡಿದ್ದೀರಿ. ಹೀಗೆ ಏಕೆ ಮಾಡಬೇಕಾಗಿತ್ತು. ಅದಕ್ಕೆ ಕಾರಣ ಏನು ಕೊಡುತ್ತೀರಿ ಎಂದರೆ ಅವರನ್ನು ಜೊತೆಯಲ್ಲಿ ಕರೆದು ಕೊಂಡು ಹೋದರೆ ಈಗ ಚೆನ್ನಾಗಿ ನಡೆಯುತ್ತಿರುವ ನಮ್ಮ ತಾಂತ್ರಿಕ ತಜ್ಞತೆಗೆ ಇನ್ನೂ ಕಾಂಟ್ರಿ ಬ್ಯೂಷನ್ ಸಿಕ್ಕಿದ ಹಾಗಾಗುತ್ತದೆ ಎನ್ನುತ್ತೀರಿ. ಎಇಜಿ ಕಂಪೆನಿ ಏನು ಧರ್ಮಕ್ಕೇನೂ ಮಾಡುವುದಿಲ್ಲ. ಯಾವತ್ತೂ ಮಲ್ಟಿ ನ್ಯಾಷನಲ್ ಕಂಪೆನಿಗಳು ಹಾಗೆ ಮಾಡುವುದಿಲ್ಲ. ಮೊದಲು ಕಾಲು ಇಡುತ್ತಾರೆ, ಆಮೇಲೆ ಕೈ, ದೇಹ ಹೊಟ್ಟೆಯೊಂದಿಗೆ ಕೊನೆಗೆ ತಲೆಯನ್ನು ಇಟ್ಟು ಮೊದಲಿದ್ದವರನ್ನೇ ಓಡಿಸಿಬಿಡು ತ್ತಾರೆ. ಅವರಿಗೆ ಸಹಕಾರ ಮಾಡುವ ರೀತಿಯಲ್ಲಿ ನಿಮ್ಮ ಧೋರಣೆ ಇರಬಾರದು ಸ್ವಾಮಿ. ಎನ್‌ಜಿಇಎಫ್‌ನಲ್ಲಿ ಏನೇನೊ ನಡೆಯುತ್ತಿದೆ. ಸಬ್ ಕಂಟ್ರಾಕ್ಟ್‌ಗಳು ಯಾರ್ಯಾರಿಗೆ ಹೋಗುತ್ತಿವೆ, ಬೇರೆ ಸವಲತ್ತನ್ನು ಯಾರ್ಯಾರು ಕಬಳಿಸುತ್ತಿದ್ದಾರೆ ಇತ್ಯಾದಿಯೆಲ್ಲಾ ನನ್ನ ಹತ್ತಿರ ಇದೆ. ಈಗ ಟೈಮ್ ಇಲ್ಲದಿರುವುದರಿಂದ ಅವಕ್ಕೆಲ್ಲ ಹೋಗುವುದಿಲ್ಲ.

ಅಧ್ಯಕ್ಷರು.—ಟೈಮ್ ಆಯಿತು, ಮುಕ್ತಾಯ ಮಾಡಿ. ಬಜೆಟ್ ಮೇಲಿನ ಸ್ಪೀಚನ್ನೂ ಇಷ್ಟು ದೀರ್ಘವಾಗಿ ನೀವು ಮಾಡಿರಲಿಲ್ಲ.

ಶ್ರೀ ಎಂ.ಎಸ್. ಕೃಷ್ಣನ್.—ಕ್ರೈಸಿಸ್ ಇನ್ ಇಂಡಸ್ಟ್ರಿ ಎನ್ನುವುದೇ ಇವತ್ತಿನ ವಿಷಯ ಸ್ವಾಮಿ. ನಿಮ್ಮ ಪಾಲಿಸಿಯಲ್ಲಿರುವ ಕನ್‌ಫ್ಯೂಷನ್‌ನಿಂದಲೇ ಇಷ್ಟೆಲ್ಲಾ ಆಗುತ್ತಿರುವುದು. ಇವರದು ನೆಹರೂ ರವರ ಪಾಲಿಸಿಯೋ ಅಥವಾ ಬೇರೆಯೋ ಎಂಬುದೇ ಗೊತ್ತಿಲ್ಲ, ಇದೇ ಮೂಲಭೂತ ಪ್ರಶ್ನೆ. ಇನ್ನೊಂದು ಪ್ರಶ್ನೆ ಏನೆಂದರೆ ನಿಮ್ಮ ಒಟ್ಟಾರೆ ಧೋರಣೆಯನ್ನು ಸರಿ ಮಾಡಿಕೊಳ್ಳಿ. ಸಿಕ್ ಮಿಲ್ಸ್ ಬಗ್ಗೆ ಇರುವ ತಕರಾರುಗಳನ್ನು ಕೂಡಲೇ ಇತ್ಯರ್ಥ ಮಾಡಬೇಕು. ಅದನ್ನು ನೀವು ಮಾಡದಿದ್ದರೆ

ಬೇರೆ ತೋರಿಂದರೆ ಬರುತ್ತದೆ. you must takeover. there is no alternative. ಪ್ರೈವೆಟ್ ಲಿಮಿಟ್ ಕೊಟ್ಟು ಆಜ್ಞೆ ಹೊರಡಿಸಬೇಕು. ಇಲ್ಲದಿದ್ದರೆ ಏನಾಗುತ್ತದೆಂದು ನನಗೆ ಗೊತ್ತಿಲ್ಲ. ಇವತ್ತು ದಾವಣಗೆರೆ ಹತ್ತಿಕೊಂಡು ಉರಿಯುತ್ತಿದೆ. ಇನ್ನು ಮುಂದೆ ಜಾಸ್ತಿ ಉರಿಯುತ್ತದೆ ಅಷ್ಟೇ. you cannot play with Mr. pampapathy. He is not an ordinary human being. He is the tallest leader of the working class. He has sacrificed his life for the working class. ಮುನಿಸಿಪಲ್ ಪ್ರೆಸಿಡೆಂಟಾಗಿ, ಆಮೇಲೆ ಶಾಸಕನಾಗಿ ಸಾಮಾನ್ಯ ಜನರ ಬೆಂಬಲದಿಂದ ಬಂದವರು. ಅಂಥವರ ಜೀವದ ವಿಚಾರದಲ್ಲಿ ನೀವು ಆಟ ಆಡಬೇಡಿ. ಮೈಸೂರಿನ ಕೆ. ಆರ್ ಮಿಲ್ಸ್ ಬಗ್ಗೆ ಮತ್ತು ದಾವಣಗೆರೆ ಮಿಲ್ಸ್‌ಗಳ ನೌಕರರಿಗೆ ಭತ್ಯೆ ಕೊಡಬೇಕು. Then only it will smoothen the way for Mr. pampathy also to give up his hunger strike. ಇಲ್ಲದಿದ್ದರೆ ಪಶ್ಚಾತ್ತಾಪ ಪಡಬೇಕಾಗುತ್ತದೆ.

† ಶ್ರೀ ಎಂ. ವೀರಪ್ಪ ಮೊಯಿಲಿ (ಕಾರ್ಕಳ).—ಸನ್ಮಾನ್ಯ ಸಭಾಧ್ಯಕ್ಷರೇ, ಇವೊತ್ತು ಕರ್ನಾಟಕ ರಾಜ್ಯದಲ್ಲಿರತಕ್ಕ ಕೈಗಾರಿಕಾ ವಾತಾವರಣ ಅಥವಾ ಕ್ಷೇತ್ರದಲ್ಲಿರತಕ್ಕ ಅನ್‌ರೆಸ್ಟ್ ಅಥವಾ ಅಶಾಂತಿ ವಾತಾವರಣದ ವಿಚಾರ ಮಾತನಾಡಬಯಸುತ್ತೇನೆ. ಸನ್ಮಾನ್ಯ ಮಿತ್ರರಾದ ಕೃಷ್ಣನ್‌ರವರು ಪ್ರಮುಖವಾಗಿ ಟೆಕ್ಸ್‌ಟೈಲ್ ಕೈಗಾರಿಕೆಗಳಿಗೆ ಸಂಬಂಧವಾಗಿ ಮಾತನಾಡಿದ್ದಾರೆ. ಇದರ ಬಗ್ಗೆ ನಾನು ಮಾತನಾಡುವುದಕ್ಕೆ ಹೋಗುವುದಿಲ್ಲ. ಯಾಕೆಂದರೆ ಅವರು ಒಂದೂವರೆ ಗಂಟೆಕಾಲ ಬಹಳ ಸೂಕ್ಷ್ಮವಾಗಿ ಸರ್ಕಾರದ ಮತ್ತು ಈ ಸದನದ ಗಮನವನ್ನು ಬಹಳ ಚೆನ್ನಾಗಿ ಸೆಳೆದಿದ್ದಾರೆ. ನಾನು ಬಹಳ ಹೆಚ್ಚಾಗಿ ಮಂಗಳೂರು ಕೆಮಿಕಲ್ಸ್ ಅಂಡ್ ಫರ್ಟಿಲೈಸರ್ಸ್ ಕಾರ್ಖಾನೆಯು ಈಗ ಎದುರಿಸತಕ್ಕ ಸಮಸ್ಯೆಗಳ ಬಗ್ಗೆ ಮಾತನಾಡಲು ಇಚ್ಛೆಪಡುತ್ತೇನೆ. ಕೈಗಾರಿಕೆ ಬಹು ವಿಸ್ತಾರವಾದ ಕ್ಷೇತ್ರ, ಇದನ್ನು ಹೇಳುವ ಮೊದಲು ರಾಜ್ಯದಲ್ಲಿರತಕ್ಕ ಒಟ್ಟು ವಾತಾವರಣದ ಬಗ್ಗೆ ಎರಡು ಮಾತುಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಯಾಕೆಂದರೆ ಸರ್ಕಾರದ ನೀತಿ, ಕಾರ್ಯನೀತಿ ಒಟ್ಟು ಕೈಗಾರಿಕಾ ಅಭಿವೃದ್ಧಿಗೆ ಪ್ರೇರಕವಾಗಿರಬೇಕಾಗುತ್ತದೆ, ಪ್ರೋತ್ಸಾಹಕರವಾಗಿರಬೇಕಾಗುತ್ತದೆ. ಈ ವಾಸ್ತವಾಂಶಗಳನ್ನು ಸರ್ಕಾರ ಕೂಡ ತಿಳಿದುಕೊಳ್ಳಬೇಕು. ನಾವು ಕೂಡ ಮಾತನಾಡುವಾಗ ಸರ್ಕಾರದ ಗಮನವನ್ನು ಈ ಕಡೆ ಸೆಳೆಯಬೇಕಾಗುತ್ತದೆ. ಈಗ ವಿದ್ಯುತ್ತಿನ ಕೊರತೆ ಇದೆ. ವಿದ್ಯುತ್ತಿನ ಕೊರತೆ ಕೈಗಾರಿಕೆಗಳಿಗೆ ಅತ್ಯಂತ ಬಾಧಕವಾದಂತಹ ವಿಚಾರವೆಂದು ಹೇಳಬಹುದು. ಇದರ ಬಗ್ಗೆ ನಿಮಗೆ ಯಾವುದೇ ರೀತಿಯ ಹತೋಟಿ ಇಲ್ಲವೆಂದು ಹೇಳಬೇಕಾಗಿದೆ. ಇವರು ಇರತಕ್ಕ ಯಥಾಸ್ಥಿತಿ ಬಗ್ಗೆ ಒಂದು ಹೇಳಿಕೆ ಇತ್ತಿದ್ದಾರೆ. ಸರ್ಕಾರ ಕೈಗೊಳ್ಳಬೇಕಾದ ಪವರ್ ಪ್ಲಾನಿಂಗ್ ಮತ್ತು ಇದ್ದ ವಿದ್ಯುತ್ತನ್ನು ಉಪಯೋಗ ಮಾಡಿಕೊಳ್ಳಬೇಕಾದಂತಹ ಒಂದು ಕ್ರಮದ ಬಗ್ಗೆ ಈ ಸರ್ಕಾರ ಉತ್ತರ ಕೊಡಲೇಬೇಕಾಗುತ್ತದೆ.

ಇನ್ನು ಯಾವ ರೀತಿ ಸ್ಟ್ರೈಕ್‌ಗಳು ಆಗುತ್ತದೆ ಹಾಗೂ ಅದರಿಂದ ಯಾವರೀತಿ ಕೈಗಾರಿಕೆಗಳು ಮುಚ್ಚಿ ಹೋಗಿವೆ. ಎಂಬುದನ್ನು ನೋಡಬೇಕು. ಕೈಗಾರಿಕೆಗಳು ಮುಚ್ಚಿ ಹೋಗಿರುವುದಕ್ಕೆ ಅನೇಕ ಕಾರಣಗಳು ಇರಬಹುದು. ಎಲ್ಲವನ್ನೂ ಮ್ಯಾನೇಜ್‌ಮೆಂಟ್ ವೈಫಲ್ಯತೆ ಕಾರಣವೆಂದು ಹೇಳಬಹುದು, ಅದಕ್ಕೆ ಪ್ರಮುಖವಾಗಿ ಸರ್ಕಾರದ ಜವಾಬ್ದಾರಿ ಕೂಡ ಇರುತ್ತದೆ. ಸರ್ಕಾರ ಭದ್ರವಾದ ತಮ್ಮ ರಾಜಕೀಯ ಹಿತಾಸಕ್ತಿ ಮುಖಾಂತರ ಅದನ್ನು ಸ್ಥಾಪನೆ ಮಾಡತಕ್ಕದ್ದು, ಸರ್ಕಾರ ಅದನ್ನು ಹತೋಟಿಯಲ್ಲಿಡತಕ್ಕದ್ದು ಸರ್ಕಾರದ ನಿಯಂತ್ರಣದಲ್ಲಿರತಕ್ಕದ್ದು ಸೂಕ್ತ. ಇವೊತ್ತು ಅದನ್ನು Even Economic Survey 1986-87ರವರೆಗೆ ಒದಗಿಸಿದ ಮಾಹಿತಿ ಮುಖಾಂತರ "ಇಂಡಸ್ಟ್ರಿಯಲ್ ರಿಲೇಷನ್ಸ್" ಪುಟ ೮೮ರಲ್ಲಿ ಇದೆ, ಆದರಲ್ಲಿ ಯಾವ ರೀತಿ ಸ್ಟ್ರೈಕ್‌ಗಳು ಏರಿದೆ ಇದರ ಬಗ್ಗೆ ಎಲ್ಲಾ ತಿಳಿಸಿದ್ದಾರೆ. Strikes have increased 90% over the last year. ಲಾಕ್-ಔಟ್ 3% over the last year ಹೆಚ್ಚು ಆಗಿದೆ. lay-off 21 ಪರ್ಸೆಂಟ್ ಜಾಸ್ತಿ ಆಗಿದೆ. ಸರ್ಕಾರದವರ dis-investment policy ನಿಂದ ಈಗ ರಾಜ್ಯದಲ್ಲಿ ಕೈಗಾರಿಕಾ ಪರಿಸ್ಥಿತಿ ಉಲ್ಬಣಗೊಂಡಿದೆ. ಇದರ ಬಗ್ಗೆ ಸರ್ಕಾರ ಚಿಂತನೆ ಮಾಡುತ್ತಾ ಇದ್ದೀರಿ ಅಥವಾ ಅದನ್ನು ಸುಧಾರಿಸಿಕೊಂಡು ಹೋಗತಕ್ಕ ಯಾವ ಒಂದು ಪ್ರಯತ್ನ ಮಾಡುತ್ತಾ ಇದ್ದೀರಿ ಎಂದು ನೋಡಿದರೆ ನಮಗೆ ಏನು ಗೊತ್ತಾಗುತ್ತದೆ ಎಂಬುದನ್ನು ಹೇಳುತ್ತೇನೆ ಇದು ಮಾನ್ಯ ಕೈಗಾರಿಕಾ

---

† ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

Tank is presided over by the Chief Minister himself. He is the Chairman of the Think Tank and there was a Sub-Group headed by Sri G.V.K. Rao. The Council headed by the Chief Minister itself takes a decision to hand over it to some-other private industry. That is the decision. It may not be a collective opinion, you may say so. The Chief Minister is collectively responsible to your C binet. ಮುಖ್ಯಮಂತ್ರಿಗಳು ಕ್ಯಾಬಿನೆಟ್‌ನಲ್ಲಿ ತೆಗೆದುಕೊಂಡ ತೀರ್ಮಾನದಂತೆ ಇದು ಕ್ಲೋಸ್ಡ್ ಯೂನಿಟ್ ಆಗಿರಲಿಲ್ಲ. ಸಿಕ್ ಯೂನಿಟ್ ಆಗಿರಲಿಲ್ಲ. ನಷ್ಟ ಹೊಂದುವಂತಹ ಯೂನಿಟ್ ಆಗಿರಲಿಲ್ಲ. ಆದ್ದರಿಂದ ಕ್ಯಾಬಿನೆಟ್‌ನ ತೀರ್ಮಾನ ಡಿಸ್-ಇನ್‌ವೆಸ್ಟ್‌ಮೆಂಟ್ ತೀರ್ಮಾನವಾಗಿದೆ.

SRI K.H. PATIL.—The Hon'ble Minister says that the Cabinet has neither taken a decision nor discussed it either formally or informally. If the Cabinet has no knowledge about it, how an outsider can take cognisance of the matter of our industries and dare to write to the Cabinet ? How can they say that the liquidation proposal is before the Govt. of Karnataka? How a stranger, whether he is a Chief Secretary or a great man or an industrialist, was allowed to take cognigence of our industry? It is in between you and us to decide. If the Cabinet takes a decision, I have no objection, Otherwise, if the Cabinet has no knowledge, how these Officers can take cognigence of these things, I think you must have to mend matters correctly.

SRI J. H. PATEL.—Many a times, we have discu ed about Think Tank, its objectives, its background and all that. I don t want to say anything about it now. I will answer about those details later on. Think Tank may think on so many matters in their own way but Government has its own mind to act.

SRI M. VEERAPPA MOILY.—That means, the Chief Minister, Mr. Ramakrishna Hegde may think in his own way according to his whims and fancies and that this Cabinet may have a different decision. How hetrogeneous this Cabinet is, I leave it to the people of Karnataka to think about it. ಇವರು ಹೇಗೆ ಪ್ಲಾನ್ ಮಾಡುತ್ತಿದ್ದಾರೆಂಬುದನ್ನು ತಾವು ಸ್ವಲ್ಪ ನೋಡಬೇಕು. ಶ್ರೀ ಎಸ್. ಎಂ. ಪಾಟೀಲ್ ಎಂಬುವರು ಸಾರ್ವಜನಿಕ ಕೈಗಾರಿಕಾ ರಂಗದಲ್ಲಿ ಗಂಡುಗಲಿ ಆಗಿದ್ದರು. We must proud of that great man who has built HMT and still he is an authority. ಇಂತಹವರನ್ನು ಅದರ ಅಧ್ಯಕ್ಷರನ್ನಾಗಿ ನೇಮಕ ಮಾಡುವುದರ ಮೂಲಕ ಸರ್ಕಾರ ಒಂದು ಒಳ್ಳೆಯ ಕೆಲಸವನ್ನು ಮಾಡಿತು. That was one of the best decisions that you have taken. Two years that was run very well. In 1986–87, it reached a peak Production of 16,492 tonnes that means about Rs. 45 crores worth of business. Earlier, it was 14,531 tonnes *i. e.*, nearly Rs. 40 Crores worth of business. In 1983–84, it was 7196 tonnes and in 1986–87, it has gone to 16,492 tonnes. For the last three years, the annual rate growth was 35% higest growth rate for any Soap industry, by any factory in the entire country. ಈ ರೀತಿ ಲಾಭ ಮಾಡುತಿದ್ದ ಸೋಫ್ ಫ್ಯಾಕ್ಟರಿ ಅವರು ಸರ್ಕಾರದಿಂದ ಕೇಳಿದ್ದು ಇಷ್ಟೆ, ಅವರು ಸರ್ಕಾರದಿಂದ ಹೆಚ್ಚಿನ ಬಂಡವಾಳ ಕೊಡಿ ಎಂದು ಕೇಳಲಿಲ್ಲ ಅವರು ಕೇಳಿದ್ದು ಏನೆಂದರೆ, ಅಕ್ಯುಮಲೇಟೆಡ್ ಇಂಟರೆಸ್ಟ್ ಏನಿತ್ತು ಅದನ್ನು ರೈಟಾಫ್

ಮಾಡಿ ಎಂದು ಕೇಳಿದರು ಮತ್ತು ಸರ್ಕಾರ ಕೊಡುವ ಬಾಕಿ ಏನಿತ್ತು. ಅದನ್ನು ಈಕ್ವಿಟಿ ಷೇರ್‌ಆಗಿ ಪರಿವರ್ತನೆ ಮಾಡಿ ಎಂದು ಕೇಳಿದರು. ಅವರು ಇಷ್ಟೇ ಕೇಳಿದ್ದು. Mr. GVK Rao's dicision is there about dis investment, They wanted to make it sick so that they can sell it away. Dr. S.M. Patil was forced to resign. ಬಾಕಿ ಯಾರ ಮೇಲೆ ಡಿಸಿಪ್ಲಿನರಿ ಆಕ್ಷನ್ ತೆಗೆದುಕೊಳ್ಳುತ್ತಾರೋ ಅದಕ್ಕೆ ನಾನು ಅಡ್ಡಿ ಬರುವುದಿಲ್ಲ. Who ever is guilty, you punish. Here the man like Dr. S.M. Patil was compelled to resign. ನಿಮಗೆ ಐ.ಎ.ಎಸ್. ಆಫೀಸರ್ಸ್ ಇಲ್ಲದಿದ್ದರೆ ಯಾವ ಕೆಲಸ ನಡಸಲಿಕ್ಕೆ ಆಗುವುದಿಲ್ಲ. youdon't want a technocrat. That is your policy. ಆದರೆ ಈ ಕೈಗಾರಿಕೆಯನ್ನು ಮತ್ತೆ ಸಿಕ್ ಮಾಡತಕ್ಕಂಥ ಪರಿಸ್ಥಿತಿಗೆ ಮಾತ್ರ ಕೊಂಡೊಯ್ಯಬಾರದು ಎಂದಷ್ಟೆ ನಾನು ಹೇಳುವುದು. ಮಾನ್ಯ ಕೃಷ್ಣನ್‌ರವರು ಮಾತನಾಡುವಾಗ ಪ್ರೈವೇಟ್ ಇಂಡಸ್ಟ್ರೀಸ್ ಬಗ್ಗೆ ಹೇಳಿದರು, Now I am refering to the Pubiic sector. There is a MCF factory. It is in joint sector. It is very easy to hand over the Joint sector. ಸ್ವಲ್ಪ ಷೇರ್ಸ್‌ನಲ್ಲಿ ಹೆಚ್ಚು ಕಡಿಮೆ ಮಾಡಿದರೂ ನಡೆಯುತ್ತದೆ, It can easily be handed over to the private sector.

Sri J. H. PATEL.—Strictly speaking, it is not iu joint sector It is a public limited company.

Sri. M. VEEAPPA MOILY.—Even private industry may be a public limited company Under Companies Act, even a private industry can be a public limited Company. Here, even a smallest co-operative society or a marketing society is also a share-holder. ಅದರ ಪ್ರಕಾರ ಸರ್ಕಾರ ಕೂಡ ಶೇರ್ ಹೋಲ್ಡರ್ ಇದೆ. ಇದರಲ್ಲಿ ೧೮೭ ಕೋಟಿ ರೂಪಾಯಿ ಬೇರೆ ಬೇರೆ ಆಫೀಕ್ಸ್ ಫೈನಾನ್ಶಿಯಲ್ ಇನ್ಸಿಟಿಟ್ಯೂಷನ್ ಐಡಿಬಿಐ, ಐಸಿಐ, ಜನರಲ್ ಇನ್‌ಷೂರೆನ್ಸ್ ಕಂಪನಿ, ಎಲ್‌ಐಸಿ ಕಂಪನಿ ಇವರೆಲ್ಲಾ ಇನ್‌ವೆಸ್ಟ್ ಮಾಡಿದ್ದಾರೆ. ಸ್ಟೇಟ್ ಗವರ್ನ್‌ಮೆಂಟ್ ಇನ್‌ವೆಸ್ಟ್‌ಮೆಂಟ್ ಈ ಕೈಗಾರಿಕೆಯಲ್ಲಿರುವುದು ಬರೀ ೨೯ ಕೋಟಿ ಮಾತ್ರ. ಈ ೨೯ ಕೋಟಿಯಲ್ಲಿ ಕೋ ಆಪರೇಟಿವ್ ಸೊಸೈಟಿಮ ಮಾರ್ಕೆಟಿಂಗ್ ಸೊಸೈಟಿ ಇನ್‌ವೆಸ್ಟ್‌ಮೆಂಟ್ ಕೂಡ ಸೇರಿದೆ, ಬರೀ ಸರ್ಕಾರದ್ದು ಮಾತ್ರ ಅಲ್ಲ ಈ ೨೯ ಕೋಟಿ ರೂಪಾಯಿಗಳಲ್ಲಿ ಕರ್ನಾಟಕ ಸರ್ಕಾರದ್ದೂ ಕೋಆಪರೇಟಿವ್ ಸೊಸೈಟಿಗಳದ್ದೂ ಸೇರಿದೆ. ಕೇಂದ್ರ ಸರ್ಕಾರದ ಅಧೀನಕ್ಕೆ ಒಳಪಟ್ಟಂತ ಹಣಕಾಸಿನ ಸಂಸ್ಥೆಗಳಿಗೆ ಒಳಪಟ್ಟದ್ದು ಸುಮಾರು ೧೮ ಕೋಟಿ ರೂಪಾಯಿ. ಮಾನ್ಯ ಅಧ್ಯಕ್ಷರೆ. ಈ ಕೈಗಾರಿಕೆಯನ್ನು ನಾವು ಸುಭದ್ರವಾಗಿ ಇಟ್ಟುಕೊಳ್ಳಬೇಕು, ಏಕೆಂದರೆ ಇದು ಲಾಭದಾಯಕವಾಗಿ ನಡೆಯುತ್ತಿತ್ತು. ಈಗ ಕ್ಯಾಪ್ಟಿವ್ ಪವರ್ ಪ್ಲಾಂಟ್ ಹಾಕಿದ ಕಾರಣ ಪವರ್‌ಗೆ ಕೂಡ ತೊಂದರೆಯಾಗಲಿಕ್ಕೆ ಬರುವುದಿಲ್ಲ. ಆದರೆ ಇವತ್ತು ಏನು ನಡೆಯುತ್ತಿದೆ, ಇದರ ಬಗ್ಗೆ ತಮಗೆ ಸಂಪೂರ್ಣವಾದಂತ ಮಾಹಿತಿ ಇದೆ. ಮಾನ್ಯ ಕಾರ್ಮಿಕ ಸಚಿವರಿಗೆ ಆಗಲಿ ತಮಗೆ ಆಗಲಿ ಸಂಪೂರ್ಣವಾದಂಥ ಮಾಹಿತಿ ಇದೆ. ಅದನ್ನು ಸವಿಸ್ತಾರವಾಗಿ ಹೇಳಬೇಕಾದ ಅವಶ್ಯಕತೆ ಇಲ್ಲ. ಈ ಸದನದಲ್ಲಿ ಈ ವಿಷಯವನ್ನು ಪ್ರಸ್ತಾಪ ಮಾಡುವ ಮೊದಲೇ ಈ ಸಮಸ್ಯೆಯನ್ನು ಪರಿಹಾರ ಮಾಡತಕ್ಕಂಥ ಶಕ್ತಿ ಮಾನ್ಯ ಕಾರ್ಮಿಕ ಸಚಿವರಿಗೂ ಇತ್ತು, ಮಾನ್ಯ ಕೈಗಾರಿಕಾ ಸಚಿವರಿಗೂ ಕೂಡ ಖಂಡಿತ ಇತ್ತು. ಆದರೂ ಪ್ರಸ್ತಾಪ ಮಾಡಲೇ ಬೇಕಾದಂಥ ಪರಿಸ್ಥಿತಿ ಇದೆ. ಈ ಅಧಿವೇಶನ ಪ್ರಾರಂಭ ಆದಾಗಲೇ ಪ್ರಸ್ತಾಪ ಮಾಡಬೇಕಾಗಿತ್ತು, ನಾವು ಮಾಡುವುದಕ್ಕೆ ಹೋಗಿಲ್ಲ. ಬಿಹಾರ ಲೆಜಿಸ್‌ಲೇಟಿವ್ ಅಸೆಂಬ್ಲಿಯಲ್ಲಿ ಹಿಂದೂಸ್ತಾನ್ ಹೆವಿ ಇಂಜಿನಿಯರಿಂಗ್ ಕಾರ್ಪೊರೇಷನ್ ವಿಚಾರ ಬಂದಿತ್ತು. ಅದನ್ನು ತಾವು ಪತ್ರಿಕೆಯಲ್ಲಿ ನೋಡಿದ್ದೀರಿ. The entire business of the House was stalled for about 8–10 days, ಅಲ್ಲೂ ಕೂಡ ಮೈನಾರಿಟಿ ಯೂನಿಯನ್, ಮೆಜಾರಿಟಿ ಯೂನಿಯನ್ ಎರಡು ಎರಡು ಇದೆ. Majority union agreed for some demands of the employees but the minority union did not agree. Therefore there was lock out.

(Dr. Pushpavathi in the Chair)

Lock out was declared. In fact majority union was the INTUC Union at that point of time. For example, in Bihar, I am not mixing politics. When it comes to the question of labour of industrial peace, we should forget politics. I think at that point of time we must draw a line and forget about politics. It may be Congress party or ruling party There, the State Government came down. They agreed. In the interest of industrial peace the Government came down. The minority union which is controlled by opposition party become majority union. That does not matter. As for as the ruling party is concerned, the ultimate object is to estaslish industerial peace. After all our ultimate object is to serve the people. ಇದು ಉಲ್ಬಣಗೊಳ್ಳುವುದಕ್ಕೆ ತಾವು ಅವಕಾಶ ಕೊಡಬಾರದು. ಇದಕ್ಕೆ ಪರಿಹಾರವನ್ನು ಕಂಡು ಹಿಡಿಯುತಕ್ಕ ಪ್ರಯತ್ನವನ್ನು ತಾವು ಮಾಡಬೇಕು. ಈ ವಿಚಾರದಲ್ಲಿ ಅನೇಕ ಪ್ರಶ್ನೆ ಬಂದಿವೆ, ಹೇಳಿಕೆಗಳನ್ನು ಕೂಡ ಬಂದಿವೆ ಕಾಂಗ್ರೆಸ್‌ನವರು ರಾಜಕೀಯ ಮಾಡುತ್ತಾರೆಂದು ಕೂಡ ಬಂದಿದೆ. ಇದರಲ್ಲಿ ರಾಜಕೀಯದ ಪ್ರಶ್ನೆ ಬಂದಿರುವುದರಿಂದ ಹೇಳಲೇಬೇಕಾಗಿದೆ. ಮಂಗಳೂರು ಪೋರ್ಟ್‌ನಲ್ಲಿ ೧೯೮೫ರಲ್ಲಿ ಗಲಾಟೆಯಾಯಿತು. ಹೆಚ್. ಎಂ. ಎಸ್. ಯೂನಿಯನ್ ಅಂದರೆ ಮೈನಾರಿಟಿ ಯೂನಿಯನ್‌ನಲ್ಲಿ ಲೋಕಯ್ಯಶೆಟ್ಟರು, ಮಾಜಿ ಶಾಸಕರು ಇದ್ದರು. Majority union was controlled by INTUC. The president was Mr. N. M. Adyanthaiah. They were forcing the then Chairman to recognise the management. in fact it was not, ಯೂನಿಯನ್‌ನವರು ಸತ್ಯಾಗ್ರಹ ಮಾಡುತ್ತಿರುವಂಥ ಸಂದರ್ಭದಲ್ಲಿ, ಅವರು ಇಲ್ಲಿ ಯಾರು ಡೆಲಿಗೇಷನ್ ಬರದೇ ಇದ್ದರೂ ಮುಖ್ಯ ಮಂತ್ರಿಗಳು ಕೈಹಾಕಿದರು. Chief minister himself went there where the actual disturbance was taking place so that HMS Union can acquire majority. This is a direct political interference to capture control over the trade union. This is a fact. The matter could have been left to the collective opinion of the workers. Otherwise, the concept of trade union will be destroyed. ಇಂಥ ಒಂದು ಪರಿಸ್ಥಿತಿ ಕರ್ನಾಟಕದಲ್ಲಿ ಉದ್ಭವವಾಗಬಾರದು. This is not in the interest of the workers or for establishing industrial peace. ಅಧ್ಯಕ್ಷರೇ, ಮಂಗಳೂರು ಕೆಮಿಕಲ್ಸ್ ಮತ್ತು ಫರ್ಟಿಲೈಸರಸ್ ಫ್ಯಾಕ್ಟರಿಯಲ್ಲಿ, ಆದದ್ದು ಇಷ್ಟೆ On 22-6-87 the General Secretary of this M.C.F. Workers' Union resigned. The general body was also convened on 23-6-87. Meeting was held and they removed Mr. Lokaiah Shetty, and Sri N.M. Adyanthaiah was elected as the President of the Worker's Union. In fact, after the decision of the union general body, the Management should have called Mr. Adyanthaiah. It is a fact that Mr. Lokaiah Shetty's union had lost the majority. Over whelmingly the workers supported Mr. N.M. Adyanthaiah. He was elected as the President of the Union. ೨೫ಕ್ಕೆ ನಾಗೇಶ್ ಪುತ್ರನ್ ಜಾಯಿಂಟ್ ಸೆಕ್ರೆಟರಿಯಾಗಿದ್ದರು. He was way laid by some of the miscreants. They assaulted. ದುಷ್ಕರ್ಮಿಗಳು ಎಂದು ಹೇಳಬಹುದು. ಕೆಲವರು ಅಸಾಲ್ಟ್ ಮಾಡಿದರು. ನಾಗೇಶ್ ಪುತ್ತರನ್ ಜಾಯಿಂಟ್ ಸೆಕ್ರೆಟರಿ, ಎಸ್.ಪಿ.ಗೆ ಪರಸನಲ್ ಆಗಿ ದೂರು ಕೊಟ್ಟಿದ್ದಾರೆ. ಈ ಘಟನೆಗಳು ಯಾವರೀತಿ ಆಗಿದೆ, ಯಾವರೀತಿ ಕಾರ್ಮಿಕರನ್ನು ಬೆದರಿಸಬೇಕು, ಕಾರ್ಮಿಕರ ಮೇಲೆ ಧಾಳಿ ಮಾಡಬೇಕು ಎನ್ನುವ ರೀತಿಯಲ್ಲಿ ಆಗಿದೆ. ಏಕೆಂದರೆ ಮೆಜಾರಿಟಿ ಹೋದಕೂಡಲೇ ಡೆಸ್‌ಪರೇಟ್ ಆದರು. ೨೬ನೇ ತಾರೀಖಿನ ದಿವಸ ಸಮ್ ಆಫ್ ಮಿಸ್ಟರ್ ಲೋಕಯ್ಯಶೆಟ್ಟಿ ಅಂಡ್ ಹಿಸ್‌ಮೆನ್ ಫ್ಯಾಕ್ಟರಿ ಪ್ರಿಮಿಸಿಸ್‌ಗೆ ಬಂದರು. ಅವರು ಫ್ಯಾಕ್ಟರಿ ವರ್ಕರ್ಸ್ ಅಲ್ಲ. ಇದು ಮ್ಯಾನೇಜ್‌ಮೆಂಟಿಗೂ

ಕೂಡ ಗೊತ್ತಿದೆ. ಮ್ಯಾನೇಜ್ ಮೆಂಟ್ ಎದುರಿಗೆ ಮಾರಕ ಆಯುಧ ಹಿಡಿದು ಬೆದರಿಕೆ ವರ್ಕರ್ಸ್ ಮೇಲೆ ಹಾಕಿದರು. ಇಲ್ಲಿ ಜಿಲ್ಲಾಧಿಕಾರಿಗಳು. ಎಸ್.ಪಿ. ಅವರು ಮ್ಯಾನೇಜ್‌ಮೆಂಟ್ ಇವರೆಲ್ಲಾ ಸೇರಿ ಪರಿಸ್ಥಿತಿ ಹತೋಟಿಗೆ ತರಬೇಕಾಗಿತ್ತು. ಆದರೆ They shouldnot have left the issue to go to the streets for a battle. ಇದು ಪ್ರಾಮುಖ್ಯವಾದಂಥ ಕೈಗಾರಿಕೆ, ಮಾನ್ಯ ಕೈಗಾರಿಕಾ ಸಚಿವರು ಇದು ಒನ್ ಆಫ್ ದಿ ಎಸೆನ್ಷಿಯಲ್ ಸರ್ವೀಸಸ್ ಎಂದು ನೋಟಿಫೈ ಆಗಿದೆ ಎಂದು ಹೇಳಿದ್ದಾರೆ. ಅದರ ಹತ್ತಿರ ಮಂಗಳೂರು ಪೋರ್ಟ್ ಕೂಡ ಇದೆ. ಇದು ಸೆನ್ಸಿಟೀವ್ ಏರಿಯಾದಲ್ಲಿ ಇರತಕ್ಕ ಕೈಗಾರಿಕೆ. ಅಲ್ಲದೆ, ಇದು ಸೆನ್ಸಿಟೀವ್ ಆಗಿರತಕ್ಕ ಕೈಗಾರಿಕೆ. ಆದರೆ ಯಾರ ಶಕ್ತಿ ಬಂದು ಜಾಸ್ತಿ ಇದೆ, ಯಾರ ಭುಜಬಲ ಹೆಚ್ಚು ಗಟ್ಟಿ ಇದೆ ಅವರೇ ಗೆದ್ದು ಬಿಡಲಿ ಎನ್ನುವ ಒಂದು ಅರಾಜಕತೆ ವಾತಾವರಣವನ್ನು ಮ್ಯಾನೇಜ್‌ಮೆಂಟಿನವರು ಮಾಡಿದರು. ಅಲ್ಲಿನ ಜಿಲ್ಲಾಧಿಕಾರಿಗಳ, ಹಾಗೂ ಪೋಲೀಸ್ ಅಧಿಕಾರಿಗಳ ನಿರಾಸಕ್ತಿ ವಹಿಸಿದ್ದರಿಂದ, ಈತರಹದ ವಾತಾವರಣ ಉಲ್ಬಣಗೊಳಿಸಲಿಕ್ಕೆ ಪ್ರಯತ್ನ ಮಾಡಿದರು. ಇದು ತಮ್ಮ ಗಮನಕ್ಕೆ ಬಂದಿರಲಿಕ್ಕಿಲ್ಲ. I don't just try to blame you at this stage. ಆದರೆ ಅವರೇ ಇದನ್ನು ಪರಿಹಾರ ಮಾಡಬಹುದಾಗಿತ್ತು. ಯಾವಾಗಲೂ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇಂತಹ ಪ್ರಸಂಗ ಬಂದಾಗ the district authorities should keep a vigil and stop such incidents. ಯೂನಿಯನ್ ಮೆಜಾರಿಟಿ ಯಾವುದಿದೆ ಎಂದು ನೋಡಬೇಕು, ಏಕಾಏಕಿ ರೆಕಗನೈಸ್ ಮಾಡಬೇಕೆಂದು ನಾನು ಹೇಳುತ್ತಿಲ್ಲ. We are not asking across the table. There is a process like secret ballot etc., ಯಾವುದೇ ಪ್ರಜಾಪ್ರಭುತ್ವದ ಕ್ರಮಕ್ಕೆ ನಾವು ಬದ್ಧರಿದ್ದೇವೆ. ಅವೊತ್ತು ಹೇಳಿದ್ದೇವೆ, ಇವೊತ್ತು ಹೇಳುತ್ತೇವೆ, ಇನ್ನು ಮುಂದೆಯೂ ಹೇಳುತ್ತೇವೆ, ನಮ್ಮ ಯೂನಿಯನ್ ಮೆಜಾರಿಟಿ ಇದೆ ಎಂದು ಡಿಕ್ಲೇರ್ ಮಾಡಿ, ಎಂದು ಹೇಳುವುದಿಲ್ಲ. We are not here to argue for that. ಇವತ್ತು ಒಂದು ಮೆಜಾರಿಟಿ ಯೂನಿಯನ್ ಇದೆಯೆಂದು ಹೇಳಿ

೪–೩೦ ಪಿ. ಎಂ.

ವರ್ಕರ್ಸ್‌ನ್ನು ಹೊರಗೆ ಹಾಕಿ ಬಲವದ್ಬಂಧನ ಮಾಡಿ ಮಾರಕ ಆಯುಧಗಳನ್ನು ಉಪಯೋಗಿಸಿ ಪ್ರಾಣಾಪಾಯವಾಗುವವರೆಗೆ ಹೊಡೆದು ಬಡಿದು ಯೂನಿಯನ್‌ನ್ನು ಕಟ್ಟುತ್ತೇವೆಂದು ಹೋದರೆ ಅದು ಯಾವುದೇ ಯೂನಿಯನ್ ಆಗಿರಲಿ ಅದರಿಂದ ಆ ಪಕ್ಷ ಬೆಳೆಯುವುದಿಲ್ಲ, ಅದರಿಂದ ಪಕ್ಷ ಸುಭದ್ರವಾಗುತ್ತದೆಂದು ನೀವು ತಿಳಿದುಕೊಂಡಿದ್ದರೆ ಅದು ತಪ್ಪಾಗುತ್ತದೆ...

ಶ್ರೀ ಎಂ. ರಘುಪತಿ.—ಮಾನ್ಯ ಎಫ್. ಎಂ. ಖಾನ್‌ರವರನ್ನು ನಾವು ನಂಬಿಕೊಂಡು ಮಾಡಿದಂತಾಗುತ್ತದೆ.

ಶ್ರೀ ಎಸ್. ಬಂಗಾರಪ್ಪ.—ತಮ್ಮ ಅನುಭವದಿಂದ ಹೇಳುತ್ತಿದ್ದೀರೆಂದು ಕಾಣುತ್ತದೆ.

ಶ್ರೀ ಎಂ. ವೀರಪ್ಪಮೊಯ್ಲಿ.—ಖಾನ್‌ರವರ ಹತ್ತಿರದ ಪರಿಚಯದ ಅನುಭವ ನನಗಿಲ್ಲ.

ಶ್ರೀ ಎಂ. ರಘುಪತಿ.—ನಾವೂ, ನೀವೂ ಎದ್ದು ನಿಲ್ಲುತ್ತಿರಲಿಲ್ಲ.

ಶ್ರೀ ಎಂ. ವೀರಪ್ಪಮೊಯ್ಲಿ.—ಆ ವಿಚಾರವನ್ನು ಇಲ್ಲಿ ತರುವುದು ಬೇಡ.

ಶ್ರೀ ಎಸ್. ಬಂಗಾರಪ್ಪ.—ನಿಮ್ಮಲ್ಲಿ ಗುರು ಯಾರು ? ಶಿಷ್ಯ ಯಾರು ಎಂಬುದು ಗೊತ್ತಾಗುತ್ತಿಲ್ಲ. ಎಲ್ಲಾ ಕನ್‌ಫ್ಯೂಸ್ ಆಗುತ್ತಿದೆ

ಶ್ರೀ ಬಸವರಾಜ ಪಾಟೀಲ್.—ಮೊಯ್ಲಿಯವರಿಗೆ ಎಲ್ಲಾ ಗೊತ್ತಿದೆ.

ಶ್ರೀ ಎಂ. ವೀರಪ್ಪಮೊಯ್ಲಿ.—ಲೇಸ್ಲಿ ಡಿಸೋಜ ಎನ್ನುವವರು ಎಂ. ಸಿ. ಎಂ.ನ ಒಬ್ಬ ಎಕ್ಸಿಕುಟೀವ್ ಮೆಂಬರ್. ಇದು ಕ್ರೋನಾಲಜಿ ಆಫ್ ಇನ್ಸಿಡೆಂಟ್ಸ್. ಅವರನ್ನು ಆಸ್ಪತ್ರೆಗೆ ಸಾಗಿಸಿದ್ದಕ್ಕೆ ರೆಕಾರ್ಡ್ ಇದೆ. ಅವರನ್ನು ಅಸಾಲ್ಟ್ ಮಾಡಿದ್ದಾರೆಂದು ಕೇವಲ ಬಾಯಿ ಮಾತಿನಲ್ಲಿ ಹೇಳುವುದಲ್ಲ. ಅವರನ್ನು ಆಸ್ಪತ್ರೆಗೆ ಸಾಗಿಸಿ ಚಿಕಿತ್ಸೆಯನ್ನೂ ಕೂಡ ಮಾಡಲಾಗಿದೆ. ೩೦ನೇ ತಾರೀಖು ಮತ್ತೆ ಔಟ್ ಸೈಡರ್ಸ್ ಒಳಗೆ ಹೋದರು, ಅಲ್ಲಿ ಅವರು ಗಲಾಟೆ ಮಾಡಿದರು. ಮ್ಯಾನೇಜ್‌ಮೆಂಟ್‌ನವರು ಯಾರೂ ಕೂಡ ಕಂಪ್ಲೈಂಟ್ ಮಾಡಲಿಲ್ಲ. ಯಾವ ಕ್ರಮವನ್ನೂ ತೆಗೆದುಕೊಳ್ಳಲಿಲ್ಲ. ೨೨ ರಿಂದ ೩೦ನೇ ಜೂನ್ ವರೆಗೆ ಎಷ್ಟೋ ಹೊಡೆದಾಟ ಬಡಿದಾಟ ಆಯಿತು. INTUC based Union has not assaulted anyone. ತಾವು ನನ್ನ ಜೊತೆ ಮಾತನಾಡಿದ್ದೀರಿ. ಅವರೂ ಹೇಳಿದ್ದಾರೆ...

ಶ್ರೀ ಆರ್. ವೆಂಕಟರಾಮಯ್ಯ.—ನಿಮ್ಮ ಸರ್ಕಾರ ಇದ್ದಾಗ ಹೊಡೆಯಿತೇ ?

SRI M. VEERAPPA MOILY.—It is a worker's problem. You can use the democratic system. ಇವತ್ತಿಗೆ ೬೪ನೇ ದಿವಸಕ್ಕೆ ದಾಟಿದೆ. ಅಲ್ಲಿ ಒಂದು ದಿವಸಕ್ಕೆ ೫೦ ಲಕ್ಷ ರೂಪಾಯಿಯು ಉತ್ಪಾದನೆ ಆಗುತ್ತಿತ್ತು, ಇದನ್ನು ಲೆಕ್ಕ ಹಾಕಿದರೆ ಸುಮಾರು ೩೦ ಕೋಟಿ ರೂಪಾಯಿ ನಷ್ಟವಾಗಿದೆ. ಟ್ರೇಡ್ ಯೂನಿಯನ್ ವರ್ಕರ್ಸ್‌ಗೆ ಕೆಲಸ ಇಲ್ಲ. ಅಷ್ಟೇ ಅಲ್ಲ, ದೇಶದ ಉತ್ಪತ್ತಿಯೂ ಕೂಡ ಕಡಿಮೆಯಾಗುತ್ತಿದೆ. ಆದರೂ ಕೂಡ ೩೦ನೇ ತಾರೀಖಿನವರೆಗೆ ಸರ್ಕಾರ ಏತಕ್ಕೆ ಸಂಪೂರ್ಣವಾಗಿ ಕಣ್ಣು ಮುಚ್ಚಿ ಕುಳಿತಿತ್ತು? Brutal forces want it to decide on the streets. ಇದಕ್ಕೆ ಆಹ್ವಾನವನ್ನು ಯಾರೂ ಕೊಡಬಾರದು. ಅದೂ ಕೂಡ ಮ್ಯಾನೇಜ್‌ಮೆಂಟ್ ಕಡೆಯಿಂದ, ಸರ್ಕಾರದ ಕಡೆಯಿಂದ ಬಂದಿದೆಯೆಂದರೆ ಪ್ರೈವೇಟ್ ಮ್ಯಾನೇಜ್‌ಮೆಂಟ್‌ನವರಿಗೆ ಬುದ್ಧಿ ಹೇಳತಕ್ಕ ನೈತಿಕ ಶಕ್ತಿ ನಿಮ್ಮಲ್ಲಿ ಎಲ್ಲಿ ಉಳಿಯುತ್ತದೆ? I am asking you not just as a Minister, but in totality. ನಿಮ್ಮಲ್ಲಿ ನೈತಿಕ ಶಕ್ತಿ ಎಲ್ಲಿದೆ? ಇದೇ ಸದನದಲ್ಲಿ ಹಿಂದೆ ಮಾನ್ಯ ಮುಖ್ಯಮಂತ್ರಿಗಳು ಒಂದು ಸಾರಿ ಹೇಳಿದ್ದರು. ಅದು ಏನೆಂದರೆ, ನಾವು ಯಾರೂ ಕೂಡ ಇದರಲ್ಲಿ ಕೈಹಾಕುವುದಕ್ಕೆ ಹೋಗುವುದು ಬೇಡ. ಅವರವರೇ ಡಿಸೈಡ್ ಮಾಡಿಕೊಂಡು ಬರಲಿ ಎಂದು. ಅಂದರೆ ಅಲ್ಲಿ ಹೆಣ ಬಿದ್ದರೂ ಬೀಳಲಿ, ಆಮೇಲೆ ಅದರ ಚೆಂದ ನೋಡೋಣ ಎಂದು. ಶವ ಬಿದ್ದ ಮೇಲೆ ಏನು ಮಾಡುವುದು? ಶವ ಸಂಸ್ಕಾರ ಮಾಡುವುದಕ್ಕೆ ಈ ಸರ್ಕಾರ ಹೋಗುತ್ತದೆಯೋ? ಇಂಥ ಒಂದು ಪರಿಸ್ಥಿತಿ ಅಲ್ಲಿ ಉದ್ಭವವಾಗಬಾರದು. ೧ನೇ ತಾರೀಖು ಎಂಪ್ಲಾಯೀಸ್ ಪೈಕಿ ಒಬ್ಬ ವರ್ಕರ್ ಗೇಟ್‌ನಿಂದ ಹೊರಗಡೆ ಪ್ರೊಟೆಸ್ಟ್ ಮಾಡಿದರು. ಈಗ ಪ್ರೊಟೆಸ್ಟ್ ಅಲ್ಲಿ ಮಾಡಿದಾಗ ಫಸ್ಟ್ ಏನು ಮಾಡಿದರು ಎಂದರೆ ಒಬ್ಬ ವಿನೋದ ಡಿಸೌಜ ಎಂಬುವರು ೩೦ನೇ ತಾರೀಖು ಅಲ್ಲಿ ಟ್ರಜರಿ ವರ್ಕರ್ ಆಗಿದ್ದರು, ಮತ್ತು ಯೂನಿಯನ್ ವರ್ಕರ್ ಕೂಡ ಆಗಿದ್ದರು. ಅವರ ತಮ್ಮ ಮನೋಹರ್ ಡಿಸೌಜ ಎಂದು ಅವರು ಸ್ಟೂಡೆಂಟ್ ಅಲ್ಲದೆ ವರ್ಕರ್ ಆಫ್ ದಿ ಬ್ಯಾಂಕ್ ಆಗಿದ್ದರು. ಅವರು ಹೆಲ್‌ಮೆಟ್ ಹಾಕಿಕೊಂಡು ಮೋಟಾರ್‌ಬೈಕ್‌ನಲ್ಲಿ ಹೋಗುತ್ತಿದ್ದುದರಿಂದ ದುಷ್ಕರ್ಮಿಗಳು ವಿನೋದ್ ಡಿಸೌಜ ಎಂದು ತಿಳಿದು ಮನೋಹರ್ ಡಿಸೌಜರವರನ್ನು ಮಾರಕ ಅಸ್ತ್ರಗಳಿಂದ ಕಡಿದು ಬಿಟ್ಟರು. ಅಷ್ಟು ತೀವ್ರವಾಗಿ ಗಾಯವಾಗಿದ್ದುದರಿಂದ ಕೇಸ್ ರಿಜಿಸ್ಟರ್ ಮಾಡಿಕೊಂಡರು. ಇಲ್ಲದಿದ್ದರೆ ಕೇಸ್ ಕೂಡ ರಿಜಿಸ್ಟರ್ ಮಾಡಿಕೊಳ್ಳುತ್ತಿರಲಿಲ್ಲ. ಐ.ಪಿ.ಸಿ. ೩೦೭ರ ಪ್ರಕಾರವಾಗಿ ಕೇಸ್ ರಿಜಿಸ್ಟರ್ ಮಾಡಿಕೊಂಡರು. ಆದರೆ ಈವತ್ತಿನವರೆಗೆ ಇಲ್ಲಿಯವರೆಗೂ ಕೂಡ ಪರಿಸ್ಥಿತಿ ಹಾಗೆಯೇ ಉಳಿದಿದೆ. ಎಂಪ್ಲಾಯೀಸ್ ಕೂಡ ಪ್ರೊಟೆಸ್ಟ್ ಮಾಡಿದರು. ಮ್ಯಾನೇಜ್‌ಮೆಂಟ್ ಪ್ರೊಟೆಸ್ಟ್ ಮಾಡಿದರು ಎಂದು ಹೇಳಿ ೫ ಜನ ಆಫೀಸ್ ಬೇರರ್ಸ್‌ಗಳನ್ನು ಸಸ್ಪೆಂಡ್ ಮಾಡಿದ್ದಾರೆ. ಗಲಾಟೆ ನಡೆಯುತ್ತಿರುವಾಗ, ಆಮೇಲೆ ಜುಲೈ ೩ನೇ ತಾರೀಖು ಅಸಿಸ್ಟೆಂಟ್ ಲೇಬರ್ ಕಮಿಷನರ್‌ರವರು ಒಂದು ಸಭೆಯನ್ನು ಕರೆದರು. ಸಭೆ ಕರೆದ ಪ್ರೊಸೀಡಿಂಗ್ಸ್ ಕೂಡ ನನ್ನ ಹತ್ತಿರ ಇದೆ. ಅವರು ನೋಟಿಸ್ ಕಳುಹಿಸಿ ಸಭೆಯನ್ನು ಕರೆದರು. It is only for discussion not for conclusion. No decision are implemented. ಅಲ್ಲಿ ಮೀಟಿಂಗ್ ಕೂಡ ಆಯಿತು. ಇದು ಆಗಿ ಈವತ್ತಿಗೆ ೬೪ ದಿವಸಗಳು ಆಗಿದೆ. ಈವತ್ತಿನವರೆಗೂ ಅಸಿಸ್ಟೆಂಟ್ ಲೇಬರ್ ಕಮಿಷನರ್‌ರವರು ಯಾವ ಸಭೆಯನ್ನು ಕರೆಯಲಿಲ್ಲ. ಡಿಸ್ಕಷನ್ ಇರಲಿ ಕನ್‌ಸಿಲಿಯೇಷನ್ ಪ್ರಶ್ನೆಯೇ ಇಲ್ಲ. ಇನ್ನು ೬ನೇ ತಾರೀಖು ಎಂ.ಸಿ.ಎಫ್. ವರ್ಕರ್ ಕೇಶವ ಎಂಬುವನನ್ನು he was again brutally assulted by the anti social elements, Nobody should take it as a lesson. ಇದು ನಮ್ಮ ಜಿಲ್ಲೆಗೆ ಬಹಳ ಅವಮಾನ ಸಂಗತಿ. ಹೀಗೆ ಯಾವ ಜಿಲ್ಲೆಯಲ್ಲೂ ಈ ರೀತಿ ಆಗುವುದು ಬೇಡ. ಕೇಳಿಬಿಡುತ್ತೇವೆಂದು ಹೇಳಬೇಡಿ. This is a culture which has been preperated again and again. ಹೊಡೆದು ಬಡಿದು ಕೈಕಾಲನ್ನು ತೆಗೆದು ಏನಾದರೂ ಮಾಡಿಬಿಡುತ್ತಾರೆ, ಯೂನಿಯನ್ ಕಟ್ಟಬೇಕೆಂದು.

ಇನ್ನು ೭-೭-೧೯೮೭ರಂದು ವರ್ಕರ್ಸ್ ಫ್ಯಾಕ್ಟರಿಗೆ ಒಳಗೆ ಹೋಗಬೇಕೆಂದು ಹೇಳಿದಾಗ ಮ್ಯಾನೇಜ್‌ಮೆಂಟ್ ಬಿಡಲಿಲ್ಲ. ಗೇಟ್ ಹಾಕಿಬಿಟ್ಟರು. Some of the workers who were inside they were assaulted. The workers who are not allowed inside. They remained outside, ಪರಿಸ್ಥಿತಿ ಇದು. ಆಮೇಲೆ ಎರಡನೇ ಜುಲೈರಂದು ಲೇಬರ್ ಕಮಿಷನರ್‌ರವರು ಒಂದು ಸಭೆಯನ್ನು ಬೆಂಗಳೂರಿನಲ್ಲಿ ಕರೆದರು.

ಆ ಸಭೆಗೆ ಎಂ.ಸಿ.ಎಫ್. ವರ್ಕರ್ಸ್ ಅಧ್ಯಕ್ಷರಾದ ಶ್ರೀಮಾನ್ N.M. Adyanthaiah ಮತ್ತು ಶ್ರೀಮತಿ ಲೀಲಾ ಕೃಷ್ಣನ್‌ರವರು ಅವರು ಹಾಜರಾಗಿದ್ದರು. ಆದರೆ ನನಗೆ ತಿಳಿದ ಮಟ್ಟಿಗೆ M.R. Lokayya Setty has not attended. ಇಲ್ಲಿ ಮ್ಯಾನೇಜ್‌ಮೆಂಟ್‌ನವರು ಕೂಡ ಬಂದಿಲ್ಲ, ಯಾರೂ ಬರಲಿಲ್ಲ. Again this meeting was called for a discussion and not for any conciliation. I have got the copy of the proceedings also. I think the Labour Commissioner conducted the meeting and six issues were discussed. An advice was made and it was practically an ex-parte advise. Management representatives were not there, Sri Lokaiah Shetty who is contending otherwise was not there. They may be invisible advice, may not be from the Labour Commissioner, but from the quarters which can embolden to take law into hands and handle the situation. ಇದೆಲ್ಲಾ ನಡೆಯಿತು. ಆದ್ದರಿಂದ ಆ ಮೀಟಿಂಗ್‌ನಲ್ಲಿ ಯಾವುದೇ ರೀತಿಯ ಒಂದು ವಿಚಾರ ಚರ್ಚೆಯಾಗಲಿಲ್ಲ. Again on 3-7-1987, the supporters of H.M.S. went inside the Colony. ಅವರ ಕುಟುಂಬಕ್ಕೆ ಹೆದರಿಕೆ ಹಾಕಲಿಕ್ಕೆ ಶುರು ಮಾಡಿದರು. ಇವರನ್ನೆಲ್ಲಾ ಹೆದರಿಸಿ, ಬೆದರಿಸಿ ಆಯಿತು. ಆಮೇಲೆ ಕಾಲೋನಿಯಲ್ಲಿರುವವರನ್ನೆಲ್ಲಾ ಹೆದರಿಸಲಿಕ್ಕೆ ಶುರು ಮಾಡಿದರು. I am sorry; the incident of Manohar D'Souza took place on 4-8-1987 and not on 27-7-1987. ನಂತರ ಎರಡು ಡಿಸ್ಟರ್ಬೆನ್ಸ್ ಆಯಿತು. A complaint was filed before the Superintendent of Police. ಇಷ್ಟೆಲ್ಲಾ ಆದಮೇಲೆ ಇವರಿಂದು ನಾವು ಮುಖ್ಯಮಂತ್ರಿಯವರನ್ನು ಭೇಟಿಯಾದೆವು. ಮತ್ತು ಅಲ್ಲಿ ಶಾಂತಿ ಸ್ಥಾಪನೆ ಮಾಡಬೇಕೆಂದು ಕೇಳಿಕೊಂಡೆವು. ಆ ದಿವಸ ನನಗೆ ಮುಖ್ಯಮಂತ್ರಿಗಳನ್ನು ಭೇಟಿಯಾಗಲು ಸಾಧ್ಯವಾಗಲಿಲ್ಲ. ಮಾನ್ಯ ಆಡ್ಯಂತಾಯ ಮತ್ತಿತರ ಸ್ನೇಹಿತರು ಭೇಟಿಯಾದರು. ಆಗಲೇ ಲೇಬರ್ ಕಮಿಷನರ್‌ರವರು ಸರಿಯಾಗಿ ಆದೇಶ ಕೊಟ್ಟು ಈ ಬಗ್ಗೆ ವ್ಯವಹರಿಸಿದ್ದರೆ ಎಷ್ಟು ಉತ್ಪಾದನೆ ಉಳಿಯುತ್ತಿತ್ತು? ಕೋಟ್ಯಾಂತರ ರೂಪಾಯಿಗಳನ್ನು ಉಳಿಸಬಹುದಾಗಿದ್ದು ಸರ್ಕಾರದ ಕೈಯಲ್ಲಿತ್ತು. on 13th August 1987, the employees resorted to hunger strike. ಇಂಟೆಕ್ ವರ್ಕರ್ಸ್ ಅನ್‌ರೀಸನಬಲ್ ಆಗಿ ನಡೆದುಕೊಂಡರು ಎಂದು ತಿಳಿದುಕೊಳ್ಳಬಾರದೆಂದು ಸದನಕ್ಕೆ ಈ ಎಲ್ಲಾ ಮಾಹಿತಿಗಳನ್ನು ಕೊಡುತ್ತಿದ್ದೇನೆ. It is only after one and half months, the resorted to hunger strike. Affer one and half months, without resorting to violence, without taking law into their hands, they resorted to hunger strike. Again on 19th, a procession was taken to the Deputy Commisioner. About 600 employees of the M. C. F. factory went in procession to the office of the Deputy Commissioner, with a Memorandum to solve their problem. ಮೆಮೊರ್ಯಾಂಡಮ್ ಕೊಟ್ಟಾಗ ಅದರಲ್ಲಿ ಸ್ಪಷ್ಟವಾಗಿತ್ತು. ಇದಕೆ. ಯಾವುದೇ ಪರಿಹಾರ ನೀಡದಿದ್ದರೆ. ನಾವು ೨೫ರಿಂದ ಅಮರಣಾಂತ ಸತ್ಯಾಗ್ರಹ ಮಾಡುತ್ತೇವೆಂದು ಡಿ. ಸಿ. ಯವರ ಮುಂದೆ ಸ್ಪಷ್ಟವಾಗಿ ಹೇಳಿದರು. ಅವರುಗಳೇ ನಿರ್ಣಯ ತೆಗೆದುಕೊಂಡು ಮಾಡಿದರು ಎಂದು ಸಾರ್ವಜನಿಕರಲ್ಲಿ ಅಭಿಪ್ರಾಯ ಬರಬಾರದು ಮತ್ತು ಸದನಕ್ಕೂ ಆ ರೀತಿ ಅಭಿಪ್ರಾಯ ಬಾರದೆಂದು ವಿವರವಾಗಿ ಹೇಳುತ್ತಿದ್ದೇನೆ. ೨೫ನೇ ತಾರೀಖು ಐದು ಜನ ವರ್ಕರ್ಸ್ ಅಮರಣಾಂತ ಉಪವಾಸ

(ಮಾನ್ಯ ಅಧ್ಯಕ್ಷರು ಪೀಠದಲ್ಲಿದ್ದರು.)

ಮುಷ್ಕರವನ್ನು ಕೈಗೊಂಡರು. ೨೭ನೇ ತಾರೀಖಿಗೆ ಒಬ್ಬರನ್ನು ಆಸ್ಪತ್ರೆಗೆ ಸೇರಿಸಲಾಯಿತು. ಸುಮಾರು ೫ ಜನ ಆಸ್ಪತ್ರೆಗೆ ಸೇರಿದ್ದಾರೆ. ಅವರು ಅತ್ಯಂತ ಗಂಭೀರ ಪರಿಸ್ಥಿತಿಯಲ್ಲಿ ಇದ್ದಾರೆ. ಇವತ್ತು ಅಲ್ಲಿಂದ ಟೆಲಿಗ್ರಾಂ ಕೂಡ ಬಂದಿದೆ. ಅದರಲ್ಲಿ

> "Shabaraya who is the General Secretary of M. C. F. workers Union Serious – Hospitalised by police, Hunger strike upto death – position critical, all four persons hospitalised"

ಎಂದು ಹೇಳಿದ್ದಾರೆ. ಇದನ್ನು ನಾನು ತಮ್ಮ ಮುಖಾಂತರ ಮಾನ್ಯ ಕೈಗಾರಿಕಾ ಸಚಿವರಿಗೆ ಕಳುಹಿಸುತ್ತಿದ್ದೇನೆ. ಆದ್ದರಿಂದ ಪರಿಸ್ಥಿತಿ ಇವತ್ತು ಅತ್ಯಂತ ಗಂಭೀರವಾಗಿದೆ. ೫ ಜನ ವರ್ಕರ್ಸ್ ಯಾರು ಹೆಚ್. ಎಂ. ಎಸ್. ಯೂನಿಯನ್‌ನಲ್ಲಿ ೧೯೮೬ನೇ ಇಸವಿಯಲ್ಲಿರುವಾಗ ಸಸ್‌ಪೆಂಡ್ ಅವರು ಅವರು ಇಂಟಕ್ ಯೂನಿಯನ್‌ಗೆ ಸೇರಿದರು ಎಂಬ ಕಾರಣದಿಂದ ಈ ಸ್ಟ್ರೈಕ್ ಆಗುತ್ತಿರುವಾಗ ಅವರನ್ನು ಟರ್ಮಿನೇಟ್ ಮಾಡಿದ್ದಾರೆ. ಇದು ಯಾವ ಕಾರ್ಮಿಕ ನೀತಿ ? ಆಮೇಲೆ ಪುನಃ ೫ ಜನರನ್ನು ಸಸ್ಪೆಂಡ್ ಮಾಡಿದ್ದಾರೆ. ಹೆಡ್ ಆಫೀಸಿನಲ್ಲಿ ಕೆಲಸ ಮಾಡುತ್ತಿದ್ದ ಇಬ್ಬರನ್ನು ಈ ಸ್ಟ್ರೈಕ್, ಗೊಂದಲ ಪ್ರಾರಂಭ ಆದಮೇಲೆ ಸಸ್ಪೆಂಡ್ ಮಾಡಿದ್ದಾರೆ. ಒಟ್ಟು ೭ ಜನರನ್ನು ಸಸ್ಪೆಂಡ್ ಮಾಡಿದ್ದಾರೆ. ಇನ್ನೂ ೬೦೦ ಜನರಿಗೆ ನೋಟೀಸ್ ಕೊಟ್ಟಿದ್ದಾರೆ. ಹೇಗಾದರೂ ಮಾಡಿ ಇಂಟಕ್‌ಗೆ ತಮ್ಮ ಬೆಂಬಲ ನೀಡಿರುವವರಿಗೆ ಮ್ಯಾನೇಜ್‌ಮೆಂಟ್ ದಬ್ಬಾಳಿಕೆ ಇರಬಹುದು, ಹೆಚ್. ಎಂ. ಎಸ್. ಕಾರ್ಮಿಕರ ದಬ್ಬಾಳಿಕೆ ಇರಬಹುದು ಅದನ್ನು ಮಾಡಿ ಅವರ ಒಲವನ್ನು ದೊರಕಿಸಿಕೊಳ್ಳಲು ಪ್ರಯತ್ನ ನಡೆಯುತ್ತಿದೆ. ಇವತ್ತು ಅಮರಣಾಂತ ಉಪವಾಸ ಮಾಡಿ ಎಲ್ಲಾ ಕಷ್ಟ ಕಾರ್ಪಣ್ಯಗಳನ್ನು ಅನುಭವಿಸಿ ತೀವ್ರವಾದ ಧಾಳಿಯನ್ನು ಎದುರಿಸಿದರೂ ಅವರ ದಬ್ಬಾಳಿಕೆ ಬಗ್ಗದೆ ಆತ್ಮಶಕ್ತಿಯಿಂದ ಯೂನಿಯನ್ ವರ್ಕರ್ಸ್ ಇದ್ದಾರೆಂದರೆ ಇದು ಕರ್ನಾಟಕದ ಕಾರ್ಮಿಕ ವರ್ಗಕ್ಕೆ, ಅವರ ನೈತಿಕ ಆತ್ಮ ಬಲಕ್ಕೆ ಅತ್ಯುತ್ತಮವಾದ ನಿದರ್ಶನ ಎಂದು ಹೇಳುವುದಕ್ಕೆ ನಾನು ಬಹಳ ಅಭಿಮಾನ ಪಡುತ್ತೇನೆ. ತಾಳ್ಮೆಯಿಂದ, ಅಹಿಂಸೆಯಿಂದ ಪ್ರಜಾಪ್ರಭುತ್ವ ರೀತಿಯಲ್ಲಿ ಕಾರ್ಮಿಕರ ಹಕ್ಕನ್ನು ಚಲಾಯಿಸುವುದಕ್ಕೆ ಇದ್ದಂಥ ಒಂದು ಕಾರ್ಮಿಕ ಸಮುದಾಯವನ್ನು ತುಳಿಯತಕ್ಕ ಕೆಲಸವನ್ನು ಸಮಾಜವಾದಿಗಳಾದ ತಾವು (ಶ್ರೀ ಜೆ. ಹೆಚ್. ಪಟೇಲರಿಗೆ) ಮಾಡಬಾರದು. ತಾವು ಈ ರೀತಿ ಮಾಡಲಿಕ್ಕೆ ಮನಸ್ಸು ಕೊಡಲಿಲ್ಲ ಎಂದು ನನ್ನ ನಂಬಿಕೆ. ಇನ್ನು ಮುಂದೆ ಕೂಡ ಕೊಡಬಾರದು. ತಾವು ಹೇಳಬಹುದು. ೫ಜನ ವರ್ಕರ್ಸ್ ಹೆಚ್. ಎಂ. ಎಸ್. ನಲ್ಲಿ ೧೯೮೬ರಲ್ಲಿದ್ದು ಏನು ಸಸ್ಪೆಂಡ್ ಆಗಿದ್ದು ಟರ್ಮಿನೇಟ್ ಯಾರು ಆಗಿದ್ದಾರೆ ಅವರು ಹಿಂಸಾತ್ಮಕವಾಗಿ ಹೊಡೆಯುವುದಕ್ಕೆ ಹೋದರು, ಆದ್ದರಿಂದ ಸಸ್ಪೆಂಡ್ ಆದರು ಎಂದು ಹೇಳಬಹುದು. At that time they were not members of our Union. They were the members of HMS Union and they owed allegiance to Mr, Lokaiah Setty. ಮ್ಯಾನೇಜ್‌ಮೆಂಟ್ ಯಾವರೀತಿಯಲ್ಲಿ ತಮ್ಮ ಒಂದು ಒಲವನ್ನುಗಳಿಸಿ ಹೆಚ್. ಎಂ. ಎಸ್. ನ್ನು ಬಲಪಡಿಸುವುದು ಎಂಬ ರೀತಿಯಲ್ಲಿ ಪರಿಸ್ಥಿತಿಯನ್ನು ಉಪಯೋಗ ಮಾಡಿಕೊಳ್ಳುತ್ತಿದ್ದಾರೆ ಎಂಬುದನ್ನು ತಾವು ದಯಮಾಡಿ ಯೋಚನೆ ಮಾಡಬೇಕು. ಏಕೆಂದರೆ ಸನ್ಮಾನ್ಯ ಲೋಕಯ್ಯಶೆಟ್ಟರು ನಮ್ಮ ಜಿಲ್ಲೆಯಲ್ಲಿ ತಮ್ಮ ಪಕ್ಷದ ಪ್ರಮುಖ ನಾಯಕರು. ಹೆಚ್. ಎಂ. ಎಸ್. ನ ರಾಜ್ಯ ಘಟಕದ ಅಧ್ಯಕ್ಷರೂ ಕೂಡ ಆದರೆ ದಬ್ಬಾಳಿಕೆಯಿಂದ ಯೂನಿಯನ್ ಕಟ್ಟುವುದಕ್ಕಾಗುವುದಿಲ್ಲ. ವಿಶ್ವಾಸದಿಂದ, ಒಲವಿನಿಂದ, ಸಮುದಾಯ ಶಕ್ತಿಯಿಂದ ಯೂನಿಯನ್ ಬೆಳೆಸಬೇಕು ಎಂಬ ವಿಚಾರವನ್ನು ತಾವು ತಿಳಿದುಕೊಳ್ಳಬೇಕು. ೨೬–೮–೮೭ರಂದು ಪತ್ರಿಕೆಯಲ್ಲಿ ಒಂದು ಹೇಳಿಕೆಯನ್ನು ಕೊಟ್ಟರು. ಮುಂಗಾರು ಪತ್ರಿಕೆಯಲ್ಲಿ ಅವರದೇ ಹೇಳಿಕೆ ಇದೆ. ೫ಜನರ ಮೇಲೆ ಏನು ಕ್ರಮ ಕೈಗೊಂಡಿದ್ದಾರೆ ಅವರು ಹೆಚ್. ಎಂ. ಎಸ್. ಗೆ ಆಫೀಸ್ ಬಿಯರರ್ ಆಗಿದ್ದರು. ಈಗ ಅವರು ಇಂಟಕ್‌ಗೆ ಸೇರಿದ್ದಾರೆ. ಹೆಚ್. ಎಂ. ಎಸ್. ನಲ್ಲಿರುವಾಗ ಸಸ್ಪೆನ್‌ಷನ್ ದಲ್ಲಿದ್ದರು. ಇಂಟಕ್‌ಗೆ ಸೇರಿದಮೇಲೆ ಟರ್ಮಿನೇಟ್ ಮಾಡಲಾಗಿದೆ. It is an award. If they owe allegiance to HMS, we are here to grant pardon. ಅನ್ನುವ ಮಾತನ್ನು ಹೇಳಿದ್ದಾರೆ.

ಮತ್ತೆ ಏನು ಹೇಳಿದ್ದಾರೆ ''ಈಗ ಎಂ. ಸಿ. ಎಫ್ ಸರದಿಗೆ ಬನ್ನಿ, ಅಪಮಾನತುಗೊಂಡ ೫ ಜನ ಕಾರ್ಮಿಕರನ್ನು ಪುನಃ ಕೆಲಸಕ್ಕೆ ಸೇರಿಸಲು ಹೆಚ್, ಎಂ. ಎಸ್ ಪ್ರಯತ್ನಿಸುತ್ತದೆ. ಹೆಚ್. ಎಂ. ಎಸ್ ಪುನಃ ಕೆಲಸಕ್ಕೆ ಸೇರಿಸಿಕೊಳ್ಳುವುದಕ್ಕೆ ಈಗ ಮತ್ತೆ ತೀರ್ಮಾನ ಯಾಕೆ ಮಾಡಬೇಕು ? ಹೀಗೆ ಮಾಡು–ವುದಾದರೆ ಅವರಿಗೆ ಟರ್ಮಿನೇಟ್ ಯಾಕೆ ಮಾಡಬೇಕು ? ಟರ್ಮಿನೇಟ್ ಮಾಡತಕ್ಕಪರಿಸ್ಥಿತಿ ಏಕೆ ಉದ್ಭವವಾಯಿತು ? ಹೆಚ್. ಎಂ. ಎಸ್. ಗೆ ಹೋಗುತ್ತಾ ಇದ್ದರೆ ರೀಎನ್‌ಸ್ಟೇಟ್ ಮಾಡುತ್ತಿದ್ದರು, ಕೆಲಸವೂ ಉಳಿಯುತ್ತಿತ್ತು. ಇನ್‌ಟೆಕ್‌ಗೆ ಹೋದುದರಿಂದ ಕಲಸವೂ ಹೋಯಿತು. ಮಾನ್ಯ ಲೋಕಯ್ಯಶೆಟ್ಟಿಯವರು ಒಬ್ಬ ಜವಾಬ್ದಾರಿ ಪಕ್ಷದ ನಾಯಕರು. ಹೇಳಿಕೆ ಕೊಟ್ಟಿದ್ದಾರೆ. ಅದನ್ನು ನಾವು ನಂಬಬೇಕು. ಏಕೆಂದರೆ it is signed by him. It is a letter to the Editor which appeared in Mungaru, a leading daily newspaper in South Kanara. ಆ ಕೆಲಸವನ್ನು ತಾವು ಇವತ್ತು ಮಾಡುವುದಿದ್ದರೆ, ತಾವು ಏಕೆ ಒತ್ತಾಯ, ಮಾಡಬೇಕು ? ಅವರನ್ನು ಏಕೆ ಟರ್ಮಿನೇಟ್ ಮಾಡಬೇಕು ? ಆದ್ದರಿಂದ ತಮ್ಮ ಸರ್ಕಾರ ಅಗಲೀ

ತಮ್ಮ ಅಧಿಕಾರ ಆಗಲೀ ಇವತ್ತು ಈ ರೀತಿ ಬಲಿ ತೆಗೆಯಬೇಕೆಂದು ಆಲೋಚನೆ ಮಾಡಿದರೆ ಅದರಿಂದ ಯಾವ ರೀತಿಯ ಪರಿಣಾಮವೂ ಆಗುವುದಿಲ್ಲ. ಇದರಿಂದ ಕಾರ್ಮಿಕರ ಮನೋಬಲ ಜಾಸ್ತಿಯಾಗುತ್ತದೆ. ಇದರಿಂದ ತಾವು ಬಗ್ಗುಬಿಡುತ್ತೀರೆಂದು ಹೇಳಿದರೆ ಆದರಿಂದ ಸಾರ್ಥಕವಾಗುವುದಿಲ್ಲವೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಅಧ್ಯಕ್ಷರೇ, ಇವತ್ತು ತಮ್ಮ ಕೈಗಾರಿಕಾ ಸಚಿವರ ಒಂದು ಹೇಳಿಕೆಯನ್ನು ತಮ್ಮ ಗಮನಕ್ಕೆ ತರುತ್ತೇನೆ. ಅದರಿಂದ ೨೦-೮-೮೭ರಂದು ಒಂದು ಹೇಳಿಕೆ ಬಂದಿದೆ. ಮಾನ್ಯ ಸಚಿವರು ಶಿವಮೊಗ್ಗದಲ್ಲಿ ಆಗಸ್ಟ್ ೧೮ರಂದು ಈ ಹೇಳಿಕೆ ಕೊಟ್ಟಿದ್ದಾರೆ. ೨೦-೮-೮೭ ಮುಂಗಾರಿನಲ್ಲಿ ಇದು ಬಂದಿದೆ. ಬೇಕಾದರೆ ಅದನ್ನು ನಾನು ಇಲ್ಲಿ ಪಾಸ್ ಆನ್ ಮಾಡುತ್ತೇನೆ

''ಮಂಗಳೂರು ಕೆಮಿಕಲ್ಸ್ ಮತ್ತು ಫರ್ಟಿಲೈಸರ್ಸ್ ಕಾರ್ಖಾನೆಯಲ್ಲಿ ಹಾಲಿ ಉದ್ಭವಿಸಿರುವ ಬಿಕ್ಕಟ್ಟನ್ನು ಪರಿಹರಿಸಲು ಕ್ರಮ ತೆಗೆದುಕೊಳ್ಳುವಂತೆ ಕಾರ್ಮಿಕ ಕಮಿಷನರ್‌ರಿಗೆ ಸೂಚನೆ ನೀಡಿರುವುದಾಗಿ ಕೈಗಾರಿಕಾ ಮತ್ತು ವಿದ್ಯುತ್ ಸಚಿವರು ತಿಳಿಸಿದರು. ಎಂ.ಸಿ.ಎ.ನ ೫೫ ಜನ ಕೆಲಸಗಾರರನ್ನು ಸಸ್ಪೆಂಡ್ ಮಾಡಿದ ಮೇಲೆ ಉಳಿದ ಕಾರ್ಮಿಕರು ಕೆಲಸಕ್ಕೆ ಹೋಗಲು ಬಿಡುತ್ತಿಲ್ಲ. ಇಲ್ಲಿ ಉದ್ಭವಿಸಿರುವ ಬಿಕ್ಕಟ್ಟಿಗೆ ಕಾಂಗ್ರೆಸ್-ಐ ಮತ್ತು ಜನತಾ ಪಕ್ಷ ಕಾರ್ಮಿಕ ಸಂಘಗಳ ನಡುವೆ ನಾಯಕತ್ವಕ್ಕೆ ನಡೆದಿರುವ ಪೈಪೋಟಿ ಕಾರಣವೆಂದು ತಿಳಿಸಿದರು''

ಈ ವಿಷಯವನ್ನು ತಮ್ಮ ಗಮನಕ್ಕೆ ಏಕೆ ತಂದಿದ್ದೇನೆಂದರೆ, ೧೮ಕ್ಕೆ ಹೇಳಿಕೆ ಕೊಟ್ಟು ಪರಿಹರಿಸಬೇಕೆಂದು ಕಾರ್ಮಿಕ ಕಮಿಷನರ್‌ರಿಗೆ ತಾವು ಆದೇಶ ಕೊಟ್ಟಿದ್ದೇವೆಂದು ಹೇಳಿದಿರಿ. ಏಕೆಂದರೆ ತಮ್ಮ ಹೇಳಿಕೆಯನ್ನು ನಾವು ಗಂಭಿರವಾಗಿ ತೆಗೆದುಕೊಳ್ಳಬೇಕು. ತಾವು ಹೇಳಿಕೆ ಕೊಟ್ಟಮೇಲೆ ತಮ್ಮ ಕಾರ್ಮಿಕ ಕಮಿಷನರ್‌ರು ಅವರಿಗೆ ಹೇಳಬೇಕಾಗುತ್ತದೆ. ಆದರೆ ಒಂದು ದಿವಸವಾಗಲೀ ಕನ್ಸಿಲಿಯೇಷನ್‌ಗಾಗಲೀ ಅಥವಾ ಇತರ ವಿಷಯಗಳಿಗಾಗಲೀ ಕಾರ್ಮಿಕ ಕಮಿಷನರ್‌ರನ್ನಾಗಲೀ, ಅಸಿಸ್ಟೆಂಟ್ ಕಾರ್ಮಿಕ ಕಮಿಷನರ್‌ರನ್ನಾಗಲೀ ಬೆಂಗಳೂರಿಗಾಗಲೀ, ಮಂಗಳೂರಿಗಾಗಲೀ ಕರೆಸಿಲ್ಲ. ಹಾಗಾದರೆ ಒಬ್ಬ ಮಂತ್ರಿಗಳ ಹೇಳಿಕೆಗೆ ಏನು ಅರ್ಥ ? Where is the crediblity of your State Government ? Whatever the discussion, once the Labour Commissioner has called the meeting and it was on 21st July. The Assistant Labour Commissioner has called on 2nd or 3rd July. ತಾವು ಹೇಳಿಕೆ ಕೊಟ್ಟ ಮೇಲೆ ಕೂಡಾ ಇದರ ಬಗ್ಗೆ ಗಂಭೀರವಾಗಿ ಪರಿಗಣನೆಗೆ ತೆಗೆದುಕೊಂಡಿಲ್ಲವೆಂದರೆ ಏನು. ೫೦ ಲಕ್ಷ ಉತ್ಪಾದನೆ ಮಾಡತಕ್ಕ ಕೈಗಾರಿಕೆ ಇವತ್ತು ನಿಂತುಹೋಗಿದೆ. ಸುಮಾರು ೩೫ ಕೋಟಿ ರೂ. ನಷ್ಟ ಆಗುವ ಕೈಗಾರಿಕೆಯಲ್ಲಿ ಕಾರ್ಮಿಕ ಕಮಿಷನರ್ ಅವರು ತಮ್ಮ ಆದೇಶ ಮೀರಿ ಯಾಕೆ ಹೋದರು ? Is there any invisible authority in your Government which directs the Labour Ministry or the Industry Ministry ?ದಯವಿಟ್ಟು ತಾವು ಹೇಳಬೇಕು. ಒಂದು ದಿವಸ ಕೂಡಾ ಯಾರನ್ನೂ ಕರೆದಿಲ್ಲ. ಏಕೆಂದರೆ Section 10 of the Industrial Disputes Act invest powers so the Labour commissioner. ಅವರು ಸಮನ್ ಮಾಡತಕ್ಕಂಥ ಅಧಿಕಾರ ಇದೆ. ಮ್ಯಾನೇಜ್‌ಮೆಂಟ್‌ನ್ನು ಸಮನ್ ಮಾಡಬಹುದು. ಎಲ್ಲರನ್ನೂ ಸಮನ್ ಮಾಡಬಹುದು. ಈ ಕೆಲಸ ಮಾಡಲಿಲ್ಲ. ಇವತ್ತು ಮಾನ್ಯ ಕಾರ್ಮಿಕ ಸಚಿವರು ಒಂದು ಹೇಳಿಕೆಯನ್ನು ಕೌನ್ಸಿಲ್‌ನಲ್ಲಿ ಬಹುಶಃ ಕೊಟ್ಟರು. ಅದರ ಫುಲ್ ಟೆಕ್ಸ್ಟ್ ಅನ್ನು ನಾನು ನೋಡಲಿಲ್ಲ. ಪತ್ರಿಕೆಯಲ್ಲಿ ಏನು ಬಂತು ಅದರ ಮೇಲೆ ನಾನು ಕಾಮೆಂಟ್ ಮಾಡುತ್ತಿದ್ದೇನೆ. ಬೇರೆ ವಿಷಯಗಳು ಇರಬಹುದು. ಇದರ ಬಗ್ಗೆ ಪೂರ್ಣವಾದ ಮಾಹಿತಿ ಇಲ್ಲದ ಕಾರಣ ಇಷ್ಟು ನಾನು ಹೇಳುತ್ತೇನೆ. Essential Services Act ನಲ್ಲಿ ಬರುತ್ತದೆ ಎಂದು ಅವರು ಹೇಳಿದ್ದಾರೆ. It comes under the Essential Services Act ಸ್ಟ್ರೈಕ್ ಅನ್ನು ಬ್ಯಾನ್ ಮಾಡಬಹುದು. ಆದರೆ ಯಾವ ಸ್ಟೇಜ್‌ನಲ್ಲಿ ಮಾಡುತ್ತಾರೆ ? ನಿಮ್ಮ ಪ್ರಯತ್ನ ಏನಿದೆ ? ೬೪ ದಿವಸಗಳ ಕಾಲ ನಡೆದು ೩೩ ಕೋಟಿ ರೂಪಾಯಿ ನಷ್ಟವಾಗಿದೆ. Whether the Government, either the Industries Department or the Labour Ministry, has moved an inch in this direction ? ತಾವು ಡಿಸ್‌ಕಷನ್‌ಗೆ ಬರೆದಿರಿ. ೬೪ ದಿವಸಗಳಲ್ಲಿ ಅಸಿಸ್ಟೆಂಟ್ ಲೇಬರ್ ಕಮಿಷನರ್ ಅವರನ್ನು ಕರೆದಿದ್ದರು. ಒಂದು ಬಾರಿ ಲೇಬರ್ ಕಮಿಷನರ್ ಕರೆದಿದ್ದರು. ಆದರೆ ಕನ್ಸಿಲಿಯೇಷನ್‌ಗೆ ಪ್ರಯತ್ನ ಮಾಡಲಿಲ್ಲ You have failed to resolve the dispute. After declaring it a

dispute and calling for conciliation, if it has failed in the conciliation...ಅಂತ ಹೇಳಿದ್ದರೆ, ಸರಿ ತಾವು ಕೊಡತಕ್ಕ ಹೇಳಿಕೆ ಸರಿ ಎಂದು ನಾವು ತಿಳಿದುಕೊಳ್ಳಬಹುದು

ಶ್ರೀ ಎಸ್. ಕೆ. ಕಾಂತಾ.—ಇಲ್ಲಿ ನಾನು ಈ ಖಾತೆಯನ್ನು ವಹಿಸಿಕೊಂಡ ನಂತರ ಯಾವುದೇ ರೀತಿಯಿಂದ ಒಂದು ಪಕ್ಷ ಬೇರೆ ಪಕ್ಷ ಎಂದು ವಿಚಾರ ಮಾಡಿಲ್ಲ. ತಾವು ಕನ್ಸಿಲಿಯೇಷನ್ ಆಗಲಿಲ್ಲವೆಂದು ಹೇಳಿದ್ದೀರಿ. ಕನ್ಸಿಲಿಯೇಷನ್ ಫೈಲ್ಯೂರ್ ರಿಪೋರ್ಟ್ ಮಂಗಳೂರು ಅಸಿಸ್ಟೆಂಟ್ ಕಮಿಷನರ್‌ರವರಿಂದ ಬಂದಿದೆ. ಇದು ಇಂಡಿಸ್ಟ್ರಿಯಲ್ ಡಿಸ್‌ಪ್ಯೂಟ್ ಆ್ಯಕ್ಟ್‌ನಲ್ಲಿ ಬರುತ್ತದೆ. ಇಲ್ಲದಿದ್ದರೆ ಕನ್ಸಿಲಿಯೇಷನ್ ಮಾಡಲಿಕ್ಕೆ ಆಗುವುದಿಲ್ಲ. ಮೂರು ಸಲ ಮೀಟಿಂಗ್ ಆಗಿದೆ. ಶ್ರೀ ಅಡ್ಯಂತಾಯ ಅವರು ಕೂಡ ಹೋಗಿದ್ದರು.

ಶ್ರೀ ಎಂ. ವೀರಪ್ಪ ಮೊಯಿಲಿ.—ಡಿಸ್‌ಕಷನ್ ಒಮ್ಮೆ ಆಗಿದೆ. Factully I am correct.

ಶ್ರೀ ಎಸ್. ಕೆ. ಕಾಂತಾ.—ಫೈಲ್ಯೂರ್ ರಿಪೋರ್ಟ್ ನನಗೆ ಬಂದಿದೆ. ಸ್ಟ್ರೈಕ್ ಮಾಡಿದ ಮೇಲೆ ಅವರೂ ಒಂದೂ ಡಿಮ್ಯಾಂಡ್ ಕೊಡದಿದ್ದರೂ ಕೂಡ, ಬೇಡಿಕೆ ಇಲ್ಲದಿದ್ದರೂ ಕೂಡ ಜಾಯಿಂಟ್ ಮೀಟಿಂಗ್ ಆಗಿ ಫೈಲ್ಯೂರ್ ರಿಪೋರ್ಟ್ ಬಂದಿದೆ. ತಾವು ಕಳಿಸಿದ ಎಷ್ಟೋ ಲೆಟರ್‌ಗಳನ್ನು ಲೇಬರ್ ಕಮಿಷನರ್, ಅಸಿಸ್ಟೆಂಟ್ ಲೇಬರ್ ಕಮೀಷನರ್‌ಗೆ ಕಳಿಸಿ ಇದರ ಬಗ್ಗೆ ತ್ವರಿತವಾಗಿ ಸಮಸ್ಯೆಯನ್ನು ಬಗ್ಗೆಹರಿಸುವ ಕೆಲಸ ಮಾಡಿ ಎಂದು ಹೇಳಿದ್ದೇನೆ. ಏಕೆಂದರೆ ಬೇಡಿಕೆ ಇಲ್ಲಿ ಏನು ಇಲ್ಲ. ಅವರಲ್ಲಿ ಒಳಗೊಳಗೇ ಯೂನಿಯನ್ ಜಗಳ ನಡೆದಿದ್ದುದು ಇದೆ. ಇದನ್ನು ಯಾವ ರೀತಿ ಬಗೆಹರಿಸಬೇಕೆಂದು ತಾವೇ ನಿರ್ಣಯ ಕೊಡಿ. ಲೇಬರ್ ಡಿಪಾರ್ಟಮೆಂಟ್ ಯಾವರೀತಿ ಇಂಟರ್‌ವೀನ್ ಮಾಡಬೇಕೆಂದು ತಾವು ಈ ಸದನದಲ್ಲಿ ಹೇಳಿ.

ಶ್ರೀ ಎಂ. ವೀರಪ್ಪ ಮೊಯಿಲಿ.—ಈಗ ಅಸಿಸ್ಟೆಂಟ್ ಲೇಬರ್ ಕಮಿಷನರ್ ಹತ್ತಿರ ಡಿಸ್‌ಕಷನ್ ನೋಟೀಸ್ ಬಂದಿದೆ. "Today I am required by the Commissioner of Labour to inform you that you are requested to meet me on 21-7-87. This is the notice dated 20-7-87, It says, "Meet the Assistant Labour Commissioner". Is it for concilation ? You call for all the records. I am speaking on facts. I don't want to mislead. I had sufficient discussion in this matter. Even with your Labour Commissioner I talked over phone. He said, "I have also asked Mr. Lokaiah Shetty to come, he did not turn up.

ಈ ಪ್ರೊಸಿಡಿಂಗ್‌ನಲ್ಲಿ ಇದೆ ಡಿಮ್ಯಾಂಡ್ ಇಲ್ಲವೆಂದು ತಾವು ಹೇಳುತ್ತೀರಿ. I will send a copy of the proceedings. "21st July 87 Procedings before the Commissioner of Labour on 21st July 87"

೫-೦೦ ಪಿ.ಎಂ.

" Dispute regarding work stoppage at MCF Ltd., Mangalore.

Sri N. M. Adyantaya.—President of MCF Workers Union, and Mangala Workers Association Sri Leelakrishnan, Legal Adviser, Mangala and other office-bearers of the Union present.

The matter is discussed at length.

After the discussion Sri N. M. Adyantaya stated that the following are the pre conditions for calling off the strike. while other pending matters can wait for further discussion after resumption of work "

There are one to six demands. I can send this over to you. This is also signed by the Labour Commissioner. ತಾವು ಹಿಂದೆ ಒಂದು ಸಭೆ ಕರೆಯಾಲಿಲ್ಲ, ಕನ್ಸಲೇಷನ್ ಕರೆಯಾಲಿಲ್ಲ. ೨೧.೭.೮೭ರ ವಿಚಾರ ಬೇರೆ. ನೀವು ಯಾವುದೇ ಸಭೆ ಕರೆಯಾಲಿಲ್ಲ. ಇದರಲ್ಲಿ ಎರಡು ಸಭೆ ಬಿಟ್ಟುಬಿಟ್ಟರೆ, ಯಾವುದೇ ಸಭೆಯನ್ನು, ಯಾವುದೇ ಸಂದರ್ಭದಲ್ಲಿ ಕರೆಯಾಲಿಲ್ಲ.

SRI J. H. PATEL.—Just a minute. I am not trying to score upon. Let us see how best we can settle this. The Assistant Labour Commissioner called for a meeting, no workers attended. On the 7th July another meeting was called and INTUC only attended and asked for suspension of workmen to be taken back.

ಶ್ರೀ ಎನ್. ಎಂ. ಅಡ್ಯಂತಾಯ.—ಅಸಿಸ್ಟೆಂಟ್ ಲೇಬರ್ ಕಮೀಷನರ್ ಒಂದೇ ಒಂದು ಸಭೆ ಕರೆದಿದ್ದರು. ಪ್ರಧಾನ ಕಾರ್ಯದರ್ಶಿಗಳನ್ನು ಮಾತ್ರ ಕರೆದಿದ್ದರು. ಅವರು ಹೋಗಿ ಅಟೆಂಡ್ ಆಗಿದ್ದಾರೆ. ಅಂದಿನ ಪ್ರೊಸೀಡಿಂಗ್ಸ್‌ನಲ್ಲಿ ಅವರ ರುಜು ಕೂಡ ಇರುತ್ತೆ.

SRI J. H. PATEL.—I have got report. Anyway, proceed.

ಶ್ರೀ ಎಂ. ವೀರಪ್ಪ ಮೊಯ್ಲಿ.—ಕಾರ್ಮಿಕ ಆಯುಕ್ತರು, ಮಂಗಳೂರು ವಿಭಾಗ ಅವರು ಪ್ರೊಸೀಡಿಂಗ್ಸ್‌ನ ಕೆಲವು ವಿಚಾರಗಳನ್ನು ಇಲ್ಲಿ ಕಾಣಿಸಿದ್ದಾರೆ. Quite in a haphazard manner, the matter was conducted by Labour Department. ಈ ತರಹ ಮಾಡಿದರೆ ಪರಿಹಾರವಾಗುವುದಿಲ್ಲ. ಏಕೆಂದರೆ ನಾವೆಲ್ಲಾ ಜುಲೈ ೧೩ರಂದು ಮುಖ್ಯಮಂತ್ರಿಯವರನ್ನು ಕಂಡು ಬಂದಿದ್ದೇವೆ. ಇವತ್ತು ಒಂದೂವರೆ ತಿಂಗಳು ಆಯಿತು, ಅವರಾದರೂ ನಮ್ಮನ್ನು ಕರೆಯಬಹುದಿತ್ತು, ಕಾರ್ಮಿಕ ಸಚಿವರಾದರೂ ಕರೆಯಬಹುದಿತ್ತು, because we are interested in the matter.

ಶ್ರೀ ಎಸ್. ಕೆ. ಕಾಂತ.—ತಾವೂ ಕೂಡ ನನ್ನನ್ನು ಭೇಟಿ ಆಗಲಿಲ್ಲ...

ಶ್ರೀ ಎಂ. ವೀರಪ್ಪ ಮೊಯ್ಲಿ.—೭೪ ದಿವಸ ಫ್ಯಾಕ್ಟರಿ ಕ್ಲೋಸ್ ಮಾಡಿ, ೩೫ ಕೋಟಿ ನಷ್ಟ ಮಾಡಿದರೆ ಸರ್ಕಾರ ಜವಾಬ್ದಾರಿ. ನಾವು ಮುಖ್ಯಮಂತ್ರಿಗಳನ್ನು ಭೇಟಿ ಆಗಿದ್ದೆವು...

ಶ್ರೀ ಎಸ್. ಕೆ. ಕಾಂತ.—೧-೭-೮೭ರಿಂದ ಸ್ಟ್ರೈಕ್ ಪ್ರಾರಂಭವಾಯಿತು. ಸ್ಟ್ರೈಕ್ ಪೂರ್ವದಲ್ಲಿ ಡಿಮ್ಯಾಂಡ್ ಇರುತ್ತವೆ. ಬೇಡಿಕೆಗಳ ಮೇಲೆ ಮುಷ್ಕರ ಹೋಗುತ್ತಾರೆ ಎಂಬ ವಿಚಾರ......

ಶ್ರೀ ಎಂ. ವೀರಪ್ಪ ಮೊಯ್ಲಿ.—ಪರಿಹಾರ ಮಾಡುವುದಕ್ಕೆ ಏನು ಪ್ರಯತ್ನ ಮಾಡಿದ್ದೀರಿ, ಅದನ್ನು ಹೇಳಿ. ಬೇಸಿಕ್ ಲೈಸೆನ್ಸ್ ಈ ಸದನದಲ್ಲಿ ಹೇಳುವುದಕ್ಕೆ ಹೋದರೆ ಆಗುತ್ತದೆಯೋ ? ಇವತ್ತು ೭೪ ದಿವಸ ಆಗಿ ಹೋಗಿದೆ. ನೀವೂ ಕರೆಯುವ ಸ್ಥಿತಿಯಲ್ಲಿಲ್ಲ, ನಾವೂ ಕಳಿಸುವ ಸ್ಥಿತಿಯಲ್ಲಿಲ್ಲ. It is late now. As early as 13-7-87 all of us, 13 legislators, met the Hon. Chief Minister we also met the Hon'ble Industries Minister. Unfortunately, you were not there in your Chember on that day. Otherwise, we wanted to meet you. ಆ ಕ್ಷೇತ್ರದಿಂದ ತಾವು ಬಂದಿರುವುದರಿಂದ ಪ್ರಾಮಾಣಿಕವಾದ ಕಳಕಳಿ ಇದೆಯೆಂದು ನಾನು ಕೇಳಿದ್ದೇನೆ ಆದರೆ ನೀವು ಏಕೆ ಬರಲಿಲ್ಲ ಎಂಬುದನ್ನು ಹೇಳುವುದಕ್ಕೆ ಹೋಗಬೇಡಿ. You can take cognisance of it. It is your responsibility. I am not taking offence, I am not alleging anything. As Minister you must have all ears and eyes open when it comes industrial unrest. Highest man in the Minister the Chief Minister, we met. I do not think he is irresponsible. He is more responsible than any one of us. ನಮ್ಮನ್ನು ಏತಕ್ಕೆ ಭೇಟಿ ಮಾಡಲಿಲ್ಲ ಅವರನ್ನು ಏತಕ್ಕೆ ಭೇಟಿ ಮಾಡಲಿಲ್ಲ ಎಂದು ಹೇಳುವುದಲ್ಲ. ನಾವು ಜಿಲ್ಲಾ ಮಂತ್ರಿಗಳನ್ನು ಭೇಟಿ ಮಾಡುವುದಕ್ಕೆ ಆಗಲಿಲ್ಲ. ನಮ್ಮ ಫ್ರೆಂಡ್ಸ್ ವಿಸಿಟ್ ಮಾಡಿದ್ದರು. It is a question which we are all concerned. ಏತಕ್ಕೆಂದರೆ ಸನ್ಮಾನ್ಯ ಮುಖ್ಯ ಮಂತ್ರಿಯವರನ್ನು ನಾವು ಭೇಟಿಯಾಗಿದ್ದೆವು.

ಅಧ್ಯಕ್ಷರು.—ಅವರಿಗೆ ೨೫ ಮಿನಿಟ್ ಕೊಟ್ಟಿದ್ದೆ, ನಿಮ್ಮದು ೨೦ ಮಿನಿಟ್ ಆಯಿತು, ಬೇಗ ಮುಗಿಸಿ.

ಶ್ರೀ ಎಂ. ವೀರಪ್ಪ ಮೊಯಿಲಿ.—ಒಂದು ನಿಮಿಷ, ಬೇಗ ಮುಗಿಸಿಬಿಡುತ್ತೇನೆ. ಸನ್ಮಾನ್ಯ ಮುಖ್ಯಮಂತ್ರಿಯವರು ದೆಹಲಿಗೆ ಹೋದಾಗ ಒಂದು ಹೇಳಿಕೆ ಕೊಟ್ಟಿದ್ದಾರೆ. ದೆಹಲಿಯ ಒಂದು ಪತ್ರಿಕೆಯಲ್ಲಿ ಅವರ ಹೇಳಿಕೆ ಬಂತು. ಸನ್ಮಾನ್ಯ ವಿ. ಪಿ. ಸಿಂಗ್ ಅವರ ಜೊತೆಯಲ್ಲಿ ಹೇಳಿಕೆ ಕೊಟ್ಟಿದ್ದಾರೆ, ವರ್ಕರ್ಸ್ ಪಾರ್ಟಿಸಿಪೇಷನ್ ಇನ್ ಮ್ಯಾನೇಜ್‌ಮೆಂಟ್ ಅಂದರೆ ಆಡಳಿತದಲ್ಲಿ ಕಾರ್ಮಿಕರ ಪಾಲು ಎಂದು ವಿ. ಪಿ. ಸಿಂಗ್‌ರವರ ಜೊತೆಯಲ್ಲಿ ಹೇಳಿಕೆ ಕೊಟ್ಟಿದ್ದಾರೆ. ಆದರೆ ಕಾರ್ಮಿಕರ ಪಾಲು ಬೇಡ, ನ್ಯಾಯವಾಗಿ ಕಾರ್ಮಿಕರ ಹಕ್ಕನ್ನು ಮೂಲಭೂತವಾಗಿರತಕ್ಕಂಥ ಕಾರ್ಮಿಕರ ಹಕ್ಕನ್ನು ಇವತ್ತು ಮನ್ನಣೆ ಮಾಡತಕ್ಕಂಥ ಪರಿಸ್ಥಿತಿ ನಿಮ್ಮ ಸರ್ಕಾರದಲ್ಲಿ ಇದೆಯೋ ಇಲ್ಲವೋ ಎಂಬ ಅನುಮಾನ, ಸಂಶಯ ಬರುತ್ತಿದೆ, ಈ ಇಷ್ಯೂ ನೋಡಿದರೆ, It is for you to resolve because it is still not late. ಆದರೂ ಇವತ್ತು ಡಿಮ್ಯಾಂಡ್ ಹಾಕಲಿಲ್ಲ, ಮತ್ತೊಂದು ಹಾಕಲಿಲ್ಲ ಎಂದರೆ ಹೇಗೆ? ನನ್ನ ಹತ್ತಿರ ಕಾಪೀಸ್ ಆಫ್ ಲೇಬರ್ ಕೋರ್ಟ್ ಪ್ರೊಸೀಡಿಂಗ್ಸ್ ಇದೆ. ಲೇಬರ್ ಕಮಿಷನರ್‌ರವರದ್ದು ಇದೆ, ಮಂಗಳೂರಿನ ಅಸಿಸ್ಟೆಂಟ್ ಲೇಬರ್ ಕಮಿಷನರ್‌ರವರದ್ದು ಇದೆ. Photo stat copies of proceedings of both Labour Commissioner's and of Asst. Labour Commissioner of Mangalore, are available with me. How can both of them report to you that no demands are put? I think we must sack them up. ಡಿಮ್ಯಾಂಡ್ ಕೊಡಲಿಲ್ಲ ಎಂದು ಹೇಳುತ್ತಿದ್ದೀರಿ. ಡಿಮ್ಯಾಂಡ್ ಕೊಡದೆ ಯಾರಾದರೂ ೭೫ ದಿವಸ ಸ್ಟ್ರೈಕ್‌ನಲ್ಲಿರುತ್ತಾರಾ? ವರ್ಕ್ ಸ್ಟಾಪೇಜ್ ಮಾಡುತ್ತಾರೆಯೇ? ದಯವಿಟ್ಟು ಇದನ್ನು ತಾವು ತಿಳಿದುಕೊಳ್ಳಬೇಕಾಗುತ್ತದೆ. You can't very technically *talk* about it. There is substantial damage made to the society, injury made to the basic rights of workers here. ಇದನ್ನು ತಾವು ಗಂಭೀರವಾಗಿ ಆಲೋಚನೆ ಮಾಡಬೇಕಾಗುತ್ತದೆ. ಏತಕ್ಕೆಂದರೆ ೧೯೮೭ರಿಂದ ಒಂದೇ ಸಮನೆ ನಡೆಯುತ್ತಿದೆ. ಎಸೆನ್ಷಿಯಲ್ ಸರ್ವೀಸಸ್ ಆಕ್ಟ್ ಎಂದು ಹೇಳುವಹಾಗೆ ಇದ್ದರೆ, ಇದನ್ನು ಬಿಹಾರದಲ್ಲೂ ಕೂಡಾ ಮಾಡಬಹುದಾಗಿತ್ತು. They could have declared to stop the strike, rather they had conceded. It is a right vested with them. Dont't try to take away by coorcive methods. Termination of five workers and suspension of seven, do not stand to ground. ಕಾರ್ಮಿಕರ ಹಕ್ಕು ಬಂದಾಗ do not stand on prestige. ಇದನ್ನು ದಯವಿಟ್ಟು ಮತ್ತೆ ಮಾಡುವುದಕ್ಕೆ ಹೋಗಬೇಡಿ. ಮಾನ್ಯ ಅಧ್ಯಕ್ಷರೇ, ನಾನು ಹೇಳುವುದು ಇಷ್ಟೇ. ೧೨ ವರ್ಕರ್ಸ್ ಮೇಲೆ ಕ್ರಮ ತೆಗೆದುಕೊಂಡಿದ್ದೀರಿ ಅದನ್ನು ವಾಪಸ್ ತೆಗೆದುಕೊಳ್ಳಬೇಕು. ೫ ವರ್ಕರ್ಸ್ ಏನು ಟರ್ಮಿನೇಟ್ ಆಗಿದ್ದಾರೆ, ಅವರನ್ನು ಕೆಲಸಕ್ಕೆ ತೆಗೆದುಕೊಳ್ಳಬೇಕು. Don't stand on prestige. ಇದನ್ನು ದಯವಿಟ್ಟು ಹಿಂದೆ ತೆಗೆದುಕೊಳ್ಳಿ. ಯಾವುದು ಮೆಜಾರಿಟಿ ಯೂನಿಯನ್ ಇದೆ ಅದಕ್ಕೆ ಮಾನ್ಯತೆ ಕೊಡಿ. ಸೀಕ್ರೆಟ್ ಬ್ಯಾಲೆಟ್ ತೆಗೆದುಕೊಳ್ಳಿ. ಚೆಕಪ್ ಸಿಸ್ಟಮ್ ಆಡಾಪ್ಟ್ ಮಾಡಿ. ಇದರ ಬಗ್ಗೆ ನಿರ್ಣಯ ಮಾಡಿ. ಇಷ್ಟನ್ನು ದಯವಿಟ್ಟು ಮಾಡಿ. ಇದು ಮಂಗಳೂರು ರಿಫೈನರೀಸ್ ಬರತಕ್ಕಂಥ ಪ್ರದೇಶ. ಥರ್ಮಲ್ ಪ್ಲಾಂಟ್ ಬರತಕ್ಕಂಥ ಪ್ರದೇಶ. ಕರ್ನಾಟಕ ರಾಜ್ಯದ ಕೈಗಾರಿಕಾ ಹೆಬ್ಬಾಗಿಲನ್ನು ಮುಚ್ಚತಕ್ಕಂಥ ಕೆಲಸ ಮಾಡುವುದು ಬೇಡ. ಇದು ಇಡೀ ರಾಜ್ಯದ ಕೈಗಾರಿಕಾ ಹೆಬ್ಬಾಗಿಲು ಆಗಲಿಕ್ಕೆ ಇದೆ. ಈ ಹೆಬ್ಬಾಗಿಲನ್ನು ಈ ರೀತಿ ಮುಚ್ಚತಕ್ಕಂಥ ಕೆಲಸವನ್ನು ಕಾರ್ಮಿಕರಾಗಲೀ, ಯಾರೇ ಆಗಲಿ ಮಾಡಬಾರದು. ಆದುದರಿಂದ ದಯವಿಟ್ಟು ನ್ಯಾಯವಾದಂಥ ಒಂದು ಬೇಡಿಕೆಯನ್ನು ಏನು ಅಲ್ಲಿಯ ವರ್ಕರ್ಸ್ ಮುಂದಿಟ್ಟಿದ್ದಾರೆ ಅದನ್ನು ಇವತ್ತು ನಾಳೆಯಲ್ಲಿ ಪರಿಹಾರ ಮಾಡತಕ್ಕ ಪ್ರಯತ್ನ ಮಾಡಿ. ಅಲ್ಲಿ ಹಂಗರ್ ಸ್ಟ್ರೈಕ್ ಮಾಡುತ್ತಿದ್ದಾರೆ. ಈ ಹಂಗರ್ ಸ್ಟ್ರೈಕ್‌ನ್ನು ಅವರು ಬಹಳ ಗಂಭೀರವಾಗಿ ತೆಗೆದುಕೊಂಡಿದ್ದಾರೆ. ಅವರು ಆಸ್ಪತ್ರೆಯಲ್ಲಿದ್ದಾರೆ. ಅಲ್ಲಿ ಕೂಡಾ ಅವರು ಏನನ್ನೂ ತೆಗೆದುಕೊಳ್ಳುವುದಕ್ಕೆ ಸಂಪೂರ್ಣವಾಗಿ ನಿರಾಕರಣೆ ಮಾಡಿದ್ದಾರೆ. ಅಲ್ಲಿ ಕೆಲವು

ಕಾರ್ಮಿಕರು ಡ್ರಿಫ್ಸ್‌ನಲ್ಲಿದ್ದಾರೆ. ಕೆಲವರು ಡ್ರಿಫ್ಸ್ ಕೂಡಾ ನಿರಾಕರಣೆ ಮಾಡಿದ್ದಾರೆ. ಆದುದರಿಂದ ನಾಳೆ ಏನಾದರೂ ಅವರಿಗೆ ಪ್ರಾಣಾಪಾಯ ಆದರೆ ಅದಕ್ಕೆ ನಾವೆಲ್ಲಾ ಈ ಇಡೀ ಸದನ ಜವಾಬ್ದಾರಿಯಾಗಬೇಕಾಗುತ್ತದೆ. ಆದುದರಿಂದ ಈ ಬಗ್ಗೆ ಕೈಗಾರಿಕಾ ಸಚಿವರು, ಕಾರ್ಮಿಕ ಸಚಿವರು, ಈ ಸಮಸ್ಯೆಯನ್ನು ಪರಿಹಾರ ಮಾಡಬೇಕು. ತಾವು ತಕ್ಷಣ ಅಲ್ಲಿಗೆ ಯಾರನ್ನಾದರೂ ಕಳುಹಿಸಬೇಕು. ಇವತ್ತು ಇದರ ಬಗ್ಗೆ ಡಿಸ್ಕಷನ್ ಮಾಡಿ ಇದನ್ನು ಬಗೆಹರಿಸಬೇಕು. ಈ ಬಗ್ಗೆ ಇನ್ನೂ ಕೆಲವರು ಮಾತನಾಡುವವರು ಇದ್ದಾರೆ. ಇಲ್ಲೂ ಕೂಡಾ ಇದರ ಡಿಸ್ಕಷನ್ಸ್ ನಾಳೆ ಮುಂದುವರಿಸಬೇಕು. ಇದರ ಪರಿಹಾರಕ್ಕೆ ಇಲ್ಲಿನ ಡಿಸ್ಕಷನ್‌ಗೆ ಕಾಯಬೇಡಿ. ಕೂಡಲೇ, ತಕ್ಷಣ ಇದನ್ನು ಪರಿಹಾರ ಮಾಡತಕ್ಕ ವಿಷಯದಲ್ಲಿ ಏನೂ ಕಷ್ಟ ಇಲ್ಲ. ಪ್ರಜಾಪ್ರಭುತ್ವದ ರೀತಿಯಲ್ಲಿ ಯಾರದ್ದು ಮೆಜಾರಿಟಿ ಯೂನಿಯನ್ ಇದೆ ಅದನ್ನು ಡಿಸೈಡ್ ಮಾಡಿ. Let it be decided. ಆದರೆ ಕೆಲವು ಕಾರ್ಮಿಕರ ಮನೋಬಲವನ್ನು ಪರೀಕ್ಷೆ ಮಾಡಿ, ದೊಡ್ಡ ಗಂಡಾಂತರಕಾರಿಯಾದ ಪರಿಸ್ಥಿತಿಯನ್ನು ನಿರ್ಮಾಣ ಮಾಡುವುದಕ್ಕೆ ಬಿಡಬಾರದು ಎಂದು ಸರಕಾರದವರನ್ನು ಕೇಳಿಕೊಳ್ಳುತ್ತೇನೆ. ಆಡಳಿತದಲ್ಲಿ ಕಾರ್ಮಿಕರ ಪಾಲು ಎಷ್ಟಿದೆ ಎಂಬುದನ್ನು ಮಾನ್ಯ ವಿ. ಪಿ. ಸಿಂಗ್‌ರವರು ಏನು ಹೇಳಿದ್ದಾರೋ ಅದನ್ನು ಅನುಷ್ಠಾನದಲ್ಲಿ ಮಾಡಿ ಅಟ್‌ಲೀಸ್ಟ್ ಕಾರ್ಮಿಕರಿಗೆ ಮತದಾನದ ಹಕ್ಕನ್ನಾದರೂ ಕೊಡಿ. ಇದಕ್ಕೆ ಮನ್ನಣೆ ಕೊಟ್ಟು ಸಮಸ್ಯೆಯನ್ನು ಪರಿಹಾರ ಮಾಡಬೇಕು. ಕರ್ನಾಟಕ ರಾಜ್ಯದಲ್ಲಿ ಅದರಲ್ಲೂ ಮಂಗಳೂರಿನಲ್ಲಿ ಕೈಗಾರಿಕಾ ವಾತಾವರಣ ಸರಿಯಾದ ರೀತಿಯಲ್ಲಿ ಸೃಷ್ಟಿಸತಕ್ಕಂಥ ಕೆಲಸವನ್ನು ಮಾಡಬೇಕು. ಇದು ಕಾರ್ಮಿಕರ ಜೀವದ ಪ್ರಶ್ನೆ. ಅವರ ಪ್ರಾಣವನ್ನು ರಕ್ಷಣೆ ಮಾಡತಕ್ಕಂಥ ಕೆಲಸ ತಮ್ಮ ಕೈಯಲ್ಲಿ ಇದೆಯೆಂದು ಹೇಳಿ ಇಷ್ಟು ಹೊತ್ತು ಮಾತನಾಡುವುದಕ್ಕೆ ಅವಕಾಶ ಕೊಟ್ಟ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು.—ಮಾನ್ಯ ವೆಂಕಟರಾಮಯ್ಯನವರೇ, ತಾವು ಒಂದೈದು ನಿಮಿಷ ಮಾತನಾಡಿ.

ಶ್ರೀ ಆರ್. ವೆಂಕಟರಾಮಯ್ಯ.—ನಮ್ಮ ರಾಜ್ಯದಲ್ಲಿ ಕೈಗಾರಿಕಾ ವಾತಾವರಣವನ್ನು ಸರಿಯಾಗಿ ಸೃಷ್ಟಿಸಬೇಕು.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಸಭಾಧ್ಯಕ್ಷರೇ, ಇನ್ನೂ ಬಹಳ ಜನ ಮಾತನಾಡುವವರ ಪಟ್ಟಿ ಇದೆ. ಆದ್ದರಿಂದ ನಾಳೆ ಈ ವಿಷಯವನ್ನು ಮುಂದುವರಿಸಬಹುದು.

ಶ್ರೀ ಆರ್. ವೆಂಕಟರಾಮಯ್ಯ.—ನಾನು ಬೇಗ ಮುಗಿಸಿಬಿಡುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ವೆಂಕಟರಾಮಯ್ಯನವರು ಸ್ವಲ್ಪ ಕುಳಿತುಕೊಳ್ಳಬೇಕೆಂದು ವಿನಮ್ರವಾಗಿ ವಿನಂತಿ ಮಾಡಿಕೊಳ್ಳುತ್ತೇನೆ. ಮಾನ್ಯ ಅಧ್ಯಕ್ಷರೇ, ಈ ವಿಷಯವನ್ನು ನಾಳೆ ಮುಂದುವರಿಸುವುದಕ್ಕೆ ನನ್ನ ಅಭ್ಯಂತರವೇನೂ ಇಲ್ಲ. ನಾವು ಮಾಡುವ ಶಾಸನ ರಚನೆಯ ಕೆಲಸವು ಸ್ವಲ್ಪ ಹಿಂದೆ ಬಿದ್ದಿದೆ. ಈ ವಾರದಲ್ಲಿ ಬರೀ ಮೂರು ಮಾತ್ರ ಶಾಸನ ರಚನೆಯನ್ನು ಮಾಡಿದ್ದೇವೆ. ಈ ಮೂರರಲ್ಲಿ ಒಂದು ಮಾತ್ರ ಮುಖ್ಯವಾಗಿತ್ತು. ಈ ಶಾಸನ ರಚನೆ ಸಬ್ಜೆಕ್ಟ್ ಮೇಲೂ ನಾಳೆ ಮಾತನಾಡಬೇಕೆಂದು ಹಾಗೂ ಅವುಗಳನ್ನು ಪಾಸ್ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಬೆಳಿಗ್ಗೆ ೧೧ ಗಂಟೆಗೆ ಬಂದು ೫ ಗಂಟೆ ಆದರೂ ಇಲ್ಲೇ ಕುಳಿತುಕೊಂಡರೆ ಹೇಗೆ?

ಶ್ರೀ ಎ. ಲಕ್ಷ್ಮೀಸಾಗರ್.—ನಾಳೆ ದಿನ ಶಾಸನ ರಚನೆಯ ವಿಷಯವನ್ನು ಅಜೆಂಡಾದಲ್ಲಿ ಬರಲಿ. ನಾಳೆ ನಾನ್ ಅಫಿಷಿಯಲ್ ಬಿಸ್‌ನೆಸ್ ತೆಗೆದುಕೊಂಡರೆ ಅದಕ್ಕೆ ಎರಡು ಅಥವಾ ಎರಡೂವರೆ ಗಂಟೆ ಆಗಬಹುದು. ಇತರ ನಿಯಮ ಕಾಲಿಂಗ್ ಅಟೆನ್ಷನ್ ಎಲ್ಲಾ ಇರುತ್ತದೆ. ಅವುಗಳೂ ನಡೆಯಲಿ. ಅದರ ಜೊತೆಗೆ ಶಾಸನ ರಚನೆ ಕಡೆ ಗಮನ ಕೂಡ ನಡೆಯಬೇಕಾಗಿರುವುದರಿಂದ ಅದನ್ನೂ ಮಾನ್ಯ ಸಭೆ ನಡೆಸಿಕೊಡಬೇಕು.

ಅಧ್ಯಕ್ಷರು —ನಾಳೆ ಶಾಸನ ರಚನೆಯೂ ಇರಲಿ. ಇದೂ ಇರಲಿ.

ಶ್ರೀ ಎ. ಲಕ್ಷ್ಮೀಸಾಗರ್.—ಈ ಮನೆಯಲ್ಲಿ ಪಾಸ್ ಆದ ಬಿಲ್‌ಗಳನ್ನು ವಿಧಾನ ಪರಿಷತ್ತಿನ ಒಪ್ಪಿಗೆಗಾಗಿ ಕಳುಹಿಸಬೇಕಾಗಿರುವುದನ್ನು ಸಭೆಯು ಗಮನಿಸಬೇಕು. ಕೆಲವು ಆರ್ಡಿನೆನ್ಸ್‌ಗಳನ್ನು ಹೊರಡಿಸಿದ್ದರಿಂದ, ಅವುಗಳನ್ನು ಇಲ್ಲಿ ರೀಪ್ಲೇಸ್‌ಮೆಂಟ್ ಮಾಡಬೇಕಾಗಿದೆ. ಈ ಸಭೆಯಲ್ಲಿ ಪಾಸ್ ಆಗುವುದಕ್ಕೆ ವಿಳಂಬವಾದರೆ ಪುನಃ ಆರ್ಡಿನೆನ್ಸ್ ಹೊರಡಿಸಬೇಕಾಗುತ್ತದೆ. ಈ ವಿಷಯ ತಮಗೆ ಗೊತ್ತಿಲ್ಲದೇ ಇರುವ ವಿಚಾರವಲ್ಲ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಅಧ್ಯಕ್ಷರೇ, ಹತ್ತು ದಿವಸ, ಎಂಟು ದಿವಸ ಎಂದು ಸಭೆ ಕರೆದು ಅವಸರ ಮಾಡುವುದರಲ್ಲಿ ಅರ್ಥ ಇಲ್ಲ. ಬೆಳಿಗ್ಗೆ ೧೧ ಗಂಟೆಗೆ ನಾವು ಬಂದು ರಾತ್ರಿ ೮ ಗಂಟೆಯ ವರೆಗೂ ಇಲ್ಲಿ ಕುಳಿತುಕೊಳ್ಳುವುದಕ್ಕೆ ನಾವು ಸ್ಕೂಲ್ ಮಕ್ಕಳಲ್ಲ. ಎಲ್ಲದಕ್ಕೂ ಒಂದು ಟೈಮ್ ಇದೆ,

ಶ್ರೀ ಎ. ಲಕ್ಷ್ಮೀಸಾಗರ್.—ರಾತ್ರಿ ೧೧ ಗಂಟೆವರೆಗೂ ಸದನ ನಡೆದಿರುವ ನಿದರ್ಶನಗಳು ಇವೆ.

ಶ್ರೀ ಎಸ್. ಬಂಗಾರಪ್ಪ.—ಟುಮಾರೋ ಈಸ್ ಫ್ರೈಡೇ, ಈ ವಿಷಯದ ಮೇಲೆ ಮಾತನಾಡುವವರ ಪಟ್ಟಿಯೂ ಬಹಳ ಇದೆ. ಇವರೆಲ್ಲಾ ಮಾತನಾಡಿದ ಮೇಲೆ ಶಾಸನ ರಚನೆಯ ಕೆಲಸವನ್ನೂ ತೆಗೆದುಕೊಳ್ಳೋಣ.

ಶ್ರೀ ಆರ್. ವೆಂಕಟರಾಮಯ್ಯ.—ನೀವು ಶಾಸನ ರಚನಾ ವಿಷಯದಲ್ಲಿ ಹೇಳಿದ್ದೀರಿ. ನಾಳೆ ಶುಕ್ರವಾರ. ಪುನಃ ನಾವು ಸೋಮವಾರ ಸೇರುತ್ತೇವೆ. ಆಗ ತೆಗೆದುಕೊಳ್ಳ ಬಹುದು.

ಶ್ರೀ ಎ. ಲಕ್ಷ್ಮೀಸಾಗರ್.—ಸಪ್ಲಿಮೆಂಟರಿ ಎಸ್ಟಿಮೇಟ್ಸ್ ಅನ್ನು ಸೋಮವಾರ ಮಂಡನೆ ಮಾಡಬೇಕೆಂದು ಬಿ.ಎ.ಸಿ. ಯಲ್ಲಿ ತೀರ್ಮಾನ ಮಾಡಿದ್ದೇವೆ. ಬಿಲ್ ಪಾಸ್ ಮಾಡತಕ್ಕಂಥ ವಿಚಾರದಲ್ಲಿ ಅಭಿಪ್ರಾಯವನ್ನು ಸದಸ್ಯರು ಹೇಳುವಾಗ ವಿಷಯ ಮುಖ್ಯವಾದಂತಾದ್ದು ಇದ್ದಲ್ಲಿ ಅದನ್ನು ಚರ್ಚೆ ಮಾಡಬೇಕಾಗುತ್ತದೆ. ಆ ವಿಚಾರದಲ್ಲಿ ನಾನು ಅಡ್ಡಿ ಬರುವುದಿಲ್ಲ. ಆದರೆ ಸಮಯದಲ್ಲಿ ಕಾಲ ಮಿತಿಯನ್ನು ಕೂಡ ಗಮನದಲ್ಲಿಟ್ಟುಕೊಂಡು ಕಾರ್ಯನಿರ್ವಹಿಸ ಬೇಕಾಗುತ್ತದೆ. ಶಾಸನ ರಚನಾ ಕಾರ್ಯವನ್ನು ಮೊಟಕು ಮಾಡಬಾರದು. ಎಂದು ತಮ್ಮಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ. ಕೆಲವು ತಾತ್ವಿಕವಾದಂತಹ ವಿಚಾರಗಳ ಬಗ್ಗೆ ವಾದವಿವಾದಗಳಿಗೆ ಅವಕಾಶ ಇಲ್ಲ ಎಂದು ನಾನು ಭಾವಿಸುತ್ತೇನೆ. ಕೆಲವು ಆರ್ಡಿನನ್ಸ್ ರಿಪ್ಲೇಸಿಂಗ್ ಬಿಲ್ಸ್ ಇವೆ. ಅದು ಪಾಸ್ ಆಗದಿದ್ದರೆ ಆರ್ಡಿನೆನ್ಸ್‌ನ್ನು ರಿ ಇಷ್ಯೂ ಮಾಡಬೇಕಾಗುತ್ತದೆ. ಇದರ ಬಗ್ಗೆ ಸುಪ್ರೀಮ್ ಕೋರ್ಟಿನ ತೀರ್ಮಾನ ಏನು ಇದೆ ಎಂದು ತಮಗೆ ಗೊತ್ತಿದೆ. ಇಂತಹ ಸಂದರ್ಭಗಳಲ್ಲಿ ಎಲ್ಲಿ ಚರ್ಚೆ ಮಾಡಲು ಅವಕಾಶ ಇದೆ ಅಂದರೆ, ನಾವು ತಂದಿರ ತಕ್ಕಂಥ ತಿದ್ದುಪಡಿ, ಅದು ಮಸೂದೆ ಆಗಿರಬಹುದು. ಅದುವಾದಗ್ರಸ್ತವಾಗಿದ್ದರೆ, ಅದರಲ್ಲಿ ಬಿನ್ನಾಬಿಪ್ರಾಯಕ್ಕೆ ಅವಕಾಶ ಇದ್ದರೆ, ಆಗ ಸ್ವಲ್ಪಸಮಯವನ್ನು ತೆಗೆದುಕೊಳ್ಳಬಹುದು. ನಾನು ಬೇಕಾದರೆ ಸೂಕ್ಷ್ಮವಾದಂತಹ ವಿಚಾರವನ್ನು ತಮ್ಮ ಮುಂದಿಟ್ಟಿದ್ದೇನೆ. ಅವುಗಳನ್ನು ಪರಿಗಣಿಸುವುದಕ್ಕೆ ಸಾಧ್ಯ ಇದೆ ಎಂದು ನನಗನ್ನಿಸುತ್ತದೆ. ಆದುದರಿಂದ ಶಾಸನ ರಚನಾ ಕಾರ್ಯವನ್ನು ಕೂಡ ನಾಳೆ ತೆಗೆದುಕೊಳ್ಳಿ,

ಶ್ರೀ ಎಸ್. ಬಂಗಾರಪ್ಪ.—ಈ ದಿಶೆಯಲ್ಲಿ ಕೆಲವು ಚಿಕ್ಕ ಚಿಕ್ಕವುಗಳನ್ನು ನಾವು ಒಪ್ಪಿಕೊಳ್ಳೋಣ. ಆದರೆ ಕೆಲವು ಬಿಲ್ಸ್ ಸರಳವಾಗಿ ಕಾಣಬಹುದು. ಆದರೆ ಅಲ್ಲಿ ವಿಷಯದ ಪ್ರಾಮುಖ್ಯತೆ ಇರುತ್ತದೆ ಅಂತಹ ವಿಚಾರಗಳು ಬಂದಾಗ ಸಮಯ ಬೇಕಾಗುತ್ತದೆ.

ಅಧ್ಯಕ್ಷರು.—ಈಗ ಮಾನ್ಯ ವೆಂಕಟರಾಮಯ್ಯನವರು ತಮ್ಮ ಮಾತನ್ನು ಮುಗಿಸಿ ಬಿಡಲಿ.

ಶ್ರೀ ಆರ್. ವೆಂಕಟರಾಮಯ್ಯ.—ಅಧ್ಯಕ್ಷರೇ, ಅಕೌಂಟೆಂಟ್ ಜನರಲ್‌ರವರ ರಿಪೋರ್ಟ್ ನೋಡಿದರೆ ೫೭ ಉದ್ಯಮಗಳು ಏನಿವೆ, ಅವುಗಳ ಪೈಕಿ ೬ ಮಾತ್ರ ಜೀವಂತವಾಗಿ ಇವೆ. ಮಿಕ್ಕವುಗಳು Most of them are at the point of being closed. ನಾನು ಕೇಳಿಕೊಳ್ಳುವುದೇನೆಂದರೆ. ಮಾನ್ಯ ಪಟೇಲ್‌ರವರು ಸ್ವಲ್ಪ ಜಾಸ್ತಿ ಕಾಳಜಿ ವಹಿಸಿದ್ದರೆ ಹೀಗೆ ಆಗುತ್ತಿರಲಿಲ್ಲ. ಕ್ಯಾಷುನಟ್ ಡೆವಲಪ್‌ಮೆಂಟ್ ಕಾರ್ಪೊರೇಷನ್‌ನವರು ೫೪ ಲಕ್ಷ ರೂಪಾಯಿಗಳ ಪೇಯ್ಡ್ ಅಪ್ ಕ್ಯಾಪಿಟಲ್ ಇದ್ದರೆ. ಸಂಬಳ ಸಾರಿಗೆ ಮತ್ತಿತರ ಖರ್ಚಿಗಾಗಿ ೩೦ ಲಕ್ಷ ರೂಪಾಯಿಗಳ ಖರ್ಚು ಮಾಡಿದ್ದಾರೆ. ಈ ಬಗ್ಗೆ ಸ್ವಲ್ಪ ಕಂಟ್ರೋಲ್ ಮಾಡಬೇಕಾಗಿತ್ತು. ಇದೇ ರೀತಿಯಲ್ಲಿ ಅಗ್ರೋ ಇಂಡಸ್ಟ್ರೀಸ್ ಕಾರ್ಪೋರೇಷನ್‌ನವರಲ್ಲಿ ೫ ಕೋಟಿ ರೂಪಾಯಿಗಳ ನಷ್ಟವಾಗಿದೆ. ಅಲ್ಲಿನ ೧೩ ಜನ ಅಧಿಕಾರಿಗಳು ತಪ್ಪಿತಸ್ಥರು ಎಂದು ಜ್ಯುಡಿಷಿಯಲ್ ಕಮಿಷನ್‌ನವರು ಎನ್‌ಕ್ವಯರಿ ಮಾಡಿದಾಗ ಕಂಡು ಬಂದಿದೆ. ಆ ಬಗ್ಗೆ ವರದಿಯನ್ನು ಅವರು ಕೊಟ್ಟಿದ್ದಾರೆ ಆದರೆ ತಪ್ಪಿತಸ್ಥರು ಎಂದು ಕಂಡು ಬಂದವರ ಮೇಲೆ ಇದುವರೆಗೂ ಯಾವುದೇ ಕ್ರಮವನ್ನು ತೆಗೆದುಕೊಂಡಿಲ್ಲ. ಇದರಿಂದ ಅಧಿಕಾರಿಗಳಿಗೆ ಸರ್ಕಾರದವರ ಮೇಲೆ ಭಯ ಇರುವುದಕ್ಕೆ ಅವಕಾಶ ಆಗುವುದಿಲ್ಲ, ಮತ್ತು ಅದೇ ಭ್ರಷ್ಟರೆಂದು ಸಾಬೀತು ಮಾಡಿದ ಅಧಿಕಾರಿಗಳು ವಿವಿಧ ಹುದ್ದೆಯಲ್ಲಿ ಮುಂದುವರಿದಿದ್ದಾರೆ. ಅವರ ಮೇಲೆ ಕ್ರಮ ತೆಗೆದುಕೊಳ್ಳದಿದ್ದರೆ, ಅವರು ತಮ್ಮ ಅಧಿಕಾರವನ್ನು ಮುಂದುವರಿಸಿಕೊಂಡು ಹೋಗುತ್ತಾ, ಈ ರೀತಿಯಲ್ಲಿ ನಷ್ಟಕ್ಕೆ ಕಾರಣರಾಗುತ್ತಾರೆ. ಒಟ್ಟು ೧೩೦ ಕೋಟಿ ರೂಪಾಯಿಗಳ ನಷ್ಟ ಇಲ್ಲಿಯ ತನಕ ಆಗಿದೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಅಧ್ಯಕ್ಷರೇ, ಇವತ್ತು ಮಂಗಳೂರಿನಲ್ಲಿ ಮುಷ್ಕರ ನಡೆಸುತ್ತಿರುವವರಲ್ಲಿ ೫ ಜನರ ಪರಿಸ್ಥಿತಿ ಗಂಭೀರವಾಗಿದೆ. ಅವರು ಆಸ್ಪತ್ರೆಯಲ್ಲಿದ್ದಾರೆ. ಔಷಧಿ ತೆಗೆದುಕೊಳ್ಳಲು ಕೂಡ ನಿರಾಕರಣೆ ಮಾಡಿದ್ದಾರೆ. ಆದುದರಿಂದ ಸರಕಾರದವರು ಯಾರನ್ನಾದರೂ ಕಳುಹಿಸಿ, ಅವರ ಜೀವ ಉಳಿಸಿಕೊಳ್ಳುವ ಬಗ್ಗೆ ಪ್ರಯತ್ನ ಮಾಡಬೇಕು.

ಶ್ರೀ ಜೆ. ಎಚ್. ಪಟೇಲ್.—ಈ ವಿಚಾರವಾಗಿ ಸಾಕಷ್ಟು ಚರ್ಚೆ ಇಲ್ಲಿ ಆಗಿದೆ. ನನ್ನ ಮಿತ್ರರಾದ ಎಂ. ಎಸ್. ಕೃಷ್ಣನ್‌ರವರು, ಮತ್ತಿತರರು, ಈ ವಿಷಯದಲ್ಲಿ ತಮ್ಮ ಸಹಕಾರನ್ನು ಕೊಟ್ಟು ಅಲ್ಲಿ ಉಪವಾಸ ಮಾಡುತ್ತಿರುವುದನ್ನು ನಿಲ್ಲಿಸಬೇಕು. ಎಂ. ಸಿ. ಎಫ್. ನಲ್ಲಿಯೂ ಕೂಡ ಅವರು ಉಪವಾಸ ನಿಲ್ಲಿಸಲಿ. ಮಾನ್ಯ ಸದಸ್ಯರಾದ ಪಂಪಾಪತಿಯವರು ಕೂಡ ತಮ್ಮ ಉಪವಾಸವನ್ನು ನಿಲ್ಲಿಸಬೇಕು. ಎಲ್ಲರೂ ನಮ್ಮ ವಿಶ್ವಾಸ ಇಟ್ಟು ಉಪವಾಸವನ್ನು ನಿಲ್ಲಿಸಿ ಸೂಕ್ತ ವಾತಾವರಣದಲ್ಲಿ ಈ ಬಗ್ಗೆ ಚರ್ಚೆ ಮಾಡುವುದಕ್ಕೆ ಅನುಕೂಲ ಮಾಡಿಕೊಡಬೇಕು. ಈ ಸಮಸ್ಯೆಗೆ ಒಂದು ಪರಿಹಾರವನ್ನು ಕಂಡುಕೊಳ್ಳುವುದು ಮುಖ್ಯ, ಈ ದಿಶೆಯಲ್ಲಿ ನಾವು ಚರ್ಚೆ ಮಾಡೋಣ. ಮಾನ್ಯ ಪಂಪಾಪತಿಯವರು ನನ್ನ ಸ್ನೇಹಿತರು. ಆದರೆ ಯಾವುದೇ ಸಮಸ್ಯೆ ಈ ರೀತಿಯಿಂದ ಬಗೆಹರಿಯುವುದಿಲ್ಲ. ಆದುದರಿಂದ ನಾನು ಮಾನ್ಯ ಪಂಪಾಪತಿಯವರಲ್ಲಿ ಮತ್ತು ಮಂಗಳೂರು ಕೆಮಿಕಲ್ಸ್ ಮತ್ತು ಫರ್ಟಿಲೈಸರ್ಸ್‌ನ ಮುಷ್ಕರ ನಿರತರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಅವರು ತಮ್ಮ ಉಪವಾಸವನ್ನು ನಿಲ್ಲಿಸಿ ಸಂಬಂಧಪಟ್ಟವರು ಸೂಕ್ತ ಚರ್ಚೆಯ ಮೂಲಕ ಒಂದು ಇತ್ಯರ್ಥಕ್ಕೆ ಬರುವಂತೆ ಅನುಕೂಲ ಮಾಡಿಕೊಡಬೇಕು. ನಾವು ವಿಷಯದ ಬಗ್ಗೆ ಪೂರ್ಣ ನಿಗಾ ಇಟ್ಟು ಸಮಸ್ಯೆಯನ್ನು ಇತ್ಯರ್ಥಪಡಿಸಲು ಪ್ರಯತ್ನ ಮಾಡುತ್ತೇವೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಕೈಗಾರಿಕಾ ಸಚಿವರು ಕೊಟ್ಟಂಥ ಸೂಚನೆ ಬಹುಶಃ ಸರಿಯಾಗಿದೆ. ಅವರ ಪ್ರಾಣ ಹೋದರೆ ಇಷ್ಟೆಲ್ಲಾ ಚರ್ಚೆ ಮಾಡಿ ಪ್ರಯೋಜನವಿಲ್ಲ ಮಾನ್ಯ ಪಂಪಾಪತಿಯವರ ವಿಚಾರ ಹೇಳುವುದಕ್ಕಾಗುವುದಿಲ್ಲ. ಹೇಗಾದರೂ ಮಾಡಿ ಇದನ್ನು ಪರಿಹಾರ ಮಾಡಲೇಬೇಕೆಂಬ ಇಚ್ಛೆ ಸರಕಾರಕ್ಕೆ ಇದೆಯೆಂದು ಹೇಳಿದ ಕಾರಣದಿಂದ ನಾನೂ ಕೂಡ ಪಂಪಾಪತಿಯವರನ್ನು ಮತ್ತು ಇಂಟಕ್ ಕಾರ್ಮಿಕರನ್ನೂ ಕೂಡ ಕಾರ್ಮಿಕರ ಜೊತೆಯಲ್ಲಿ ಕೈಗೂಡಿಸಿ ಸತ್ಯಾಗ್ರಹವನ್ನು ನಿಲ್ಲಿಸಿ ಬಿಡಲಿ ಕಾರ್ಮಿಕ ಸಚಿವರು ಹೇಳಿರುವುದನ್ನು ವಿಶ್ವಾಸಕ್ಕಿಟ್ಟುಕೊಂಡು ಸತ್ಯಾಗ್ರಹವನ್ನು ನಿಲ್ಲಿಸಲಿ ಎಂದು ಈ ಸದನದ ಮೂಲಕ ಕೋರುತ್ತೇನೆ. ಅದೇ ರೀತಿ ಶ್ರೀ ಎಂ. ಎಸ್. ಕೃಷ್ಣನ್‌ರವರೂ ಕೂಡ ಪಂಪಾಪತಿಯವರಿಗೆ ಹೇಳಲಿ.

ಶ್ರೀ ಆರ್. ವೆಂಕಟರಾಮಯ್ಯ.—ಹೀಗೆ ಕೆಲವು ಪಬ್ಲಿಕ್ ಅಂಡರ್ ಟೇಕಿಂಗ್‌ಗಳಲ್ಲಿ ಕೆಲವು ಮಾತ್ರ ನಡೆಯುತ್ತಿದೆ ಅದರಲ್ಲಿ ಎನ್.ಜಿ.ಇ.ಎಫ್ ಚೆನ್ನಾಗಿ ನಡೆಯುತ್ತಿದೆ. ಇಂಥವಕ್ಕೆ ನೀವು ಏನು ಮಾಡಬೇಕೆಂದರೆ ಬಂಡವಾಳವನ್ನು ಕೊಡಿ ಹಾಕಬೇಕು. ಆದರೆ ಇಜಿಗೆ ಏಕೆ ಷೇರು ಮಾರಿದರೋ ಗೊತ್ತಿಲ್ಲ. ಒಟ್ಟಿನಲ್ಲಿ ರಾಜ್ಯ ಸರಕಾರ ಇದರಲ್ಲಿ ಎಡವಿದ್ದಾರೆ. ಪಟೇಲರ ಮನಸ್ಥಿತಿಯೇ ಅರ್ಥವಾಗುತ್ತಿಲ್ಲ. ಚೆನ್ನಾಗಿ ನಡೆಯುತ್ತಿದ್ದ ಕಂಪನಿಯ ಷೇರುಗಳನ್ನು ವೆಸ್ಟ್ ಜರ್ಮನಿಯ ಕಂಪನಿಗೆ ಮಾಡಲೇಬಾರದಿತ್ತು.

ಈಗ ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ, ಬೆಂಗಳೂರು ಇದರ ಎಂಪ್ಲಾಯೀಸ್ ಸ್ಟ್ರೈಕ್ ಮಾಡುತ್ತಿದ್ದಾರೆ. ನಮ್ಮ ಕರ್ತವ್ಯ ಏನು ? ವರ್ಕರ್ಸ್‌ಗೆ ಸಹಾಯ ಮಾಡಬೇಕು. ಇದು ಪಟೇಲರಿಗೆ ಅರ್ಥವಾಗುತ್ತದೆಯೋ ಇಲ್ಲವೋ ಗೊತ್ತಿಲ್ಲ. ನಮ್ಮ ಸರಕಾರದವರು ಬ್ಯಾಂಕ್‌ಗೆ ಸಹಾಯವಾಗಲಿ ಎಂದು ಹೋಮ್ ಗಾರ್ಡ್ಸ್‌ನ್ನು ಕೊಟ್ಟಿದ್ದಾರೆ. ಅವರು ಆಲ್ಟರ್‌ನೇಟಾಗಿ ಕೆಲಸ ಮಾಡುತ್ತಿದ್ದಾರೆ. ೧೫೦೦ ಜನ ಈಗಲೂ ಸ್ಟ್ರೈಕ್ ಮಾಡುತ್ತಿದ್ದು ಕೂಡಲೇ ಸರಕಾರ ತನ್ನ ಹೋಮ್‌ಗಾರ್ಡ್ಸ್ ಅನ್ನು ವಿತ್‌ಡ್ರಾ ಮಾಡಬೇಕು. ಗಲಾಟೆಯಾಗದ ಹಾಗೆ ಬೇಕೆಂದರೆ ಪ್ರೊಟೆಕ್ಷನ್ ಕೊಡಲಿ.

ಹಾಗೆಯೇ ಕೆ.ಜಿ.ಎಫ್ ನಲ್ಲಿ ಬಿಜಿಎಂಎಲ್ ಇದೆ. ಇವರು ಅದು ಸೆಂಟ್ರಲ್ ಗವರ್ನ್‌ಮೆಂಟ್ ಅಂಡರ್‌ಟೇಕಿಂಗ್, ನಮಗೇನು ಎನ್ನುತ್ತಿದ್ದಾರೆ. ಅಲ್ಲಿ ಆಗಿರುವುದು ಇಷ್ಟೇ, ಮ್ಯಾನೇಜ್‌ಮೆಂಟ್‌ನವರು ನ್ಯಾಷನಲ್ ಗೋಲ್ಡ್ ರೇಟಿನಲ್ಲಿ ಕೊಡುತ್ತೇವೆ ಎನ್ನುತ್ತಿದ್ದು ಕಾರ್ಮಿಕರು ಅದಕ್ಕೆ ಒಪ್ಪದೆ ಇಂಟರ್ ನ್ಯಾಷನಲ್ ಗೋಲ್ಡ್ ರೇಟಿನಲ್ಲಿ ಕೊಡಿ ಎಂದು ಒತ್ತಾಯಿಸುತ್ತಿದ್ದಾರೆ. ಇಂಟರ್ ನ್ಯಾಷನಲ್ ರೇಟಿನಲ್ಲಿ ಕೊಟ್ಟರೂ ಫ್ಯಾಕ್ಟರಿ ಇನ್ನೂ ೫೦ ವರ್ಷ ಸುಖವಾಗಿ ನಡೆಯುತ್ತಿದೆ. ಇದೇ ನೆಪ ಇಟ್ಟುಕೊಂಡು ಮ್ಯಾನೇಜ್‌ಮೆಂಟ್ ವರ್ಷ ವರ್ಷ ೧೦೦೦ ಜನರನ್ನು ರಿಟ್ರೆಂಚ್ ಮಾಡುವುದು ಮನೆಗೆ ಕಳಿಸುವುದು ಮಾಡುತ್ತಿದ್ದಾರೆ. ನ್ಯಾಷನಲ್ ಗೋಲ್ಡ್ ಮಾರ್ಕೆಟ್‌ನಲ್ಲಿ ಬಂಗಾರವನ್ನು ಮಾರಿ ವರ್ಕರ್ಸ್‌ಗೆ ಏಕೆ

ಅನ್ಯಾಯ ಮಾಡುತ್ತಿದ್ದಾರೆಂದು ಸರಕಾರ ಅವರನ್ನು ಕೇಳಬೇಕು, ಬಿಸಿನೆಸ್ ಲೈನಿನಲ್ಲಿ ಇಂಡಸ್ಟ್ರಿಯನ್ನು ನಡೆಸುವುದಕ್ಕೆ ಆಗುವುದಿಲ್ಲ. ಹಾಗೆಯೇ ಯುನೈಟೆಡ್ ಬ್ರುವರೀಸ್ ಸ್ಟ್ರೈಕ್ ಆಗಿದೆ. ಪಟೇಲರು ಇದರ ಬಗ್ಗೆ ಇಂಟರ್‌ವೀನ್ ಆಗಬೇಕು. ಮ್ಯಾನೇಜ್‌ಮೆಂಟಿನವರು ನೌಕರರಿಗೆ ಮೋಸ ಮಾಡುತ್ತಿದ್ದಾರೆ. ಮೊನ್ನೆ ತಾನೇ ೫೦೦ ಜನ ನೇಕಾರರು ರಾಣೆಬೆನ್ನೂರಿನಿಂದ ಬಂದಿದ್ದು ಅದರಲ್ಲಿ ೩೦೦ ಜನ ಹೆಂಗಸರೇ ಬಂದಿದ್ದರು. ಒಂದು ಲಕ್ಷ ಜನ ನೇಕಾರರೇ ಇರಬಹುದು, ಅವರ ಗತಿ ಏನು ಎಂದು ಯೋಚನೆಯನ್ನೇ ಮಾಡುತ್ತಿಲ್ಲ. ಸೆಂಟ್ರಲ್ ಗವರ್ನ್‌ಮೆಂಟಿನ ಟೆಕ್ಸ್‌ಟೈಲ್ ಪಾಲಿಸಿ ಕೂಡ ಅವರಿಗೆ ಅನ್ಯಾಯ ಮಾಡಿದೆ ಎಂದು ಒಪ್ಪುತ್ತೇನೆ. ನೇಕಾರರಿಗೆ ಕೇವಲ ೬೦ ಪರ್ಸೆಂಟ್ ಮಾತ್ರ ನೂಲು ಕೊಡುತ್ತಿದ್ದಾರೆ. ಹೀಗಾದರೆ ಅವರ ಕಥೆ ಏನು ಬದುಕುವುದು ಕಷ್ಟವಾಗುತ್ತಿದೆ. ನೂರರಷ್ಟು ನೂಲನ್ನು ಅವರಿಗೆ ಕೊಡಲಿ. ಈಗ ಅವರಿಗೆ ನೂಲೂ ಇಲ್ಲ ಕೂಲಿಯೂ ಇಲ್ಲ ಎನ್ನುವ ಪರಿಸ್ಥಿತಿ ಬಂದಿದೆ. ಇನ್ನು ಅವರಿಗೆ ಮನೆಗಳನ್ನು ಕಟ್ಟಿಸಿಕೊಟ್ಟಿದ್ದಾರೆ. ಅದು ಬಿದ್ದು ಹೋಗಿದೆ. ಅದಕ್ಕೊಂದು ಕಮಿಷನ್ ಇದೆ ಅವರು ಎನ್‌ಕ್ವೈರಿ ಮಾಡುತ್ತಿದ್ದಾರೆ. ಇನ್ನು ನಮ್ಮ ಕರ್ನಾಟಕ, ಕೋಲಾರ, ಮಂಗಳೂರಿನಲ್ಲಿ ಸುಮಾರು ಐದು ಲಕ್ಷ ಬೀಡಿ ಕೆಲಸಗಾರರು ಇದ್ದಾರೆ ಅವರನ್ನು ಬದುಕುವುದಕ್ಕೂ ಬಿಡುವುದಿಲ್ಲ ಸಾಯುವುದಕ್ಕೂ ಬಿಡುವುದಿಲ್ಲ. ಮೂರು ವರ್ಷದಿಂದ ಅವರಿಗೆ ಕನಿಷ್ಟ ವೇತನವನ್ನು ಫಿಕ್ಸ್ ಮಾಡಿ ಎಂದು ಹೋರಾಟ ಮಾಡಿದ್ದಕ್ಕೆ ಅರವತ್ತು ಪೈಸೆ ಕೊಟ್ಟರು ಮಾನ್ಯ ಮಂಜುನಾಥ್‌ರವರು ಕಾರ್ಮಿಕ ಮಂತ್ರಿಯಾಗಿದ್ದಾಗ. ಈಗ ಮಾನ್ಯ ಕಾಂತಾರವರು ಬಂದಿದ್ದಾರೆ. ಈಗ ಅದನ್ನೂ ಕೂಡಾ ಕೊಡುತ್ತಿಲ್ಲ. ಇನ್ನು ಟೈಲ್ಸ್ ಇಂಡಿಸ್ಟ್ರೀ ಬಗ್ಗೆ ಹೇಳುವುದಾದರೆ ಸೌತ್ ಕೆನಾರದಲ್ಲಿ ಮಿನಿಮಮ್ ವೇಜಸ್ ಅನ್ನು ಡಿಕ್ಲೇರ್ ಮಾಡಿದ್ದಾರೆ ಆದರೆ ಅದನ್ನು ಇಂಪ್ಲಿಮೆಂಟ್ ಮಾಡಿಲ್ಲ. ಅವರಿಗೆ ಏನು ಕೊಡಬೇಕೋ ಅದನ್ನು ಕೊಡುತ್ತಿಲ್ಲ. ಕಾರ್ಮಿಕರಿಗೆ ಮೋಸ ಮಾಡುತ್ತಿದ್ದಾರೆ. ಸರಕಾರ ಕಾರ್ಮಿಕರ ರಕ್ಷಣೆ ಮಾಡದಿದ್ದರೆ ಇಂಡಿಸ್ಟ್ರೀ ಹೇಗೆ ನಡೆಯುತ್ತದೆ. ಕಾರ್ಮಿಕರೂ ಉದ್ಧಾರವಾಗಬೇಕು, ಬಂಡವಾಳ ಹಾಕುವುದು ಸರ್ಕಾರದ ಒಂದೇ ಉದ್ದೇಶವಲ್ಲ. ಕಾರ್ಮಿಕರಿಗೆ ಸರಿಯಾದ ವೇಜ್ ಕೊಡದಿದ್ದರೆ ಬದುಕುವುದಕ್ಕೆ ಹೇಗಾಗುತ್ತದೆ ? ಇದರಿಂದಾಗಿ ಕಾರ್ಮಿಕ ರಂಗದಲ್ಲಿ ಅಶಾಂತಿ ಇಲ್ಲದಿರುವುದಕ್ಕೆ ಸಾಧ್ಯವೇ ಇಲ್ಲವಂತಾಗುತ್ತದೆ. ಒಳ್ಳೆಯ ಅಡ್ಮಿನಿಸ್ಟ್ರೇಷನ್ ಇರಬೇಕು ಪಬ್ಲಿಕ್ ಅಂಡರ್ ಟೇಕಿಂಗ್ಸ್ ಏನಿವೆ ಅದು ಮಾದರಿಯಾಗಬೇಕು. ಏನೂ ಅನುಭವವಿಲ್ಲದವರನ್ನು ಅಲ್ಲಿಗೆ ಹಾಕಿ ಮಾನೇಜಿಂಗ್ ಡೈರೆಕ್ಟರುಗಳನ್ನಾಗಿ ಮಾಡಿ ಅವರನ್ನು ಒಂದು ವರ್ಷ ಅಲ್ಲಿ ಇಟ್ಟಿರುವುದಿಲ್ಲ ಇರುವ ಸಮಯದಲ್ಲೂ ಕೂಡ ಎಷ್ಟು ಅನ್ಯಾಯಗಳನ್ನು ಮಾಡಬೇಕು ಅಷ್ಟು ನಡೆಯುತ್ತದೆ. ಇದರಿಂದಾಗಿ ಉದ್ದಿಮೆ ಹೋಗುತ್ತದೆ. ಕಾರ್ಮಿಕರಿಗೆ ತೊಂದರೆ, ಅನ್ಯಾಯವಾಗುತ್ತದೆ. ಆದುದರಿಂದಾಗಿ ಅಲ್ಲಿಗೆ ಪರಿಣಿತರನ್ನು ಹಾಕಬೇಕು ಪಾಂಡಿತ್ಯವುಳ್ಳವರನ್ನು ಹಾಕಬೇಕು. ಅವರಿಗೆ ಪಾಂಡಿತ್ಯವಿಲ್ಲದಿದ್ದರೆ ಎರಡು ಮೂರು ವರುಷಗಳ ಕಾಲ ಅಲ್ಲಿಯೇ ಬಿಡಿ ನಿನಗೆ ಜವಾಬ್ದಾರಿ ಕೊಟ್ಟಿದ್ದೇನೆ, ಮರ್ಯಾದೆಯಿಂದ ನಡೆದುಕೋ ಎಂದು ಹೇಳಿ. ಅವನು ಹೇಳಿದ್ದೇ ವೇದ ವಾಕ್ಯವೆಂದು ತಿಳಿದುಕೊಂಡು ಅವರನ್ನು ಹಾಗೇ ಬಿಡುವುದು ಬೇಡ. ಉದ್ದಿಮೆ ಮಾಡಬೇಕು. ಕೆಲಸಗಾರರು ಉದ್ಧಾರವಾಗಬೇಕು. ಅವನಿಗೆ ಇನ್‌ಸೆಂಟೀವ್ ಕೊಟ್ಟರೆ ಸಂಬಳ ಹೆಚ್ಚು ಕೊಡುತ್ತೇವೆ ಚೆನ್ನಾಗಿ ಕೆಲಸ ಮಾಡಿ ಎಂದು ಹೇಳಿದರೆ ನಿಜವಾಗಲೂ ಕೂಡ ಕೆಲಸಗಾರರು ಚೆನ್ನಾಗಿ ದುಡಿಯುತ್ತಾರೆ. ಮಾನ್ಯ ಕೃಷ್ಣನ್‌ರವರು ಹೇಳಿದ ಹಾಗೆ ದೇಶಕ್ಕೆ ಅನ್ಯಾಯ ಮಾಡುವುದಿಲ್ಲ. ಇನ್ನು ಮುಂದಾದರೂ ಕಾರ್ಮಿಕ ರಂಗ ಏನು ಕೆಟ್ಟಿದೆ ಅದನ್ನು ಸರಿಪಡಿಸಬೇಕು. ಹಾಂಡ್‌ಲೂಮ್ ವರ್ಕರ್ಸ್ ಏನಿದ್ದಾರೆ ಅವರು ತುಂಬಾ ಜನರಿದ್ದಾರೆ. ಈಗ ೬೦ ಪರ್ಸೆಂಟ್ ನೂಲನ್ನು ಏನು ಕಟ್ ಮಾಡಿದ್ದೀರಿ, ಅದನ್ನು ನೂರು ಪರ್ಸೆಂಟ್‌ಗೆ ರೆಸ್ಟೋರ್ ಮಾಡಬೇಕು. ಹಳೆಯ ಕಾಲದ ಹಾಂಡ್ ಲೂಮ್ ಮಗ್ಗಗಳು ಏನಿದ್ದವು ಅದೇ ರೀತಿ ಈಗಲೂ ಕೂಡ ಇವೆ. ಅದನ್ನು ಬದಲಾವಣೆ ಮಾಡುವುದಕ್ಕೆ ಪ್ರಯತ್ನ ಮಾಡಿ ಹೊಸ ಮಗ್ಗಗಳನ್ನು ಮತ್ತು ಅವರಿಗೂ ರೇಷ್ಮೆಯನ್ನು ಕೊಡಿ ಬದುಕುವುದಕ್ಕೆ ಅವರಿಗೆ ಒಂದು ದಾರಿ ಮಾಡಿ ಕೊಡಿ. ಬೀಡಿ ಕಾರ್ಮಿಕರಿಗೆ ಈಗ ಕೊಡುವ ಮಿನಿಮಮ್ ವೇಜಸ್ ಅನ್ನು ಜಾಸ್ತಿ ಮಾಡಿ ಟೈಲ್ಸ್ ಕಾರ್ಮಿಕರಿಗೆ ಈಗ ೩೦೦-೩೫೦ ರೂಗಳನ್ನು ಕೊಡುತ್ತಿದ್ದೀರಿ ಅದನ್ನು ೫೦೦ ರೂಪಾಯಿಯಾದರೂ ಮಾಡಿ. ಇದರ ಬಗ್ಗೆ ತಕ್ಷಣ ಕಾರ್ಮಿಕ ಮಂತ್ರಿಯವರು ಮತ್ತು ಕೈಗಾರಿಕಾ ಮಂತ್ರಿಯವರೂ ಇಬ್ಬರೂ ಸೇರಿ ತೀರ್ಮಾನ ಕೈಗೊಂಡು ಕಾರ್ಮಿಕ ರಂಗದಲ್ಲಿನ ಜನರು ನೆಮ್ಮದಿಯಿಂದ ಬದುಕುವುದಕ್ಕೆ ಅನುಕೂಲ ಮಾಡಿಕೊಡಬೇಕೆಂದು ಹೇಳುತ್ತಾ ನನಗೆ ಇಷ್ಟು ಹೊತ್ತು ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

೫.೩೦ ಪಿ.ಎಂ.

ಅಧ್ಯಕ್ಷರು.—ಈ ಚರ್ಚೆ ನಾಳೆಯೂ ಮುಂದುವರಿಯುವುದು. ಈಗ ಮಾನ್ಯ ಯಡಿಯೂರಪ್ಪನವರೆ ಮಾತನಾಡಿ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಇಲ್ಲ ಸಾರ್, ನಾಳೆ ಮಾತನಾಡುತ್ತೇನೆ.

ಅಧ್ಯಕ್ಷರು.—ಇಂದಿನ ಸಭೆಯನ್ನು ಇಲ್ಲಿಗೆ ಮುಕ್ತಾಯ ಮಾಡೋಣ. ಸದನವು ಪುನಃ ನಾಳೆ ಬೆಳಿಗ್ಗೆ ಮತ್ತೆ ಸೇರುವುದು.

(ಸದನವು ೫-೩೦ ನಿಮಿಷಕ್ಕೆ ಮುಕ್ತಾಯಗೊಂಡು ಮತ್ತೆ ದಿನಾಂಕ: ೪-೯-೧೯೮೭ ರಂದು ಬೆಳಿಗ್ಗೆ ೯ ಗಂಟೆಗೆ ಮತ್ತೆ ಸಮಾವೇಶಗೊಳ್ಳಲು ನಿರ್ಧರಿಸಿತು.)